
ಪುಸ್ತಕ ಪ್ರಕಾಶನ
ವಿಸ್ಮಯ ಜಗತ್ತು ಸರಣಿ 4

# ‘ಫ್ಲೈಯಿಂಗ್ ಸಾಸರ್ಸ್’ (೧)

ಕೆ.ಪಿ.ಪೂರ್ಣಚಂದ್ರ ತೇಜಸ್ವಿ



# 'ಫ್ಲೈಯಿಂಗ್ ಸಾಸರ್ಸ್'(೧)

ಮೊದಲನೆಯ ಭಾಗ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಪ್ರಕಾಶಕರು
ಪುಸ್ತಕ ಪ್ರಕಾಶನ
೯೧. ೯ನೇ ಮೇನ್ ರಸ್ತೆ
ಸರಸ್ವತೀ ಪುರಂ
ಮೈಸೂರು - ೫೭೦ ೦೦೯

**Flying Saucers:-** An illustrated book of facts and analysis on'Flying Saucers'. Written by Sri K. P. Purnachandra Tejasvi , Hand Post. Mudigere-577 132. Chikamagalure Dist. KARNATAKA

ಎಲ್ಲ ಹಕ್ಕುಗಳೂ ಲೇಖಕರವು. ಬೆಲೆ -೩೬
ಪ್ರಥಮ ಮುದ್ರಣ ೧೯೯೩

ಪ್ರಕಾಶಕರು
**ಪುಸ್ತಕ ಪ್ರಕಾಶನ**
೯೧. ೯ನೇ ಮೇನ್.
ಸರಸ್ವತೀ ಪುರಂ
ಮೈಸೂರು - ೫೭೦ ೦೦೯
ಫೋನ್ ನಂ , 64 154

ಟೈಪ್ ಸೆಟ್ಟಿಂಗ್ ಮತ್ತು ಪುಸ್ತಕ ವಿನ್ಯಾಸ
ಪುಸ್ತಕ ಪ್ರಕಾಶನ

ಮುದ್ರಕರು
ಸ್ಕಂದ ಮುದ್ರಣಾಲಯ. ಮೈಸೂರು - ೫೭೦ ೦೦೯

# ಲೇಖಕರ ಮಾತು

'ಫ್ಲೈಯಿಂಗ್ ಸಾಸರ್'ಗಳು ಈ ಶತಮಾನದ ಪರಮರಹಸ್ಯಗಳಾಗಿವೆ. ಆಧುನಿಕ ಜಗತ್ತಿನ ಅತ್ಯುನ್ನತ ತಂತ್ರಜ್ಞಾನ ಮತ್ತು ವೈಜ್ಞಾನಿಕ ತಿಳುವಳಿಕೆಗೂ ಈ ಒಗಟನ್ನು ಬಿಡಿಸಲು ಸಾಧ್ಯವಾಗಿಲ್ಲ. ಆದರೆ ಇವುಗಳ ಅಸ್ಥಿತ್ವ ನಿಜ ಎಂದು ತೀರ್ಮಾನಿಸಲು ಸಾಧ್ಯವಾಗುವಷ್ಟು ಸಂಶೋಧನೆ ವಿಶ್ಲೇಷಣೆಗಳನ್ನು ವಿಜ್ಞಾನಿಗಳೂ ಖಗೋಲ ಶಾಸ್ತ್ರಜ್ಞರೂ ನಡೆಸಲು ಸಾಧ್ಯವಾಗಿರುವುದೇ ಆಧುನಿಕ ಜಗತ್ತಿನ ಮಹತ್‌ಸಾಧನೆ ಎಂದೆನ್ನಬಹುದು. ಆದರೆ ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಮತ್ತು ವೈಜ್ಞಾನಿಕವಾಗಿ ತಿಳಿಯ ಬಯಸುವವರಿಗೆ ಬಹು ದೊಡ್ಡ ಅಡಚಣೆ ಎಂದರೆ 'ಫ್ಲೈಯಿಂಗ್ ಸಾಸರ್'ಗಳ ಬಗ್ಗೆ ಬಗ್ಗೆ ಹಬ್ಬಿರುವ ಅನೇಕ ವದಂತಿಗಳು , ಕಟ್ಟುಕತೆಗಳು , ರಂಜಕ ಸಾಹಿತ್ಯ , ಕಲ್ಪನಾ ವಿಲಾಸ ,ದಂತ ಕತೆಗಳು , ಇತ್ಯಾದಿ. ಈ ವಿಷಯದ ಬಗ್ಗೆ ಸತ್ಯಾಸತ್ಯಗಳನ್ನು ಸಂಶೋಧಿಸ ಹೋಗುವ ನನ್ನಂಥವರಿಗೇ ದಿಗ್ಭ್ರಮೆ ಹಿಡಿಸುವಷ್ಟು ಇವು ಎದುರಾದರೆ, ಇನ್ನು ತನಿಖೆ ವಿಶ್ಲೇಷಣೆ ಮಾಡ ಹೊರಟ ವಿಜ್ಞಾನಿಗಳ ಕತೆ ಏನಾಗಿರಬಹುದು ಯೋಚಿಸಿ!

ಪಾಶ್ಚಿಮಾತ್ಯ ವಿಜ್ಞಾನಿಗಳ ಅತ್ಯುನ್ನತ ತನಿಖಾ ಮಂಡಲಿಗಳ ವಿಶ್ಲೇಷಣೆಗಳನ್ನು ಮಾರ್ಗಸೂಚಿಯನ್ನಾಗಿ ಇಟ್ಟುಕೊಂಡು ನಾನು ಈ 'ಫ್ಲೈಯಿಂಗ್ ಸಾಸರ್'ಗಳ ಅನೇಕ ಘಟನೆಗಳನ್ನು ನಿಮ್ಮೆದುರು ಇಡುತ್ತಿದ್ದೇನೆ. ಇಲ್ಲಿರುವುವೆಲ್ಲಾ ಅತ್ಯುನ್ನತ ವಿಜ್ಞಾನಿಗಳ ಅಗ್ನಿ ಪರೀಕ್ಷೆಯಲ್ಲಿ ಗೆದ್ದು ಹೊರಬಂದವು. ಯಾವ ರೀತಿಯಿಂದಲೂ ಈವರೆಗೂ ಸುಳ್ಳೆಂದು ಸಾಧಿಸಲು ಅಸಾಧ್ಯವಾಗಿರುವಂಥವು.

ಹಾಗೆಂದ ಮಾತ್ರಕ್ಕೆ ಇವು ನಿಜವೆ? ಇದು ನಿಮ್ಮ ವಿವೇಕ ವಿವೇಚನೆಗೆ ಬಿಟ್ಟಿರುವ ಪ್ರಶ್ನೆ. ಈ ಪುಸ್ತಕದ ಮಹತ್ವ ಇರುವುದು ಇಲ್ಲಿ.

ಇದನ್ನು ಓದುತ್ತಿದ್ದಹಾಗೇ ಈ ಸಂಗತಿಗಳನ್ನು ಕುರಿತು ತಿಳಿಯುತ್ತಿದ್ದ ಹಾಗೇ ನಿಮ್ಮ ಮನಸ್ಸಿನ ಅಲ್ಲೋಲಕಲ್ಲೋಲಗಳಲ್ಲಿ ,ತಳಮಳಗಳಲ್ಲಿ ನಿಮ್ಮ ಮನಸ್ಸಿನ ತಿಳುವಳಿಕೆ ಹೊಸಹೊಸ ಆಯಾಮಗಳನ್ನು ಪಡೆಯುತ್ತಾ ಹೋಗುತ್ತದೆ 'ಯು ,ಎಫ್ ,ಒ'ಬಗ್ಗೆ ನಾವು ತಗೊಳ್ಳುವ ತೀರ್ಮಾನಗಳಿಗಿಂತ ಮುಖ್ಯ ,ತೀರ್ಮಾನಗಳಿಗಾಗಿ ಬುದ್ಧಿ ಮಾಡುವ ಪ್ರಯತ್ನ. ಅದಕ್ಕಾಗಿ ಅತ್ಯಂತ ಎಚ್ಚರಿಕೆಯಿಂದ, ಸಂಶಯ ಗುಮಾನಿಗಳಿಂದ, ಅಭ್ಯಾಸ ಮಾಡಿ ಸತ್ಯವೆಂದು ನಿರ್ವಾಹವಿಲ್ಲದೆ ನಿರ್ವಿವಾದವಾಗಿ ಎಲ್ಲ ಒಪ್ಪಿರುವಂಥವನ್ನು ಮಾತ್ರ ಈ ಪುಸ್ತಕದಲ್ಲಿ ತಿಳಿಸಲು ಪ್ರಯತ್ನಿಸಿದ್ದೇನೆ.

ಈ ಬಗ್ಗೆ ಅಂತಿಮ ತೀರ್ಮಾನ ಹೇಳುವಂಥವರು ಸದ್ಯಕ್ಕೆ ಭೂಮಂಡಲದಮೇಲೆ ಯಾರೂ ಇಲ್ಲ.

ಈ ಪುಸ್ತಕ ನಿಮಗೆ ಕತ್ತೆತ್ತಿ ನಕ್ಷತ್ರಖಚಿತ ನಭೋಮಂಡಲವನ್ನು ವೀಕ್ಷಿಸುವಂತೆ, ಅಲ್ಲಿರುವ ಲಕ್ಷೋಪಲಕ್ಷ ನಕ್ಷತ್ರ ,ಸೂರ್ಯ ,ಗ್ರಹಗಳ ಬಗ್ಗೆ ಕಲ್ಪನೆ ಹರಿಸುವಂತೆ, ಅಲ್ಲಿ ಚಲಿಸುವ ಬೆಳಕುಗಳನ್ನು ಏನಿರಬಹುದಂದು ಚಿಂತಿಸುವಂತೆ ಮಾಡಿದರೆ ಪುಸ್ತಕದ ಉದ್ದೇಶ ಈಡೇರಿದ ಹಾಗೆ. ಜಾತಿ , ಮತ , ಸ್ವಾರ್ಥ , ಮೌಢ್ಯಗಳ ಸಂಕುಚಿತ ವಲಯದಿಂದ ಒಮ್ಮೆ ಆಚೆಗೆ ಚಿಮ್ಮಲು ಓದುಗರ ಮನಸ್ಸುಗಳಿಗೆ ಈ ಪುಸ್ತಕ ಸಹಾಯ ಮಾಡಲೆಂದು ಹಾರೈಸುತ್ತೇನೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಪುಸ್ತಕ ಪ್ರಕಾಶನದ ಪ್ರಕಟಣೆಗಳನ್ನು ಪೋಸ್ಟ್ ಮುಖಾಂತರ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚ ನಾವೇ ಭರಿಸಿ ಪುಸ್ತಕ ಕಳಿಸುತ್ತೇವೆ. ಓದುಗರು ತಮ್ಮ ವಿಳಾಸ ಕಳಿಸಿದಲ್ಲಿ ನಮ್ಮ ಹಾಗೂ ಇತರ ಪ್ರಕಾಶನದ ಪುಸ್ತಕಗಳ ಬಗ್ಗೆ ಮಾಹಿತಿಗಳನ್ನು ಉಚಿತವಾಗಿ ಕಳಿಸುತ್ತೇವೆ.

ಸಾರಾ ಅಬುಬಕ್ಕರ್ ಅವರ ಪುಸ್ತಕಗಳು

ಚಂದ್ರಗಿರಿಯ ತೀರದಲ್ಲಿ (ಕಾದಂಬರಿಗಳು)
ಸಹನಾ
ವಜ್ರಗಳು
ತಳ ಒಡೆದ ದೋಣಿಯಲಿ

ಚಪ್ಪಲಿಗಳು(ಕಥಾ ಸಂಕಲನಗಳು)
ಪಯಣ ಮತ್ತು ಇತರ ಕಥೆಗಳು

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕೃತಿಗಳು

ಸ್ವಗತ ಲಹರಿ (ಕವನ ಸಂಕಲನ)
ಯಮಳ ಪ್ರಶ್ನೆ (ನಾಟಕ)

ಹುಲಿಯೂರಿನ ಸರಹದ್ದು (ಕಥಾ ಸಂಕಲನ)
ಅಬಚೂರಿನ ಪೋಸ್ಟಾಫೀಸ್
ಕಿರಗೂರಿನ ಗಯ್ಯಾಳಿಗಳು

ಸ್ವರೂಪ (ಕಾದಂಬರಿ)
ನಿಗೂಢ ಮನುಷ್ಯರು
ಕರ್ವಾಲೋ
ಚಿದಂಬರ ರಹಸ್ಯ

ಅಲೆಮಾರಿಯ ಅಂಡಮಾನ್
ಪರಿಸರದ ಕಥೆ
ಮಿಸ್ಸಿಂಗ್ ಲಿಂಕ್
ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು

ಫ್ಲೈಯಿಂಗ್ ಸಾಸರ್ ೧
ಫ್ಲೈಯಿಂಗ್ ಸಾಸರ್ ೨

ವಿಸ್ಮಯ ೧

(ಕೆ.ಪಿ.ಪೂರ್ಣಚಂದ್ರ ತೇಜಸ್ವಿ , ಪ್ರದೀಪ ಕೆಂಜಿಗೆ)
ವಿಸ್ಮಯ ೨

(ಕೆ.ಪಿ.ಪೂರ್ಣಚಂದ್ರ ತೇಜಸ್ವಿ , ಪ್ರದೀಪ ಕೆಂಜಿಗೆ)

## ಪರಿವಿಡಿ

# 'ಫ್ಲೈಯಿಂಗ್ ಸಾಸರ್ಸ್'

## ('ಫ್ಲೈಯಿಂಗ್ ಸಾಸರ್'ಘಟನೆಗಳು
## ಮೊದಲ ದರ್ಜೆಯ ಮುಖಾಮುಖಿ
## ಎರಡನೆ ದರ್ಜೆಯ ಮುಖಾಮುಖಿ)


| ಅಧ್ಯಾಯ | | ಪುಟ |
|---|---|---|
| ೧. | ಹೊಸ ವಿಜ್ಞಾನದ ಅರುಣೋದಯ | ....೧ |
| ೨. | ವಿಶ್ವದಾದ್ಯಂತ ಅಲ್ಲೋಲಕಲ್ಲೋಲ | ....೯ |
| ೩. | 'ಜುಲೈ ಕ್ರೈಸಿಸ್' | ....೧೭ |
| ೪. | 'ಯು ,ಎಫ್ ,ಒ'ಗಳ ಮೂಲ ತಾರಾಮಂಡಲವೆ? | ....೨೭ |
| ೫. | ಲೇಕನ್ ಹೀತ್ ನೆಲೆಯ ವಿಚಿತ್ರ ಘಟನೆಗಳು | ....೩೩ |
| ೬. | ಮೌಂಟ್ ರೈನರ್ ಬಳಿಯ ಅಪಘಾತ | ....೪೧ |
| ೭. | ಕ್ಯಾಪ್ಟನ್ ಮೆಂಟಲ್‌ನ ದುರಂತ | ....೫೦ |
| ೮. | ಮೊದಲವರ್ಗದ ಮುಖಾಮುಖಿ | ....೫೫ |
| ೯. | ಎಕ್ಸ್‌ಟರ್ ಊರಿನಲ್ಲಿ ನಡೆದದ್ದೇನು? | ....೬೩ |
| ೧೦. | ಎಡ್ಗರ್ ಮತ್ತು ಸೋರ್ವ್‌ಸ್ ಅನುಭವಗಳು | ....೭೦ |
| ೧೧. | ವಾಸ್ತವ ಅವಾಸ್ತವಗಳ ಅಂಚಿನಿಂದ | ....೭೬ |
| ೧೨. | ಫಾದರ್ ಗಿಲ್‌ರತ್ತ ಕೈ ಬೀಸಿದರು | ....೮೦ |
| ೧೩. | ಸುತ್ತಮುತ್ತಣ 'ಯು ,ಎಫ್ ,ಒ' ಸಂಗತಿಗಳು | ....೮೭ |


## ಕೃತಜ್ಞತೆಗಳು

ಈ ವಿಷಯದ ಬಗ್ಗೆ ನನಗಿರುವ ಕುತೂಹಲವನ್ನು ಪ್ರೋತ್ಸಾಹಿಸಿ
ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ ಗೆಳೆಯ ಲಂಕೇಶ್‌ರಿಗೆ

ಈ ಪುಸ್ತಕವನ್ನು ಪ್ರಕಟಿಸಲು ಮುಂದಾದ ಪುಸ್ತಕ ಪ್ರಕಾಶನದ ಗೆಳೆಯರಿಗೆ

ಟೈಪ್ ಸೆಟ್ಟಿಂಗ್ ಮಾಡಿ ಕೊಟ್ಟ ಕುಮಾರಿ ಸರೋಜ
ಶ್ರೀಮತಿ ರಾಜೇಶ್ವರಿ , ಗೆಳೆಯರಾದ ರಘು , ರಿತೇಶ್
ಮುಂತಾದವರಿಗೆ
ಕಲಾವಿದ ಶ್ರೀ ಸುರೇಶಚಂದ್ರ ದತ್ತರಿಗೆ

# ಹೊಸ ವಿಜ್ಞಾನದ ಅರುಣೋದಯ



ಆಕಾಶದಲ್ಲಿ ಯುದ್ಧವಿಮಾನಗಳ ರೀತಿಯಲ್ಲಿ ವ್ಯೂಹ ರಚನೆ ಮಾಡಿಕೊಂಡು ಹಾರತೊಡಗಿದ ಈ ವಿಚಿತ್ರ ಆಕಾಶ ಯಂತ್ರಗಳನ್ನು ಮೊದಲಲ್ಲಿ ವೈರಿಗಳ ರಹಸ್ಯ ಯಂತ್ರಗಳೆಂದೇ ತಿಳಿದು ಇವನ್ನು 'ಫೂ ಫೈಟರ್'ಗಳೆಂದು ಕರೆದರು. ಅಪ್ರತಿಮ ವೇಗದ ವೃತ್ತಾಕಾರದ ಈ ರಹಸ್ಯ ಯಂತ್ರಗಳು ಕೊನೆಗೆ 'ಯು ,ಎಫ್ ,ಒ' ಅಥವಾ 'ಫ್ಲೈಯಿಂಗ್ ಸಾಸರ್' ಎಂಬ ಜನಪ್ರಿಯ ಹೆಸರು ಪಡೆದುವು.

ಕಳೆದ ಮೂವತ್ತು ವರ್ಷಗಳಿಂದ ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ವಾದ ವಿವಾದಗಳಿಗೆ , ದಿಗ್ಭ್ರಮೆಗಳಿಗೆ ಎಡೆ ಮಾಡಿಕೊಟ್ಟಿರುವ ಸಂಗತಿ ಎಂದರೆ 'ಯು ,ಎಫ್ ,ಒ'ಗಳು. ಇವುಗಳ ಇನ್ನೊಂದು ಜನಪ್ರಿಯ ಹೆಸರು 'ಫ್ಲೈಯಿಂಗ್ ಸಾಸರ್'. ಅತ್ಯಂತ ಬಲಾಢ್ಯ ರಾಷ್ಟ್ರಗಳನ್ನು ಒಳಗೊಂಡಂತೆ ಎಲ್ಲ ರಾಷ್ಟ್ರಗಳ ಸರ್ಕಾರಗಳೂ ಅವುಗಳ ಆಕಾಶದ ಸರಹದ್ದುಗಳನ್ನು ನಿರಂತರವಾಗಿ ಉಲ್ಲಂಘಿಸುತ್ತಿರುವ ಈ 'ಯು ,ಎಫ್ ,ಒ'ಗಳ ಬಗ್ಗೆ ಯಾವ ಧೋರಣೆ ತಳೆಯಬೇಕೆಂಬುದು ತಿಳಿಯದೆ ಪೇಚಾಟಕ್ಕೆ ಸಿಕ್ಕಿಕೊಂಡಿವೆ. ಮಹಾನ್ ಶಕ್ತ ರಾಷ್ಟ್ರಗಳ ಅಜೇಯ ಯುದ್ಧವಿಮಾನಗಳೂ ಕೂಡಾ 'ಯು ,ಎಫ್ ,ಒ'ಗಳ ವೇಗ ದಿಕ್‌ಪಲ್ಲಟಗಳ ವೈಖರಿಯ ಎದುರು ನಾಚಿಕೆಯಿಂದ ತಲೆತಗ್ಗಿಸಿವೆ. ಮಿಲಿಟರಿ ವಲಯಗಳಲ್ಲಂತೂ 'ಯು ,ಎಫ್ ,ಒ'ಎನ್ನುವ ಪದವೇ ಗಾಬರಿ , ಸಂಕೋಚಗಳನ್ನು ಹುಟ್ಟಿಸತೊಡಗಿದೆ. 'ಯು ,ಎಫ್ ,ಒ'ಬಗ್ಗೆ ಎಲ್ಲ ಸರ್ಕಾರಗಳೂ ತಮಗೆ ಗೊತ್ತಿರುವ 'ಯು ,ಎಫ್ ,ಒ' ಮಾಹಿತಿಗಳನ್ನು ಜನತೆಯಿಂದ ಮುಚ್ಚಿಟ್ಟು ಮರ್ಯಾದೆ ಉಳಿಸಿಕೊಳ್ಳಲು ಹವಣಿಸುತ್ತಿವೆ.

ಇಂತಹ ವಿದ್ಯಮಾನಗಳು 'ಯು ,ಎಫ್ ,ಒ'ಗಳಬಗ್ಗೆ ಏನಿದೆ? ಇವುಗಳಲ್ಲಿ ವಾಸ್ತವ ಎಷ್ಟು? ಅವಾಸ್ತವ ಎಷ್ಟು? ಈ ಸಂಗತಿಗಳ

ವಿಶ್ಲೇಷಣೆಯಿಂದ 'ಯು ,ಎಫ್ ,ಒ'ಗಳ ಬಗ್ಗೆ ಹೊಮ್ಮುವ ತೀರ್ಮಾನಗಳೇನು? ಇದನ್ನು ನಾನು ಮುಂದೆ ಬರೆಯುವ ಹಲವಾರು ಲೇಖನಗಳಲ್ಲಿ ನಿಮ್ಮ ಮುಂದೆ ಇಡಬಯಸುತ್ತೇನೆ. ವಾಸ್ತವದ ತೀರಾ ಅಂಚಿನಲ್ಲಿರುವ ಈ ಸಂಗತಿಗಳನ್ನು ನಿಮಗೆ ತಿಳಿಸುತ್ತಾ ನನಗೆ 'ಯು ,ಎಫ್ ,ಒ' ಬಗ್ಗೆ ನಂಬಿಕೆ ಇದೆಯೋ ಇಲ್ಲವೋ ಎಂದು ನಿಮಗೆ ತಿಳಿಸುವುದಾಗಲೀ , ಇದನ್ನು ನಂಬಬೇಕೆಂದು ನಿಮಗೆ ಹೇಳುವುದಾಗಲೀ ಅನವಶ್ಯಕ. 'ಯು ,ಎಫ್ ,ಒ'ವಿದ್ಯಮಾನಗಳ ಬಗ್ಗೆ ತಿಳುವಳಿಕೆ ನಮ್ಮ ಜನಕ್ಕೆ ಅವಶ್ಯ ಮತ್ತು ಅನಿವಾರ್ಯ ಎಂದು ನನ್ನ ಭಾವನೆ.

ದೇವರು , ಜನ್ಮಾಂತರ , ಆತ್ಮ ಇತ್ಯಾದಿ ಕಲ್ಪನೆಗಳ ಪರಿಚಯ ನಮ್ಮ ಎಳೆಯರಿಗೆ , ಅವರು ಅದನ್ನು ನಂಬಲಿ , ಬಿಡಲಿ , ಹೇಗೆ ಅಗತ್ಯವೋ ಹಾಗೆ 'ಯು ,ಎಫ್ ,ಒ' ವಿದ್ಯಮಾನವೂ ಕೂಡ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇವುಗಳನ್ನು ನಂಬುವ ಅಥವಾ ನಂಬದಿರುವ ಬೌದ್ಧಿಕ ಕ್ರಿಯೆಯಲ್ಲಿಯೇ ನಮ್ಮ ಬುದ್ಧಿಶಕ್ತಿಗೆ ಹೊಸ ಕೋನ ಆಯಾಮಗಳು ದೊರೆಯತೊಡಗುತ್ತವೆ. ಆದ್ದರಿಂದ ಓದುಗರು ಇದನ್ನು ಓದುವಾಗ ಇವುಗಳನ್ನು ನಂಬಬೇಕೇ? ಎನ್ನುವ ಗೋಜಿಗೇ ಹೋಗದೆ ಸುಮ್ಮನೇ ತಿಳಿಯುತ್ತಾ ಹೋಗುವುದು ಅಗತ್ಯ. ನಾನು ನಿಮ್ಮಿಂದ ಅಪೇಕ್ಷಿಸುವುದು ಅರಿವು ಅಥವಾ ಎಚ್ಚರ ಮಾತ್ರ.

'ಯು ,ಎಫ್ ,ಒ' ಎಂದರೆ ಅಪರಿಚಿತ ಹಾರುವ ವಸ್ತುಗಳು. ಯಾರಿಗೆ ಅಪರಿಚಿತ? ಒಬ್ಬ ಹಳ್ಳಿಯವನಿಗೆ ಮುಖ್ಯಮಂತ್ರಿ ಬಂದಿಳಿಯುವ ಹೆಲಿಕಾಪ್ಟರೂ ಅಪರಿಚಿತವೇ. ಆದರೆ ಈ 'ಯು ,ಎಫ್ ,ಒ'ಪದ ಸೃಷ್ಟಿ ಯಾದುದು ಅಮೆರಿಕಾದ ವಾಯುರಕ್ಷಣಾ ದಳದಿಂದ. ಏನು ಮಾಡಿದರೂ ಪರಿಚಯ ಹಿಡಿಯಲಾಗದ ಈ ಹಾರುವ ವಸ್ತುಗಳನ್ನೆಲ್ಲಾ ಅವರು ಅನೇಕ ದಿನಗಳ ಸಂಶೋಧನೆ , ಸಮಾಲೋಚನೆಗಳ ಅನಂತರ ಅಪರಿಚಿತ ಹಾರುವ ವಸ್ತುಗಳು ಅಥವಾ 'ಯು ,ಎಫ್ ,ಒ'ಎಂದು ವರ್ಗೀಕರಣ ಮಾಡಲಾ ರಂಭಿಸಿದರು. ಆದ್ದರಿಂದ 'ಯು ,ಎಫ್ ,ಒ' ಎನ್ನುವ ಪದ ಹಾರುವ ವಸ್ತುಗಳ ಬಗ್ಗೆ ಗಾಢಪರಿಚಯ ಮತ್ತು ಪರಿಶ್ರಮ ಪಡೆದ ವಾಯುಸೇನಾ ಪಡೆಯ ಇಂಟೆಲಿಜೆಂನ್ಸ್ ವಿಭಾಗದಿಂದ ಸೃಷ್ಟಿಯಾದುದು. ಈ ಪದವನ್ನು ಉಪಯೋಗಿ ಸುವ ಮೊದಲು ಅಮೆರಿಕಾದ ವಾಯುಸೇನಾ ಪಡೆ ಎಷ್ಟೊಂದು ಮಾಹಿತಿ ಸಂಗ್ರಹಣೆ ಮತ್ತು ಸಂಶೋಧನೆಗಳನ್ನು ನಡೆಸಿಕೊಂಡು ಬಂದಿದೆ ಎಂದು ನಾನು ಮುಂದೆ ತಿಳಿಸುತ್ತೇನೆ.

'ಯು ,ಎಫ್ ,ಒ' ಪ್ರಕರಣದಲ್ಲಿ ಬಹುಪಾಲು ಜನ ಈ ವಿಚಿತ್ರ 'ಯುಎಫ್ಒ'ಗಳು ಆಕಾಶದಲ್ಲಿ ಟೀ ಸಾಸರುಗಳನ್ನು ಒಂದರ ಮೇಲೊಂದು ಬೋರಲಾಗಿ ಇಟ್ಟಂತೆ ಕಾಣುತ್ತದೆಂದು ಗುರುತಿಸಿದರು. ಆದ್ದರಿಂದ ಇವುಗಳನ್ನು

flying saucers ಎಂದು ಕರೆದರು. ಹಾಗಾಗಿ 'ಯು ,ಎಫ್ ,ಒ'ಗಳಿಗೆ 'ಫ್ಲೈಯಿಂಗ್ ಸಾಸರ್'ಗಳೆಂಬ ಜನಪ್ರಿಯ ಹೆಸರೂ ಕೂಡ ಬಂದಿತು.

'ಯು ,ಎಫ್ ,ಒ''ಫ್ಲೈಯಿಂಗ್ ಸಾಸರ್'ಗಳೆಂಬ ಪದಗಳು ಈಗ ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಪಾರಿಬಾಷಿಕ ಪದಗಳಾಗಿವೆ. ಈ ಪದಗಳನ್ನು ತರ್ಜುಮೆ ಮಾಡಿ ಕನ್ನಡದಲ್ಲಿ ಉಪಯೋಗಿಸುವ ಬದಲು ಹಾಗೇ ಉಪಯೋಗಿಸಿ ಇದನ್ನು ಕನ್ನಡದ ಪದವಾಗಿಸಿಕೊಳ್ಳುವುದು ಒಳ್ಳೆಯದು.

ಈ ಬಗೆಯ 'ಯು ,ಎಫ್ ,ಒ'ಗಳು ಆಧುನಿಕ ಮಾನವನಿಗೆ ಇತ್ತೀಚೆಗಷ್ಟೇ ಸವಾಲಿನಂತೆ ಪರಿಚಯವಾಗಿದೆ. ಆದರೆ ನಮ್ಮ ಚರಿತ್ರೆಗಳಲ್ಲೂ , ಪುರಾಣಗಳಲ್ಲೂ ಅನೇಕ ಹಾರುವ ಯಂತ್ರಗಳ ಉಲ್ಲೇಖಗಳಿರುವುದು ಕಂಡು ಬರುತ್ತದೆ.ಬೈಬಲ್ಲು ,ರಾಮಾಯಣ ,ಮಹಾಭಾರತ , ಈಜಿಪ್ಟಿನ ಪ್ರಾಚೀನ ಸಾಹಿತ್ಯ ಗಳು ಮುಂತಾದವುಗಳಲ್ಲಿ ಯಾವುದೇ ಇಂಧನದ ಸಹಾಯವಿಲ್ಲದೆ ಎಲ್ಲಿಂದೆಲ್ಲಿಗೆ ಬೇಕಾದರೂ ಕೊಂಡೊಯ್ಯುವ ಮಂತ್ರಶಕ್ತಿಯ ವಿಚಿತ್ರ ವಿಮಾನಗಳ ಉಲ್ಲೇಖಗಳಿವೆ. ಈ ಕಲ್ಪನೆಗಳಿಗೆ 'ಯು ,ಎಫ್ ,ಒ'ಗಳೇ ಸ್ಫೂರ್ತಿಗಳಾ ಗಿರಬಹುದೇ ? ಎನ್ನುವ ಅನುಮಾನ ಈಗ ತಜ್ಞರನ್ನು ಕಾಡುತ್ತಿದೆ.

ವಿಜ್ಞಾನಿಗಳು 'ಯು ,ಎಫ್ ,ಒ' ಅಧ್ಯಯನಕ್ಕೆ ತೊಡಗುವ ಮೊದಲು ಈ ಪೌರಾಣಿಕ ಕಲ್ಪನೆಗಳೆಲ್ಲಾ ನಮಗೆ ಆಧಾರರಹಿತ ರಮ್ಯ ಕಲ್ಪನೆಗಳಂತೆ ತೋರುತ್ತಿದ್ದವು. ಆದರೆ 'ಯು ,ಎಫ್ ,ಒ' ವಿದ್ಯಮಾನಗಳನ್ನು ಹೆಚ್ಚು ಹೆಚ್ಚು ಅಭ್ಯಾಸ ಮಾಡಿದಂತೆಲ್ಲಾ ನಮ್ಮ ಪ್ರಾಚೀನ ವಿಮಾನಗಳ ಕಲ್ಪನೆ ವರ್ಣನೆಗಳು ಹೆಚ್ಚು ಹೆಚ್ಚು ವಾಸ್ತವಗಳಾಗಿಯೂ ಆಧಾರಸಹಿತವಾದುದಾಗಿಯೂ ಕಾಣತೊಡಗಿದೆ.

ಯಾವುದೇ ಯಂತ್ರದ ಶಬ್ದವೂ ಇಲ್ಲದೆ ನೆಲದಿಂದ ನೇರವಾಗಿ ಮೇಲಕ್ಕೇರುವ , ಯಾವ ಹೊಗೆಯನ್ನೂ ಉಗುಳದೆ , ಯಾವುದೇ ರೆಕ್ಕೆಗಳ ಬಲವೂ ಇಲ್ಲದೆ ನಿಃಶಬ್ದವಾಗಿ ಆಕಾಶದಲ್ಲಿ ಚಲಿಸುವ , ಆಕಾಶದಲ್ಲೆ ನಿಶ್ಚಲವಾಗಿ ನಿಂತಲ್ಲಿ ನಿಲ್ಲುವ ಮತ್ತು ನಿಂತಲ್ಲಿಂದಲೇ ಗಂಟೆಗೆ ಹನ್ನೆರಡರಿಂದ ಇಪ್ಪತ್ತು ಸಹಸ್ರ ಮೈಲುಗಳ ವೇಗದಲ್ಲಿ ಇದ್ದಕ್ಕಿದ್ದಂತೆ ಚಲಿಸುವ ಮತ್ತು ಅದೇ ವೇಗದಲ್ಲಿ ಎಡಕ್ಕೆ ಬಲಕ್ಕೆ ಹಿಂದಕ್ಕೆ ಹಠಾತ್ತಾಗಿ ದಿಕ್ಕು ಬದಲಿಸುವ ಈ 'ಯು ,ಎಫ್ ,ಒ'ಗಳು ಪೂರ್ವಿಕರ ಮಂತ್ರಚಾಲಿತ ವಿಮಾನಗಳ ಕಲ್ಪನೆಗಳನ್ನು ಮೀರಿಸುವಂತೆ ಕಾಣುತ್ತದೆ.

ಈ ಊಹಾತೀತವಾದ ಮತ್ತು ನಮ್ಮ ಭೌತ ನಿಯಮಗಳೆಲ್ಲವನ್ನೂ ಮೀರಿದ 'ಫ್ಲೈಯಿಂಗ್ ಸಾಸರ್'ಗಳ ನಡವಳಿಕೆಗಳ ದೆಸೆಯಿಂದಲೇ ನಮಗೆ ಇದಿರಾಗುವ ಮೊದಲ ಪ್ರಶ್ನೆ ಈ 'ಫ್ಲೈಯಿಂಗ್ ಸಾಸರ್'ಗಳು ನಿಜವಾದ ವಸ್ತು ಸತ್ಯವೇ? ಅಥವಾ ನಮ್ಮ ಭ್ರಾಂತಿಯೇ? ಎನ್ನುವುದು.

ದೆವ್ವ ಭೂತ ಪಿಶಾಚಿಗಳಂತೆ ಇವೂ ನಮ್ಮ ಮೂಢ ನಂಬಿಕೆಯಿಂದ ಉದಿಸಿದ ಭ್ರಾಂತಿಗಳೇ? ಈಗ 'ಯು ,ಎಫ್ ,ಒ' ಕಲ್ಪನೆಗಳು ಎಷ್ಟೊಂದು ಜನಜನಿತ ಮತ್ತು ಜನಪ್ರಿಯ ಆಗಿವೆ ಎಂದರೆ ಅವುಗಳು ಅನೇಕ ರಂಜಕ ಸಾಹಿತ್ಯಕ್ಕೂ ಸಿನೆಮಾ ಇತ್ಯಾದಿಗಳಿಗೂ ಸ್ಫೂರ್ತಿಯಾಗಿವೆ. ನೂರಾರು ಸುಳ್ಳು ಕಲ್ಪನೆಗಳು ಊಹೆಗಳಿಗೆ ಮೂಲವಾಗಿವೆ. ಇದರ ದೆಸೆಯಿಂದಾಗಿ ಇಂದು ಅಮೆರಿಕ , ಇಂಗ್ಲೆಂಡ್ , ಫ್ರಾನ್ಸ್ ಮುಂತಾದ ದೇಶಗಳಲ್ಲೂ 'ಯು ,ಎಫ್ ,ಒ' ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಿದೆ.

ಅನೇಕ ಉದ್ದಾಮ ಖಗೋಲ ವಿಜ್ಞಾನಿಗಳೂ , ಭೌತಶಾಸ್ತ್ರಜ್ಞರೂ ಇವುಗಳ ಅಧ್ಯಯನದಲ್ಲಿ ತೊಡಗಿದ್ದಾರೆ.

ಇವರ ಮೊದಲನೆಯ ಕೆಲಸ ಎಂದರೆ 'ಯು ,ಎಫ್ ,ಒ'ಗಳಿಗೆ ಸಂಬಂಧಿಸಿದ ಘಟನೆಗಳಲ್ಲಿ ನಿಜ ಎಷ್ಟು? ಸುಳ್ಳೆಷ್ಟು? ಎಷ್ಟು ಭ್ರಾಂತಿ ಜನ್ಯವಾದವು? ಎನ್ನುವುದನ್ನು ಮೊದಲು ಪತ್ತೆ ಮಾಡುವುದು. ಈ ಹಾರುವ ಸಾಸರುಗಳ ಸಂಗತಿಗಳಲ್ಲಿ ಅನೇಕವು ಭ್ರಾಂತಿಗಳಿರುವುದೂ ನಿಜವಾಗಿವೆ. ಇನ್ನು ಕೆಲವು ಪಕ್ಕಾ ಢೋಂಗಿಗಳೂ ಇವೆ. ಆದರೆ ಅನೇಕವನ್ನು ಭ್ರಾಂತಿಗಳೆಂದೂ ಸುಳ್ಳುಗಳೆಂದೂ ಹೇಳಲು ಈ ತಜ್ಞರಿಗೆ ಸಾಧ್ಯವಾಗಿಲ್ಲ.

ಅನೇಕ ಘಟನೆಗಳಲ್ಲಿ ಒಂದಕ್ಕಿಂತ ಹೆಚ್ಚು ಜನ ವೀಕ್ಷಕರಿದ್ದರು. ಅನೇಕರು 'ಫ್ಲೈಯಿಂಗ್ ಸಾಸರ್' ಬಗ್ಗೆ ಏನನ್ನೂ ತಿಳಿಯದ ಮುಗ್ಧರು. ಈ ವಿಚಿತ್ರವಾದ ವಿದ್ಯಮಾನವನ್ನು ಇತರರಿಗೆ ತಿಳಿಸಿದರೆ ಎಲ್ಲಿ ಸಾರ್ವಜನಿಕರ ಅಪಹಾಸ್ಯಕ್ಕೆ ತುತ್ತಾಗುತ್ತೇವೋ ಎಂದು ಹೆದರಿ ತಮ್ಮ ಹೆಸರುಗಳನ್ನು ಮಾತ್ರ ಪ್ರಕಟಿಸಕೂಡದು ಎಂದು ಶರತ್ತು ಹಾಕಿದವರೂ ಇದ್ದಾರೆ. ಅಂತೆಯೇ ಮಿಲಿಟರಿಯಲ್ಲಿ ಅತ್ಯಂತ ಜವಾಬ್ದಾರಿಯ ಹುದ್ದೆಯಲ್ಲಿರುವವರೂ , ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರುಗಳೂ ಇದ್ದಾರೆ.

ಕೆಲವು ಘಟನೆಗಳಲ್ಲಂತೂ ಜನರು ಕಣ್ಣಿಂದ ಈ ಯು.ಎಫ್.ಒ ಗಳನ್ನು ನೋಡಿರುವುದಲ್ಲದೇ ಆ ಯು.ಎಫ್.ಒಗಳನ್ನೇ ರೇಡಾರ್ ಪರದೆಯ ಮೇಲೂ ಗುರುತಿಸಲಾಗಿದೆ. ಮನುಷ್ಯನ ಕಣ್ಣಿಗೆ ಭ್ರಾಂತಿ ಕವಿಯಬಹುದೇ ವಿನಹ ರೇಡಾರ್ ತರಂಗಗಳಿಗೆ ಭ್ರಾಂತಿ ಇಲ್ಲವಲ್ಲ! ಹೀಗಾಗಿ ಈ ಅಂತರರಾಷ್ಟ್ರೀಯ ಯು.ಎಫ್.ಒ ತಜ್ಞರ ತಂಡಕ್ಕೆ ಯಾವ ದೃಷ್ಟಿಯಿಂದಲೂ ಢೋಂಗಿ ಎಂದು ಸಾಧಿಸಲಸಾಧ್ಯವಾದ ಘಟನೆಗಳು ಅನೇಕವು ದೊರೆತವು.

ಇದೇ ರೀತಿ ವಿಶ್ವದ ಎಲ್ಲೆಡೆ ಪ್ರತಿನಿತ್ಯ ನಡೆಯುತ್ತಿರುವ ವಿದ್ಯಮಾನಗಳನ್ನು ಒಂದೆಡೆ ಕಲೆಹಾಕುವ ಪ್ರಯತ್ನ ನಡೆದಿದೆ. ಅಮೆರಿಕಾದಲ್ಲಿ ಫ್ಲೈಯಿಂಗ್ ಸಾಸರ್ ರಿವ್ಯೂ ಎನ್ನುವ ಸಂಶೋಧನಾ ಪತ್ರಿಕೆಯೊಂದು ಜಗತ್ತಿನ ಎಲ್ಲೆಡೆ ನಡೆಯುತ್ತಿರುವ ಘಟನೆಗಳನ್ನು ಕಲೆಹಾಕುತ್ತಿದೆ. ಇವುಗಳ ಬಗ್ಗೆ

ವಿವರವಾದ ಅಭ್ಯಾಸ ನಡೆಸುತ್ತಿದೆ. ಈಗ ಅಭ್ಯಾಸ ಸಾಧ್ಯವಾಗಿರುವುದು ಸಾಸರುಗಳನ್ನು ನೋಡಿದ ಘಟನೆಗಳ ಬಗ್ಗೆಯೇ ಹೊರತು ನೇರವಾಗಿ ಸಾಸರುಗಳನ್ನಲ್ಲ. ಈ ರೀತಿ ಎಲ್ಲ ಸಂಗತಿಗಳನ್ನು ಒಂದೇ ಕಡೆ ಕಲೆಹಾಕಿ ಅಭ್ಯಾಸ ನಡೆಸುತ್ತಿರುವುದರಿಂದ ಅನೇಕ ಅಂಶಗಳು ವಿಶ್ಲೇಷಣೆಗೂ, ವಿವರಣೆಗೂ ಸಿಕ್ಕಿವೆ. ಎಷ್ಟೋ ಕಡೆ ನಂಬಲನರ್ಹವೆಂದು ಪರಿಗಣಿಸಿದ ಘಟನೆಗಳು ಸಾದೃಶ್ಯದಿಂದ ನಂಬಲು ಅರ್ಹವಾದವೆಂದು ತೀರ್ಮಾನಿಸಲಾಗಿದೆ.

೧೯೫೨ರಲ್ಲಿ ಈ 'ಯು ,ಎಫ್ ,ಒ' ವಿದ್ಯಮಾನಗಳು ಅಮೆರಿಕ, ಇಂಗ್ಲೆಂಡ್ , ಮುಂತಾದೆಡೆಗಳಲ್ಲಿ ಎಷ್ಟೊಂದು ನಡೆಯತೊಡಗಿದವೆಂದರೆ 'ಯು ,ಎಫ್ ,ಒ'ಗಳ ಹಾವಳಿಯು ಅಮೆರಿಕ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿತು. ಆಗ ಅಮೆರಿಕ ಮತ್ತು ರಷ್ಯಾ, ಇಂಗ್ಲೆಂಡ್, ಫ್ರಾನ್ಸ್ ಮುಂತಾದ ದೇಶಗಳು ಅಣ್ವಸ್ತ್ರ ಆಸ್ಫೋಟನೆಯ ಪ್ರಯೋಗಗಳನ್ನು ನಡೆಸುತ್ತಿದ್ದವು. ಈ ಸರ್ಕಾರಗಳ ಅತ್ಯಂತ ಗೋಪ್ಯ ರಕ್ಷಣಾ ಸ್ಥಾವರಗಳ ಮೇಲೆಲ್ಲಾ ಯು.ಎಫ್.ಒಗಳ ಹಾರಾಟ ವೀಕ್ಷಣೆಗಳು ಆರಂಭವಾದವು. ಇದರಿಂದ ದಂಗುಬಡಿದ ಆಯಾ ಸರ್ಕಾರಗಳು ಇವುಗಳನ್ನು ಬೇರೆ ದೇಶಗಳ ನಿಗೂಢ ಯಂತ್ರಗಳೆಂದು ಬಗೆದವು. ಇವುಗಳನ್ನು ತಮ್ಮ ವೈರಿದೇಶದ ಧಾಳಿಯೆಂದು ಬಗೆದು ಯಾವ ಕ್ಷಣದಲ್ಲಾದರೂ ಇನ್ನೊಂದು ಮಹಾಯುದ್ಧವನ್ನು ಯಾವ ಸರ್ಕಾರವಾದರೂ ಆರಂಭಿಸಿಬಿಡಬಹುದೆಂದು ಭೀತಿ ಎಲ್ಲೆಡೆ ಆವರಿಸಿತು.

ಆಗಲೇ ಅಮೆರಿಕ ಮತ್ತು ರಷ್ಯಗಳ ಪ್ರಮುಖರ ನಡುವೆ 'ಹಾಟ್ ಲೈನ್' ನೇರ ಟೆಲಿಫೋನ್ ಸಂಪರ್ಕ ಎಳೆಯಲಾಯಿತು. ಅಮೆರಿಕಾದಲ್ಲಿ ಈ ವಿದ್ಯಮಾನಗಳ ಕೂಲಂಕಶ ಪರಿಶೀಲನೆಗೆ "ಪ್ರಾಜೆಕ್ಟ್ ಬ್ಲೂ ಬುಕ್" ಎಂದು ಒಂದು ಯೋಜನೆಯನ್ನು ತಯಾರು ಮಾಡಿ ಅತ್ಯುನ್ನತ ಮಿಲಿಟರಿ ಅಧಿಕಾರಿಗಳನ್ನು ಒಳಗೊಂಡಂತೆ ಅನೇಕ ಖಗೋಲಶಾಸ್ತ್ರಜ್ಞರು, ಭೌತವಿಜ್ಞಾನಿಗಳು, ಇವರ ಒಂದು ಸಮಿತಿಯನ್ನು ರಚಿಸಲಾಯ್ತು. ಈ ಸಮಿತಿಯ ಮೂಲ ಉದ್ದೇಶ ಮಾತ್ರ ಯು.ಎಫ್.ಒಗಳು ಏನೆಂದು ಸಂಶೋಧನೆ ನಡೆಸುವುದಾಗಿರದೆ ಈ ಯು.ಎಫ್.ಒಗಳಿಂದ ಅಮೆರಿಕ ದೇಶದ ಭದ್ರತೆಗೆ ಏನಾದರೂ ವಿಪತ್ತು ಇದೆಯೇ ಎಂದು ಪರಿಶೀಲಿಸಿ ಸರಕಾರಕ್ಕೆ ಶಿಫಾರಸ್ಸು ಮಾಡುವುದು ಮಾತ್ರವಾಗಿತ್ತು.

ರಕ್ಷಣಾದೃಷ್ಟಿಯೊಂದನ್ನು ಮಾತ್ರವೇ ಮುಖ್ಯ ಉದ್ದೇಶವಾಗಿಟ್ಟು ಕೊಂಡಿದ್ದರಿಂದ ಪ್ರಾಜೆಕ್ಟ್ ಬ್ಲೂ ಬುಕ್ ಅಂತಿಮವಾಗಿ ಅಂಥ ಕುತೂಹಲಕರ ಸಂಶೋಧನೆಯನ್ನೇನೂ ಮಾಡಲಿಲ್ಲ. ಆದರೆ ಅದು ಸಂಗ್ರಹಿಸಿದ ಲಕ್ಷಾಂತರ ಮಾಹಿತಿಗಳು, ವಿಶ್ಲೇಷಣೆಗಳು ಯು.ಎಫ ,ಒಶಾಸ್ತ್ರಜ್ಞರಿಗೆ ತುಂಬ ಉಪಯುಕ್ತ

ದಾಖಲೆಗಳಾಗಿ ಪರಿಣಮಿಸಿದೆ.

ಈ ಸಮಿತಿಯಲ್ಲಿ ಇದ್ದು ಕೆಲಸ ಮಾಡಿದ ಮೇಜರ್ ಡೊನಾಲ್ಡ್ ಇ ಕೀ ಹೋ ಎನ್ನುವ ವಾಯುದಳದ ಅಧಿಕಾರಿಯೂ, ಆಲೆನ್ ಜೆ ಹೈನೆಕ್ ಎಂಬ ಖಗೋಳಶಾಸ್ತ್ರಜ್ಞರೂ ಪ್ರಾಜೆಕ್ಟ್ ಬ್ಲೂ ಬುಕ್‌ನಿಂದ ಹೊರತಾಗಿ ನಡೆಸಿದ ವೈಯ್ಯಕ್ತಿಕ ವಿಶ್ಲೇಷಣೆಗಳು, ಸಂಶೋಧನೆಗಳೂ ಇವುಗಳಲ್ಲಿ ತುಂಬ ಮುಖ್ಯವಾದವು.

೧೯೫೦ರ ವೇಳೆಗಾಗಲೇ ಯು.ಎಫ್.ಒಗಳು ಭ್ರಾಂತಿಯೇ? ವಾಸ್ತವವೇ? ಎನ್ನುವ ಸಂಶಯವನ್ನು ದಾಟಿಬಿಟ್ಟಿದ್ದವು. ಕ್ಯಾಮರಾಗಳಲ್ಲಿ, ಟೆಲಿಸ್ಕೋಪ್‌ಗಳಲ್ಲಿ, ವೀಕ್ಷಣಾಲಯಗಳಲ್ಲಿ, ರೇಡಾರ್ ಉಪಕರಣಗಳಲ್ಲಿ ಯು.ಎಫ್.ಒಗಳ ಭೌತ ಅಸ್ತಿತ್ವದ ಬಗ್ಗೆ ನಿಸ್ಸಂಶಯ ದಾಖಲೆಗಳು ಸಿಗತೊಡಗಿದ್ದವು. ಅನೇಕ ಕಡೆಗಳಲ್ಲಿ ಇವುಗಳನ್ನು ಯುದ್ಧವಿಮಾನಗಳು ಬೆನ್ನಟ್ಟಿ ಹಿಂದಿರುಗಿದ್ದವು.

ಇಷ್ಟೆಲ್ಲಾ ಆದರೂ ಪ್ರತಿಷ್ಠಾವಂತ ವಿಜ್ಞಾನಿಗಳು ಸಾರ್ವಜನಿಕವಾಗಿ 'ಯು ,ಎಫ್ ,ಒ'ಗಳ ಅಸ್ತಿತ್ವದ ವಾಸ್ತವತೆಯನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದರು. 'ಯು ,ಎಫ್ ,ಒ'ಗಳ ಬಗ್ಗೆ ಸಾರ್ವಜನಿಕವಾಗಿ ಮಾತನಾಡುತ್ತಿರಲಿಲ್ಲ. ಏಕೆಂದರೆ ಯು.ಎಫ್.ಒಗಳ ಬಗ್ಗೆ ತಿಳಿದವರನ್ನು ವ್ಯಾಪಕವಾಗಿ ಪ್ರಶ್ನಿಸಲಾಗುತ್ತಿತ್ತು. ಅವರನ್ನು ಸುಳ್ಳರೆಂಬ ಸಂಶಯದಿಂದ ನೋಡಲಾಗುತ್ತಿತ್ತು. ಅಂಥವರು ಬುದ್ಧಿ ವಿಕಲರಿರಬಹುದೇ ಎಂದು ಗುಮಾನಿಪಡುತ್ತಿದ್ದರು. ಅನೇಕ ಪೋಲೀಸ್ ಮತ್ತು ಮಿಲಿಟರಿ ಅಧಿಕಾರಿಗಳಂತೂ ಯು.ಎಫ್.ಒ ಬಗ್ಗೆ ವರದಿ ಮಾಡಿದ ಅನಂತರ ತುಂಬ ಇಕ್ಕಟ್ಟಿಗೆ ಸಿಕ್ಕಿಕೊಂಡು ಕೆಲಸ, ಬಡ್ತಿ ಮುಂತಾದವುಗಳನ್ನು ಕಳೆದುಕೊಂಡರು. ಯು.ಎಫ್.ಒ ವಿದ್ಯಮಾನದಿಂದ ಉಂಟಾದ ಈ ಸಾಮೂಜಿಕ ಮತ್ತು ರಾಜಕೀಯ ಪರಿಣಾಮಗಳು ಯು.ಎಫ್.ಒ ಸಂಗತಿಗಳನ್ನು ಸಂಶೋಧಿಸಲು ದೊಡ್ಡ ಅಡಚಣೆಯಾಗತೊಡಗಿತು.

ಇಂಥದೊಂದು ಸಂಧಿಗ್ಧ ಪರಿಸ್ಥಿತಿಯಲ್ಲಿ ಅಮೆರಿಕಾದ ಪಾಲೋಮಾರ್ ದೂರದರ್ಶಕ ಕೇಂದ್ರದ ಬಳಿ ಇರುವ ಓರ್ವ ಖಗೋಳ ವಿಜ್ಞಾನಿ ಜಾರ್ಜ್ ಆಡಮ್ ಸ್ಕೀ ಸಾಸರುಗಳ ಬಗ್ಗೆ ತಮ್ಮ ಅನುಭವಗಳನ್ನು ಕುರಿತಂತೆ ಒಂದು ದಿಟ್ಟ ಧೋರಣೆಯ ಪುಸ್ತಕವನ್ನು ಬರೆದರು. Flying saucers have landed ಎಂದು ಈ ಪುಸ್ತಕದ ಹೆಸರು. ಅದರಲ್ಲಿ ಅವರು ಅಲ್ಲಗಳೆಯಲಸಾಧ್ಯವಾದ ಸಾಸರುಗಳ ಛಾಯಾ ಚಿತ್ರಗಳನ್ನೂ ಅವುಗಳು ಬೇರೊಂದು ಲೋಕದ ನಮ್ಮಂಥ ಮಾನವರೇ ನಿರ್ಮಿಸಿರುವರೆಂಬ ಅಂಶವನ್ನೂ ಅಂಥ ಮಾನವರನ್ನು ಅವರು ಸಂಧಿಸಿ ಸಂಭಾಷಿಸಲು ಯತ್ನಿಸಿದ್ದನ್ನೂ, ತಮ್ಮೊಡನಿದ್ದ ಅನೇಕರ ಸಾಕ್ಷ್ಯಗಳೊಂದಿಗೆ ಪ್ರಕಟಿಸಿದರು.

ಪಾಶ್ಚಿಮಾತ್ಯ ಜನಸಮುದಾಯದಲ್ಲಿ ಈ ಪುಸ್ತಕ ಬಹುದೊಡ್ಡ ಕೋಲಾಹಲ ಉಂಟು ಮಾಡಿತು. ಇಡೀ ಮಾನವ ಸಂಕುಲದ ಭೌತಜ್ಞಾನ ಮತ್ತು ನಿಯಮಗಳಿಗೆ ತೀರಾ ಭಿನ್ನವಾದ ಆಡಮ್ ಸ್ಕೀಯವರ ಅನುಭವಗಳು ಮತ್ತು ತೀರ್ಮಾನಗಳು ವಿಜ್ಞಾನಿಗಳ ಜಗತ್ತನ್ನು ಬೆಚ್ಚಿಬೀಳಿಸಿದವು. ಆಡಮ್ ಸ್ಕೀ ಕೊಟ್ಟ ದಾಖಲೆಗಳು ಸಾಕ್ಷಾಧಾರಗಳನ್ನು ಯಾವೊಂದು ದೃಷ್ಟಿಯಿಂದಲೂ ಅಲ್ಲಗಳೆಯಲು ಅಸಾಧ್ಯವಾಗಿ ಜಗತ್ತಿನ ಸಾಂಪ್ರದಾಯಕ ವಿಜ್ಞಾನಿಗಳಿಗೆ ಇದು ನುಂಗಲಾರದ ತುತ್ತಾಗಿ ಪರಿಣಮಿಸಿತು. ಆಡಮ್ ಸ್ಕೀಯವರ ಅನುಭವಗಳನ್ನು ತದ್ವತ್ತಾಗಿ ಮುಂದೆ ವಿವರಿಸಬೇಕೆಂದಿರುವುದರಿಂದ ಇದರ ಪ್ರಸ್ತಾಪ ಇಷ್ಟು ಸಾಕು.

ಆಡಮ್ ಸ್ಕೀಯವರ ಈ ದಿಟ್ಟ ಹೆಜ್ಜೆ ವಿಜ್ಞಾನಿಗಳ ವಲಯದಲ್ಲಿ ಕಳವಳ ಕೋಲಾಹಲ ಹುಟ್ಟಿಸಿದ್ದಲ್ಲದೇ ಅನೇಕ ವಿಜ್ಞಾನಿಗಳಿಗೆ ತಮ್ಮ ನಂಬಿಕೆ ಮತ್ತು ಅನುಭವಗಳನ್ನು ಹೇಳಲೂ, ತಮ್ಮ ವಿಶ್ಲೇಷಣೆಗಳನ್ನು ಸಾರ್ವಜನಿಕವಾಗಿ ಮಂಡಿಸಲೂ ಧೈರ್ಯ ತಂದಿತು. ಸಾಸರುಗಳ ಲಕ್ಷಾಂತರ ಸಂಗತಿಗಳಲ್ಲಿ ಅನೇಕವು ಮತಿಭ್ರಮಣೆ, ಸುಳ್ಳು, ವಂಚನೆ ಮುಂತಾದವುಗಳಿದ್ದರೂ, ಎಲ್ಲವನ್ನೂ ಢೋಂಗಿ ಎಂದು ತಳ್ಳಿ ಹಾಕುವುದು ಅಸಾಧ್ಯ ಎಂದು ವಿಜ್ಞಾನಿಗಳ ವಲಯಕ್ಕೆ ಅರ್ಥವಾಗತೊಡಗಿತು.


ಹಾಗಾದರೆ ಈ 'ಫ್ಲೈಯಿಂಗ್‌ಸಾಸರ್'ಗಳು ಅಥವಾ ಯು.ಎಫ್.ಒ ಗಳು ಏನು? ಇವು ಎಲ್ಲಿಂದ ಆಗಮಿಸುತ್ತವೆ? ಈ ಯು.ಎಫ್.ಒಗಳನ್ನು ಬುದ್ಧಿ ಅಥವಾ ಪ್ರಜ್ಞೆ ನಿಯಂತ್ರಿಸುತ್ತಿದೆಯೇ? ಅವು ಮಾನವರೇ? ಬಾಹ್ಯಾಕಾಶದಲ್ಲಿ ಎಲ್ಲಿಂದ ಅವು ಬರುತ್ತವೆ? ಚಂದ್ರನಿಂದಲೇ? ಸೂರ್ಯನ ಗ್ರಹಗಳಿಂದಲೇ? ಅಥವಾ ಅನಂತಾಕಾಶದ ಲಕ್ಷಾಂತರ ಗ್ರಹಗಳಲ್ಲಿ ಯಾವುದಾದರೂ ಒಂದರಿಂದಲೇ? ನಮ್ಮ ಆಕಾಶದ ಅಪರಿಮಿತ ದೂರವನ್ನು ಅವು ಹೇಗೆ ದಾಟುತ್ತವೆ? ಎಲ್ಲಕ್ಕಿಂತ ಹೆಚ್ಚಾಗಿ ಅವು ಬುದ್ಧಿವಂತ ಮನಸ್ಸುಗಳಿಂದ ನಿಯಂತ್ರಿಸಲ್ಪಡುತ್ತಿದ್ದರೆ ಏಕೆ ಈವರೆವಿಗೂ ಭೂಮಂಡಲದ ಮಾನವಸಮಾಜಕ್ಕೆ ತಮ್ಮನ್ನು ತಾವು ಸಮರ್ಪಕವಾಗಿ ಪರಿಚಯಿಸಿಕೊಳ್ಳಲು ಸಾಧ್ಯವಾಗಿಲ್ಲ?

ಈ ಎಲ್ಲ ಪ್ರಶ್ನೆಗಳಿಗೆ ಮುಂಬರುವ ಲೇಖನಗಳಲ್ಲಿ ವಿವರಿಸುವ ಸಂಗತಿಗಳ ಮುಖಾಂತರ ತಿಳಿಯಲು ಪ್ರಯತ್ನಿಸೋಣ. ಆದರೆ ಇವ್ಯಾವ ಪ್ರಶ್ನೆಗಳಿಗೂ ಯಾವುದೇ ಖಚಿತ ಮತ್ತು ಸಮರ್ಪಕ ಉತ್ತರ ಈವರೆಗೂ ದೊರೆತಿಲ್ಲ ಎನ್ನುವುದನ್ನು ನಾವು ಮರೆಯುವಂತಿಲ್ಲ. ಫ್ಲೈಯಿಂಗ್ ಸಾಸರುಗಳು ನಿಜವಾಗಿಯೂ ಬುದ್ಧಿಯುತ ಜೀವಿಗಳಿಂದ ಸೃಷ್ಟಿಸಲ್ಪಟ್ಟ ಆಕಾಶವಾಹನ ಗಳಾಗಿದ್ದರೆ ಮಾತ್ರ ನಮ್ಮಿಂದ ಲಕ್ಷಾಂತರ ವರ್ಷ ಮುಂದೆ ಹೋಗಿರುವ ಅತಿಮಾನವ ತಂತ್ರಜ್ಞಾನದ ತುಣುಕುಗಳು ಅವು ಎಂಬುದು

ಖಚಿತ.

ಅಣುಯುದ್ಧ ಭೀತಿಯಲ್ಲಿ ನರಳುತ್ತಾ ಸದಾ ಬೇಹುಗಾರಿಕೆ ಪ್ರತಿವ್ಯೂಹ ಇತ್ಯಾದಿಗಳನ್ನು ರಚಿಸುತ್ತಾ, ಮಾರಾಕಾಸ್ತ್ರಗಳ ತಯಾರಿಕೆಗೆ ಹಣ ಮತ್ತು ಕಾಲವ್ಯಯ ಮಾಡುತ್ತಿದ್ದ ಪಾಶ್ಚಿಮಾತ್ಯ ನಾಗರಿಕತೆಗೆ ಯು.ಎಫ್.ಒಗಳು ಒಂದು ಬಗೆಯ ವೈಜ್ಞಾನಿಕ ಅಧ್ಯಾತ್ಮಿಕತೆಯನ್ನು ತಂದುಕೊಟ್ಟದ್ದಂತೂ ನಿಜ. ಬೆಳಕಿನ ಕಿರಣಗಳಂತೆ ಮಿಂಚಿ ಮಾಯವಾಗತೊಡಗಿದ ಈ ಯು.ಎಫ.ಒಗಳು ರಾಕೆಟ್ಟು ತಜ್ಞರಿಗೆ, ಮಿಸೈಲು ನಿಷ್ಣಾತರಿಗೆ, ತಮ್ಮ ಸೈನ್ಯಗಳ ಅಪ್ರತಿಮ ಶಕ್ತಿಯ ಬಗ್ಗೆ ಅಹಂಕಾರದಿಂದ ಬೀಗುತ್ತಿದ್ದವರಿಗೆ ಬಲವಾದ ಪೆಟ್ಟು ಕೊಟ್ಟದ್ದಂತೂ ಸತ್ಯ. ಈ ದೃಷ್ಟಿಯಿಂದ ಯು.ಎಫ್.ಒಗಳು ಪಾಶ್ಚಿಮಾತ್ಯ ಸಂಸ್ಕೃತಿಯ ಮೇಲೆ ಒಳ್ಳೆಯ ಪರಿಣಾಮ ಮಾಡಿದವೆಂದೇ ನಿಸ್ಸಂಶಯವಾಗಿ ಹೇಳಬಹುದು.

# ವಿಶ್ವದಾದ್ಯಂತ ಅಲ್ಲೋಲ ಕಲ್ಲೋಲ



ಬೋರ್ನಿಯೋ ದೇಶದ ಹಳ್ಳಿಯೊಂದರ ಪಾದ್ರಿ ಕೆಳಮಟ್ಟದಲ್ಲಿ ಹಾರುತ್ತಿದ್ದ ಈ 'ಫ್ಲೈಯಿಂಗ್ ಸಾಸರ್'ನ ಚಿತ್ರವನ್ನು ತನ್ನಬಳಿ ಇದ್ದ ಸಾಧಾರಣ ಬಾಕ್ಸ್ ಕ್ಯಾಮರಾದಲ್ಲಿ ತೆಗೆದಿದ್ದಾನೆ. ಪೆಂಟಗಾನಿನ 'ಯು,ಎಫ್,ಒ'ತಜ್ಞರು ಈ ಫೋಟೋ ಮತ್ತು ಫಿಲ್ಮಗಳನ್ನು ತೀವ್ರ ಪರೀಕ್ಷೆಗೆ ಒಳಪಡಿಸಿ ಇವರಲ್ಲಿ ಯಾವ ಮೋಸವೂ ಇಲ್ಲವೆಂದು ಒಪ್ಪಿದ್ದಾರೆ.

'ಫ್ಲೈಯಿಂಗ್ ಸಾಸರ್'ಗಳ ಬಗ್ಗೆ ಹೆಚ್ಚು ಮಾಹಿತಿಗಳು ಸಂಗತಿಗಳು ದೊರೆಯತೊಡಗಿದ್ದು , ಈ ಸಂಗತಿಗಳು ಹೆಚ್ಚು ಹೆಚ್ಚು ಪತ್ರಿಕೆಗಳಲ್ಲಿ ಮತ್ತು ಸರ್ಕಾರಕ್ಕೆ ವರದಿಯಾಗತೊಡಗಿದ್ದು ಎರಡನೆಯ ಮಹಾಯುದ್ಧದ ಅನಂತರ. ಮಹಾಯುದ್ಧದ ಸಂದರ್ಭದಲ್ಲಿ ನಮ್ಮ ವೈಮಾನಿಕ ಸಾಮರ್ಥ್ಯ ಮತ್ತು ಯಂತ್ರಕೌಶಲ್ಯ ಅಪಾರವಾಗಿ ಹೆಚ್ಚಿತೆಂಬುದು ನಿಮಗೆಲ್ಲರಿಗೂ ತಿಳಿದಿದೆ. ಜೆಟ್ ಇಂಜಿನ್‌ಗಳನ್ನು ಕಂಡುಹಿಡಿದ ಅನಂತರ ಮೊದಲಬಾರಿಗೆ ಪ್ರೊಪೆಲರ್‌ಗಳಿಲ್ಲದ ವೇಗದ ವಿಮಾನಗಳನ್ನು ನಾಜಿಗಳೂ ಮಿತ್ರರಾಷ್ಟ್ರಗಳೂ ಮಾಡತೊಡಗಿದರು.

ಗಂಟೆಗೆ ಏಳುನೂರು ಮೈಲಿಗಳಿಗಿಂತ ಮಿಗಿಲಾದ ವೇಗದಲ್ಲಿ ಹೋಗುವ ಇವುಗಳ ಸಾಮರ್ಥ್ಯದಿಂದ ವೈರಿ ನೆಲೆಗಳ ಮೇಲೆ ಧಾಳಿ ಮಾಡುವುದು ಸುಲಭವಾಯ್ತು. ಹೀಗಾಗಿ ಜನಗಳಲ್ಲೂ ಹೆಚ್ಚು ಆಕಾಶ ವೀಕ್ಷಣೆ

ಹೆಚ್ಚಾಯ್ತು. ಆಕಾಶದಲ್ಲಿ ಈವರೆಗೂ ಕಂಡಿರದಿದ್ದ ಅನೇಕಾನೇಕ ಸಂಗತಿಗಳು ಜನಗಳ ಕಣ್ಣಿಗೆ ಗೋಚರಿಸತೊಡಗಿದವು. ಎರಡನೇ ಮಹಾಯುದ್ಧದ ಸಂದರ್ಭದಲ್ಲೇ ಅನೇಕ ವೈಮಾನಿಕರು ಈ ಹಾರುವ ಸಾಸರುಗಳನ್ನುಕಂಡುದಾಗಿ ವರದಿ ಮಾಡಿದರು. ಪ್ರಜ್ವಲಿಸುವ ಸಾಸರುಗಳು ಜೆಟ್ ವಿಮಾನಗಳ ಸುತ್ತೆಲ್ಲ ಸುಲಲಿತವಾಗಿ ಹಾರಾಡುತ್ತಾ ವೀಕ್ಷಣೆ ನಡೆಸತೊಡಗಿದ್ದವು.

ಆದರೆ ಆಗ ಮಹಾಯುದ್ಧದ ಕಾಲ. ಯಾರಿಗೂ ಯಾವುದನ್ನೂ ವಿವರವಾಗಿ ಅಭ್ಯಾಸಮಾಡುವ ವ್ಯವಧಾನ ಇರಲಿಲ್ಲ. ಅಲ್ಲದೆ ಇದು ಯಾವುದೋ ವೈರಿಗಳ ನೂತನ ಆಕಾಶಯಂತ್ರ ಎಂದು ಬಗೆದರು. ಆದರೂ ಎಲ್ಲರಿಗೂ ಇವು ಯಾವುದೋ ರಹಸ್ಯ ಅಪರಿಚಿತ ಯಂತ್ರಗಳು ಎನ್ನುವ ಗುಮಾನಿ ಇತ್ತು. ಹಾಗಾಗಿ ಇವನ್ನು ಮಿತ್ರರಾಷ್ಟ್ರಗಳು "ಫೂ ಫೈಟರ್ಸ್" ಎಂದು ನಾಮಕರಣ ಮಾಡಿದರು.

ಆದರೆ ಫೂ ಫೈಟರುಗಳು ಯುದ್ಧಾನಂತರವೂ ಕಾಣಿಸಿಕೊಳ್ಳ ತೊಡಗಿದವು. ಜರ್ಮನಿಯನ್ನು ಆಕ್ರಮಿಸಿದಾಗ ರಷ್ಯನ್ನರು ಜರ್ಮನಿಯ ವಿಜ್ಞಾನಿಗಳನ್ನು ಒಳಗೊಂಡಂತೆ ಅವರ ದಾಖಲೆಗಳನ್ನೆಲ್ಲಾ ವಶಪಡಿಸಿ ಕೊಂಡಿದ್ದರು. ಆದ್ದರಿಂದ , ಅದರ ಸಹಾಯದಿಂದ ರಷ್ಯನ್ನರು ಯಾವುದೋ ವಿಚಿತ್ರ ಆಕಾಶಯಂತ್ರದ ಪ್ರಯೋಗದಲ್ಲಿ ತೊಡಗಿದ್ದಾರೆ ಎಂಬ ಗುಮಾನಿ ಮಿತ್ರರಾಷ್ಟ್ರಗಳ ವಲಯಗಳಲ್ಲಿ ಮೂಡಿತು. ಆದರೆ ಇವು ಅಂಥ ರಹಸ್ಯ ಪ್ರಯೋಗ ಯಂತ್ರಗಳಾಗಿದ್ದರೆ ಏಕೆ ಬೇರೆ ದೇಶಗಳ ಆಕಾಶವಲಯಗಳಲ್ಲಿ ಇದರ ಹಾರಾಟ ಪರೀಕ್ಷೆ ನಡೆಸುತ್ತಿದ್ದಾರೆ? ಆ ಯಂತ್ರವೇನಾದರೂ ಕೆಟ್ಟು ನೆಲಕ್ಕುರುಳಿದರೆ ಅದನ್ನು ಇತರ ರಾಷ್ಟ್ರಗಳೂ ತಿಳಿದುಕೊಳ್ಳವುದಿಲ್ಲವೆ? ಆದ್ದರಿಂದ ಇವು ರಷ್ಯನ್ನರ ರಹಸ್ಯಯಂತ್ರಗಳಲ್ಲ ಎಂದು ಯೋಚಿಸಿದರು.

ಯುದ್ಧಾನಂತರ ನಿಧಾನವಾಗಿ ಈ ಸಾಸರುಗಳ ಸಂಗತಿಗಳು ಬರಿಯ ವೈಮಾನಿಕರಿಂದಲ್ಲದೆ ಜೀವನದ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಜನಗಳಿಂದಲೂ ಬರತೊಡಗಿತು. ಸಾಸರುಗಳ ಮೊದಮೊದಲ ವರದಿಗಳು ಕೇವಲ ರೇಖಾಚಿತ್ರಗಳಂತೆ ವಿವರರಹಿತವಾಗಿರುತ್ತಿದ್ದವು.

ರೆಕ್ಕೆಗಳಿಲ್ಲದ ವೃತ್ತಾಕಾರದ ದೊಡ್ಡದೊಡ್ಡ ಚಕ್ರಗಳು , ಹೊಳೆಯುವ ವಸ್ತುಗಳು , ಅಪರಿಮಿತ ವೇಗದಲ್ಲಿ ಚಲಿಸುವ ಬೆಳಕುಗಳು ಇತ್ಯಾದಿಗಳಾಗಿ. ಜನಸಾಮಾನ್ಯರು ಸಾಧಾರಣವಾಗಿ ತಮ್ಮ ಸರ್ಕಾರಗಳೇ ಯಾವುದೋ ಹೊಸಬಗೆಯ ಯುದ್ಧ ವಿಮಾನಗಳ ಪ್ರಯೋಗ ನಡೆಸುತ್ತಿದ್ದಾರೆ ಎಂದು ತಿಳಿದರು. ಆದರೆ ಯಾವಾಗ ಯುದ್ಧವಿಮಾನಗಳ ವೈಮಾನಿಕರೆ ತಮಗೆ ಗುರುತು ಪರಿಚಯ ಇಲ್ಲದ ಅಪರಿಚಿತ ವಸ್ತುಗಳ ಬಗ್ಗೆ ಹೇಳತೊಡಗಿದರೋ ಆಗ ಪರಿಸ್ಥಿತಿ ಇದ್ದಕ್ಕಿದ್ದಂತೆ ಗಂಭೀರ ಸ್ವರೂಪಕ್ಕೆ ತಿರುಗಿತು. ಸರ್ಕಾರಗಳಾಗಲೀ

ಗೂಢಚಾರ ವಿಭಾಗವಾಗಲೀ ಸುಮ್ಮನೆ ಕುಳಿತು ಕೊಳ್ಳುವಹಾಗಿರಲಿಲ್ಲ. ಸಾಧಾರಣವಾಗಿ ಒಂದು ದೇಶದ ವಾಯುಪ್ರದೇಶದ ಸರಹದ್ದನ್ನು ರಕ್ಷಿಸುವ ಜವಾಬ್ದಾರಿ ವಾಯುಸೇನಾ ಪಡೆಯದಾದ್ದರಿಂದ ಅಮೆರಿಕಾದಲ್ಲಿ ಇದನ್ನು ವಾಯುರಕ್ಷಣಾ ದಳಕ್ಕೆ ಒಪ್ಪಿಸಲಾಯ್ತು.

ತಟ್ಟೆಯಂತಿರುವ! ಸ್ವಯಂಬೆಳಕಿನಿಂದ ಕೂಡಿರುವ! ಅಪರಿಮಿತ ವೇಗದಲ್ಲಿ ಫೈಟರ್ ವಿಮಾನಗಳ ಕಣ್ಣಿಗೇ ಕಾಣದಂತೆ ಮಾಯವಾಗುವ! ರೆಕ್ಕೆಗಳೇ ಇಲ್ಲದ ಹಾರುವ ಯಂತ್ರಗಳು!! ನಾನ್‌ಸೆನ್ಸ್!! ಈ ವೈಮಾನಿಕರಿಗೆ ಎಲ್ಲೋ ದುಃಸ್ವಪ್ನ ಬಿದ್ದಿರಬೇಕು , ಇಲ್ಲವೇ ಮಾನಸಿಕವಾಗಿ ಅಸ್ವಸ್ಥ ರಾಗಿರಬೇಕು , ಇಲ್ಲವೇ ಏನನ್ನೊ ಕಂಡು ಇನ್ನೇನೋ ಎಂದು ಭ್ರಮಿಸಿರಬೇಕು! ರಕ್ಷಣಾದಳದ ಇಂಟೆಲಿಜೆನ್ಸ್‌ನವರು ಮೊದಮೊದಲು ಇವನ್ನು ಅಲಕ್ಷಿಸಿ ತಳ್ಳಿಹಾಕಿ , ಇದನ್ನು ವರದಿ ಮಾಡಿದ ಉದ್ಯೋಗಿಗಳ ಮೇಲೆಲ್ಲಾ ನಿಗಾ ಇಡತೊಡಗಿದರು. ಇದನ್ನು ನೋಡಿ ವರದಿ ಮಾಡಿದವರಿಗೆಲ್ಲಾ ಪೀಕಲಾಟಕ್ಕೆ ಬಂತು.

ಮಿಲಿಟರಿಯವರಿಗೆ ಅವರ ವಿಶ್ಲೇಷಣೆಗೆ ಅಗತ್ಯವಿರುವಂತಹ ಗಟ್ಟಿಯಾದ ಸಾಕ್ಷ್ಯಾಧಾರಗಳು ಎಂದರೆ 'ಯು ,ಎಫ್ ,ಒ' ಚೂರುಗಳೊ ಅಥವಾ ಸವಿವರವಾದ ವರ್ಣನೆಯೊ ಅಥವಾ ಹತ್ತಿರದ ಛಾಯಾಚಿತ್ರಗಳೋ ಬೇಕಾಗಿತ್ತು. ಈ ರೀತಿ ಮಿಂಚಿ ಮಾಯವಾಗುವ ವಸ್ತುಗಳ ಸಂಕ್ಷಿಪ್ತ ವಿವರಣೆಗಳು ಅವರಿಗೆ ಭ್ರಾಂತಿಗಳಂತೆಯೇ ಕಾಣುತ್ತಿದ್ದವು.

ಈ ವೈಮಾನಿಕ ವಿವರಣೆಗಳನ್ನು ನೋಡಿದರೆ ಅವರು ಬೃಹತ್ ಗಾತ್ರದ ಉಲ್ಕೆಗಳನ್ನು ನೋಡಿ ಹಾರುವ ಸಾಸರುಗಳೆಂದು ಭ್ರಮಿಸಿದ್ದಾರೆಂದು ಹೇಳಬಹುದು. ಅವುಗಳ ವೇಗ , ಅವುಗಳು ಪ್ರಜ್ವಲಿಸುತ್ತಿದ್ದವೆಂಬುದನ್ನು ಗಮನಿಸಿದರೆ , ಇವು ಉಲ್ಕೆಗಳು ಅಥವಾ ಪ್ರಜ್ವಲಿಸುವ ಬೆಂಕಿಯ ಉಂಡೆಗಳು ಮಾತ್ರವೆಂದು ನಿಸ್ಸಂಶಯವಾಗಿ ಹೇಳಬಹುದು. ಎಂದು ಮೊದಮೊದಲಲ್ಲಿ ರಕ್ಷಣಾ ವಿಭಾಗದವರು ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಕೆಲವು ಕಡೆ ವೈಮಾನಿಕರು ಗುರುಗ್ರಹವನ್ನೆ ಹಾರುವ ವಸ್ತುಗಳೆಂದು ಭ್ರಮಿಸಿದ್ದಾರೆಂದು ಹೇಳಲಾಗಿದೆ. ಇದು ಸುಮಾರು ೧೯೫೦ನೇ ಇಸವಿಯಲ್ಲಿ ನಡೆದದ್ದು. ಆಗ ಅಮೆರಿಕಾ ದೇಶ ಕೊರಿಯಾ ಯುದ್ಧದಲ್ಲಿ ಭಾಗಿಯಾದ್ದರಿಂದ ಆ ಯುದ್ಧದ ಸುದ್ಧಿಗಳೇ ಹೆಚ್ಚಿನ ಪ್ರಾಧಾನ್ಯತೆಯನ್ನು ಪತ್ರಿಕೆಗಳಲ್ಲಿ ಪಡೆದುಕೊಳ್ಳುತ್ತಿದ್ದರಿಂದ , ಅಮೆರಿಕಾದ ಜನಸಾಮಾನ್ಯರೂ ಅಲಕ್ಷಿಸಿದರು. ಮಿಕ್ಕ ಅನೇಕ ಬಡ ರಾಷ್ಟ್ರಗಳಲ್ಲೂ , ಈ ಸಂಗತಿಗಳು ಸಂಭವಿಸುತ್ತಿದ್ದರೂ , ಈ ಬಗ್ಗೆ ಆಳವಾದ ಸಂಶೋಧನೆ ನಡೆಸಲು ಅಗತ್ಯವಾದ ಚೈತನ್ಯ ಅವಕ್ಕೆ ಇರಲಿಲ್ಲ.

೧೯೫೦ನೇ ಇಸವಿಯಲ್ಲಿ ಅಮೆರಿಕದ ಮೇಲೆ 'ಫ್ಲೈಯಿಂಗ್ ಸಾಸರ್'

ಗಳ ವೀಕ್ಷಣೆಯ ಮಹಾಪೂರವೇ ಆರಂಭವಾಯ್ತು. ದೇಶದ ಎಲ್ಲೆಡೆಗಳಿಂದ ಒಂದಾದ ಮೇಲೊಂದರಂತೆ ವರದಿಗಳು ಬರತೊಡಗಿದವು. ಅಮೆರಿಕದ ರಾಜಧಾನಿ , ಯುದ್ಧಸ್ಥಾವರಗಳು , ಅಣುಸಂಶೋಧನಾ ಕೇಂದ್ರಗಳು ಇಲ್ಲೆಲ್ಲಾ 'ಯು ,ಎಫ್ ,ಒ' ಗಳು ರೇಡಾರ್ ಪರದೆಯ ಮೇಲೆ ಕಾಣಿಸಿಕೊಳ್ಳತೊಡಗಿದವು. ಮಿಕ್ಕೆಲ್ಲಾ ವರದಿಗಳನ್ನು ಅಲಕ್ಷಿಸಿದಂತೆ ಈಗ ಅಲಕ್ಷಿಸುವುದು ಅಮೆರಿಕಾದ ವಾಯುಪಡೆಗೆ ಅಸಾಧ್ಯವಾಯ್ತು. ಮಿಕ್ಕೆಲ್ಲಾ ವಾರ್ತೆಗಳನ್ನೂ ಹಿಂದೂಡಿ 'ಯು ,ಎಫ್ ,ಒ'ಗಳು ಪ್ರಪಂಚದ ಪತ್ರಿಕೆಗಳ ಮುಖಪುಟಗಳಲ್ಲಿ ದಪ್ಪಕ್ಷರದ ಶೀರ್ಷಿಕೆಗಳಲ್ಲಿ ರಾರಾಜಿಸಿದುವು.

ಜನರಲ್ ರೂಪೆಲ್ಟ್‌ರವರಿಗೆ ಆಗ 'ಪ್ರಾಜೆಕ್ಟ್ ಬ್ಲೂ ಬುಕ್' ಯೋಜನೆಯನ್ನು ವಹಿಸಲಾಗಿತ್ತು. ಅವರ ಕಛೇರಿಗೆ ಜಗತ್ತಿನ ನಾನಾ ಕಡೆಗಳಿಂದ ಹಿಡಿದು ಅಮೆರಿಕಾದ ಅಧ್ಯಕ್ಷರ ಕಛೇರಿಯಿಂದಲೇ ವಿವರಣೆ ಕೇಳಿ ಸಂದೇಶಗಳು ಬರತೊಡಗಿದವು. ಲಂಡನ್ , ಒಟ್ಟಾವ , ನ್ಯೂಮೆಕ್ಸಿಕೊ , ಪ್ಯಾರಿಸ್ ಎಲ್ಲ ಕಡೆಗಳಿಂದಲೂ ಕಾತರದ ಎಚ್ಚರಿಕೆಯ ಗಂಟೆಯ ಸದ್ದು ಕೇಳತೊಡಗಿತು. ವಾಯುದಳದ ಅಧಿಕಾರಿಗಳು ಎಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿ ಜನಸಾಮಾನ್ಯರ ದೊಡ್ಡ ದೊಡ್ಡ ಗುಂಪುಗಳು ಅವರನ್ನು ಮುತ್ತಿ ಪ್ರಶ್ನೆಗಳನ್ನು ಕೇಳತೊಡಗಿದವು. ಜನರಲ್ ರೂಪೆಲ್ಟ್‌ರು ರೋಗರ್‌ಸ್ಮಿತ್ ಹೋಟೆಲ್‌ನಲ್ಲಿ ಒಮ್ಮೆ ತಮ್ಮನ್ನು ಮುತ್ತಿ ಪ್ರಶ್ನಿಸಿದ ಜನಸಮುದಾಯಕ್ಕೆ ಉತ್ತರಿಸಲು ನಿರಾಕರಿಸಿದುದಕ್ಕೆ ದೊಡ್ಡ ದೊಂಬಿಯೇ ನಡೆದು ಪೋಲೀಸರು ಮಧ್ಯೆ ಪ್ರವೇಶಿಸಬೇಕಾಯ್ತು.

"ಈ 'ಯು ,ಎಫ್ ,ಒ' ಗಳಿಂದ ಉಂಟಾದ ಗೊಂದಲದಲ್ಲಿ ನಮ್ಮ ರಾಷ್ಟ್ರಕ್ಕೆ ನಿಜವಾದ ಶತ್ರುಧಾಳಿಯನ್ನು ಗುರುತಿಸಲು ಅಸಾಧ್ಯವಾದ ಸನ್ನಿವೇಶ ಒದಗಿದೆ" ಎಂಬ ಅತಿಗೋಪ್ಯ ವರದಿಯನ್ನು ವಾಯುರಕ್ಷಣಾದಳ ಅಮೆರಿಕಾದ ಅಧ್ಯಕ್ಷರಿಗೆ ಕಳುಹಿಸಿತು.

'ಯು ,ಎಫ್ ,ಒ'ಗಳು ಇನ್ಯಾವುದೇ ವೈರಿರಾಷ್ಟ್ರದ ಆಕಾಶವಾಹನಗಳಾಗಿದ್ದರೆ ಅಮೆರಿಕಾಕ್ಕೆ ನಿಜವಾಗಿಯೂ ಆಪತ್ತು ಒದಗಿದೆ ಎಂದು ಉನ್ನತಾಧಿಕಾರಿಗಳು ಭಾವಿಸಿದರು. ಜೆಟ್ ವಿಮಾನಗಳು ರಾಕೆಟ್ಟುಗಳು ನಿರ್ದೇಶಿತ ಕ್ಷಿಪಣಿಗಳು ಮುಂತಾದ ಅಮೆರಿಕಾದ ಸಾಂಪ್ರದಾಯಿಕ ಶಸ್ತ್ರಗಳು 'ಯು ,ಎಫ್ ,ಒ'ಗಳ ಶಕ್ತಿಸಾಮರ್ಥ್ಯದ ಎದುರು ನಿಜವಾಗಿಯೂ ನಿಸ್ಸಹಾಯಕವಾಗಿದ್ದವು. ಅಮೆರಿಕ ಸಂಪೂರ್ಣ ಇವುಗಳನ್ನು ತ್ಯಜಿಸಿ ಇನ್ನೇನಾದರೂ ಕ್ರಾಂತಿಕಾರಕ ತಂತ್ರಜ್ಞಾನ ಇದೆಯೇ ಎಂದು ಅನ್ವೇಷಿಸಬೇಕಾಗಿತ್ತು.

ಅಮೆರಿಕಾದ ಜನತೆಯಲ್ಲಿ ಕಾತರ , ಭಯಗಳನ್ನು ಉಂಟು ಮಾಡಿದ

'ಯು ,ಎಫ್ ,ಒ'ಗಳು ಅಮೆರಿಕಾದ ಮಿಲಿಟರಿ ವಲಯಗಳಲ್ಲೂ ಅಷ್ಟೇ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳನ್ನು ಬಿತ್ತಿದವು. ಕೆಲವರು ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಸಂಶೋಧನೆ ಮಾಡಬೇಕೆಂದು ಪಟ್ಟುಹಿಡಿದರೆ , ಅಮೆರಿಕಾದ ವಾಯುಪಡೆಯ ವಕ್ತಾರರು ಜನತೆಯಿಂದ ಬಂದ ಒತ್ತಡವನ್ನು ತಾಳಲಾರದೇ 'ಯು ,ಎಫ್ ,ಒ' ಗಳೆಲ್ಲಾ ಕಲ್ಪನೆಗಳೆಂದೂ , ಆಮ್ಲಜನಕ ವಿರಳವಾದ ಎತ್ತರದಲ್ಲಿ ಮಾನಸಿಕ ಒತ್ತಡಗಳಿಗೆ ಕಾರಣವಾದ ವೈಮಾನಿಕರಿಗೆ 'ಯು ,ಎಫ್ ,ಒ'ಗಳು ಕಂಡಿವೆ" ಎಂದು ಪತ್ರಿಕಾ ಹೇಳಿಕೆ ನೀಡಿದರು.

ಇದರಿಂದ ವೈಮಾನಿಕರ ಸಮುದಾಯವೆಲ್ಲ ಕುಪಿತರಾದರು. ನೂರಾರು ಪ್ರಯಾಣಿಕರನ್ನೊಯ್ಯುವ ಜವಾಬ್ದಾರಿಯುತ ವೈಮಾನಿಕರ ಮಾನಸಿಕ ಸ್ವಾಸ್ಥ್ಯವನ್ನು ಶಂಕಿಸಿದರೆ ಮುಂದೇನು ಗತಿ. ಹಾಗಾದರೆ 'ಯು ,ಎಫ್ ,ಒ'ಗಳನ್ನು ಕಂಡ ಪ್ರತಿಯೊಬ್ಬ ವೈಮಾನಿಕನನ್ನೂ ಮನೋರೋಗ ಚಿಕಿತ್ಸೆಗೆ ಒಳಪಡಿಸ ಬೇಕೆಂದು ಅರ್ಥವೆ? ಎಂಬ ಪ್ರತಿಹೇಳಿಕೆ ಬಂತು. ಡಾಕ್ಟರ್ ಅಂಥೋಣಿ ಓ ಮಿರಾಚಿ ಎನ್ನುವ ವಾಯುಸೇನಾ ಪಡೆಯ ಸಂಶೋಧನ ವಿಜ್ಞಾನಿ ಇದಕ್ಕೆ ಉಗ್ರವಾಗಿ ಪ್ರತಿಕ್ರಿಯೆ ನೀಡಿ 'ಯು ,ಎಫ್ ,ಒ'ಗಳ ಹಾರಾಟ ಸಾಮರ್ಥ್ಯ ಮತ್ತು ಅವುಗಳ ವೇಗಗಳನ್ನೆಲ್ಲಾ ವಿವರಿಸಿ "ಮೊದಲು ಇವು ಅಮೆರಿಕಾದ ವೈರಿಗಳೇ ಎಂದು ನಿರ್ಣಯಿಸಬೇಕು , ಇಲ್ಲದಿದ್ದರೆ ಅಮೆರಿಕಾ ಪರ್ಲ್‌ಹಾರ್ಬರ್‌ಗಿಂತ ಭೀಕರವಾದ ಶತ್ರುಧಾಳಿಯನ್ನು ಎದುರಿಸಬೇಕಾಗುತ್ತವೆ" ಎಂದು ಎಚ್ಚರಿಕೆ ನೀಡಿದರು.

ಸಂಗತಿಗಳು ನಿಧಾನವಾಗಿ ಹೆಚ್ಚಾಗತೊಡಗಿದ್ದವು. ಅಮೆರಿಕಾದ ನಿರ್ದೇಶಿತ ಕ್ಷಿಪಣಿ ಸಂಶೋಧನೆ ಕೇಂದ್ರದ ಬಲವಾದ ಪಹರೆಯನ್ನೂ ಮೀರಿ ಅಲ್ಲಿ 'ಯು ,ಎಫ್ ,ಒ'ಗಳು ಕಾಣಿಸಿಕೊಂಡವು. ಪಹರೆ ಕಾಯುತ್ತಿದ್ದ B-29 ವಿಮಾನದ ಪಕ್ಕದಲ್ಲೇ ಒಂದು ಸುತ್ತಾಡುತ್ತಾ ವೀಕ್ಷಣೆ ನಡೆಸತೊಡಗಿತು. ಅದನ್ನು ಕ್ಯಾಮರಾದ ಮುಖಾಂತರ ಫೋಟೋ ತೆಗೆಯಲಾಯ್ತು. ವಿಮಾನ ಮತ್ತು 'ಯು ,ಎಫ್ ,ಒ' ಎರಡೂ ತುಂಬಾ ಎತ್ತರದಲ್ಲಿ ಇದ್ದುದರಿಂದ ಫೋಟೋಗಳಲ್ಲಿ ಎರಡೂ ಕೇವಲ ಚುಕ್ಕೆಗಳಂತೆ ಕಂಡವು. 'ಯು ,ಎಫ್ ,ಒ' ಮಾತ್ರ ನಕ್ಷತ್ರದಂತೆ ಮಿನುಗುತ್ತಿತ್ತು. ಫೋಟೋ ಹೇಗೇ ಇರಲಿ , ಇದು ಕೇವಲ ಭ್ರಾಂತಿಯಲ್ಲ ಎನ್ನುವುದಕ್ಕೆ ಆಧಾರ ಸಿಕ್ಕಿತು.

ಇದಾದ ಕೆಲವೇ ದಿನಗಳಲ್ಲಿ ನೌಕಾಪಡೆಯ ವಿಜ್ಞಾನಿ ಜೆ.ಜೆ. ಕಾಲಿಜೇವ್‌ಸ್ಕೀ ಮತ್ತು ನೌಕಾಪಡೆಯ ಜನರಲ್ ಮಿಲ್ಸ್ ವಿಮಾನದಲ್ಲಿ ಪ್ರಯಾಣ ಮಾಡುತ್ತಿರಬೇಕಾದರೆ ಒಂದು ಸಿಗಾರ್ ಮಾದರಿಯ ಗಗನ ನೌಕೆ ಅತ್ಯಂತ ವೇಗವಾಗಿ ಬರುತ್ತಿದ್ದುದು ಅವರಿಬ್ಬರಿಗೂ ಕಂಡಿತು. ಇವರ ವಿಮಾನವನ್ನು ಕಂಡೊಡನೆ ವೇಗ ನಿಧಾನಮಾಡಿ ಅದು ವಿಮಾನವನ್ನು ಒಂದು ಸುತ್ತು ಸುತ್ತಿ

ವೀಕ್ಷಣೆ ನಡೆಸಿತು. ಕಾಲಿಜೇವ್‌ಸ್ಕೀ ಕೆಳಗೆ ನಿಲ್ದಾಣದ ಅಧಿಕಾರಿಗೆ ಈ ವಿಷಯವನ್ನು ತಿಳಿಸಿದರು.

ವಿಮಾನ ನಿಲ್ದಾಣದ ಅಧಿಕಾರಿಯೊಬ್ಬ ಕೂಡಲೇ ಥಿಯೋಡೋಲೈಟ್ ಟೆಲಿಸ್ಕೋಪಿನಲ್ಲಿ ವೀಕ್ಷಣೆ ಮಾಡಿದ. ಆತನಿಗೂ ಸಿಗಾರ್ ಮಾದರಿಯ ಅಗಾಧ ಗಾತ್ರದ 'ಯು.ಎಫ್.ಒ' ಒಂದು ಕಾಲಿಜೇವ್‌ಸ್ಕೀ ಪ್ರಯಾಣ ಮಾಡುತ್ತಿದ್ದ ವಿಮಾನದ ಸುತ್ತ ಸುತ್ತುತ್ತಿರುವುದು ಕಂಡಿತು. ಕೆಲವು ಕ್ಷಣಗಳ ಅನಂತರ ಆ 'ಯು.ಎಫ್.ಒ' ವೇಗವಾಗಿ ಮಾಯವಾಯ್ತು. ಕಾಲಿಜೇವ್‌ಸ್ಕೀ ಮತ್ತು ಜನರಲ್ ಮಿಲ್‌ರವರನ್ನು ಈ ಬಗ್ಗೆ ಅನಂತರ ಪ್ರಶ್ನಿಸಲಾಯ್ತು. ಇಬ್ಬರೂ ತುಂಬಾ ಚಿಂತಾಕ್ರಾಂತರಾಗಿ "ಅವು ಆಕಾಶ ನೌಕೆಗಳೋ, ಸಾಸರುಗಳೋ ನಮಗೆ ಗೊತ್ತಿಲ್ಲ. ಆದರೆ ಅದರ ವೇಗ ಊಹಾತೀತ. ಸರ್ಕಾರ ಈ ವಸ್ತುಗಳನ್ನು ಗಮನಿಸಲು ರೇಡಾರ್, ಆಕಾಶದ ಕ್ಯಾಮರಾಗಳನ್ನು, ಟೆಲಿಸ್ಕೋಪ್‌ಗಳನ್ನು ಸಿದ್ಧಮಾಡಿಕೊಂಡು ೨೪ಗಂಟೆಗಳೂ ಆಕಾಶವನ್ನು ವೀಕ್ಷಣೆಗೆ ಒಳಪಡಿಸಬೇಕು" ಎಂದು ಹೇಳಿದರು.

ಜನರಲ್ ಮಿಲ್ ನೌಕಾಪಡೆಗೆ ಸಂಬಂಧಿಸಿದವರಾದ್ದರಿಂದ ಅವರಿಗೆ ತಿಳಿದಿರಲಿಲ್ಲ ಅಷ್ಟೇ. ಅವರ ಹೇಳಿಕೆಗೂ ಮೊದಲೇ ವಾಯುಸೇನಾಪಡೆ ಗುಟ್ಟಾಗಿ ಈ 'ಯು.ಎಫ್.ಒ'ಗಳನ್ನು ಸಂಶೋಧಿಸಲು ಕಾಲಿಜೇವ್‌ಸ್ಕೀ ಮತ್ತು ಜನರಲ್ ಮಿಲ್ ಹೇಳಿದುದಕ್ಕಿಂತ ಮಿಗಿಲಾದ ಉಪಕರಣಗಳನ್ನು ಸಜ್ಜುಗೊಳಿಸಿತ್ತು. ಸಾಸರುಗಳ ಮೂಲಗಳನ್ನು ತಿಳಿಯಲು ಸ್ಟಿರಿಯೋ ಸ್ಕೊಪಿಕ್ ಗ್ರಿಡ್ ಕ್ಯಾಮರಾಗಳನ್ನು ಸಜ್ಜುಗೊಳಿಸಿತ್ತು. ಇವುಗಳಿಂದ ಸಾಸರುಗಳ ಪ್ರಕಾಶ ಮತ್ತು ಅವುಗಳು ಇಂಧನ ದಹನದಿಂದ ಉಂಟಾಗುತ್ತಿದೆಯೇ ಎಂದು ಪತ್ತೆಹಚ್ಚಲು ಯೋಚಿಸಿತ್ತು. ಥಿಯೋಡೋಲೈಟ್ ಟೆಲಿ ಸಿನೆ ಕ್ಯಾಮರಾಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಸೋನಾರ್ ಉಪಕರಣಗಳನ್ನು ಅವುಗಳು ನಿಜಕ್ಕೂ ಶಬ್ದರಹಿತ ನೌಕೆಗಳೆ ತಿಳಿಯಲು ಉಪಯೋಗಿಸತೊಡಗಿತ್ತು.

ಈ ನಡುವೆ ಲೈಫ್ ಪತ್ರಿಕೆ ಈವರೆಗೂ ಫ್ಲೈಯಿಂಗ್ ಸಾಸರುಗಳ ಸಮಾಚಾರವನ್ನು ಅಲಕ್ಷಿಸಿದ್ದು, ಇದ್ದಕ್ಕಿದ್ದಂತೆಯೇ ಸಾಸರುಗಳ ಬಗ್ಗೆ ಗಂಭೀರ ಚಿಂತನೆಯ ಲೇಖನ ಒಂದನ್ನು ಅನೇಕ ಫೋಟೋಗಳೊಂದಿಗೆ ಪ್ರಕಟಿಸಿ "ಆಕಾಶದ ಆಚೆಯಿಂದ ನಮ್ಮಲ್ಲಿಗೆ ಅತಿಥಿಗಳು ಆಗಮಿಸುತ್ತಾರೆಯೆ?" ಎಂಬ ತಲೆಬರಹವನ್ನು ಕೊಟ್ಟಿತು.

ಅಮೆರಿಕದ ನೌಕಾಪಡೆಯ ಕಾರ್ಯದರ್ಶಿ ಮತ್ತಿತರ ಉನ್ನತಾಧಿಕಾರಿಗಳು ಹವಾಯ್‌ಗೆ ಪ್ರಯಾಣ ಮಾಡುತ್ತಿದ್ದಾಗ ಅವರ ಕಣ್ಣೆದುರಿಗೆ ಒಂದು 'ಫ್ಲೈಯಿಂಗ್ ಸಾಸರ್' ಅವರ ವಿಮಾನವನ್ನು ಸುತ್ತುಹಾಕಿ ಅಪರಿಮಿತ ವೇಗದಲ್ಲಿ ಕಣ್ಮರೆಯಾಯಿತು.

ಈ ಘಟನೆಯ ಮಾರನೇ ದಿನವೇ ನ್ಯೂಮೆಕ್ಸಿಕೋ ವಿಮಾನ ನಿಲ್ದಾಣದ ಮೇಲೆ ಒಂದು ದೊಡ್ಡ 'ಫ್ಲೈಯಿಂಗ್ ಸಾಸರ್' ನಿಶ್ಚಲವಾಗಿ ನಿಂತುದನ್ನು ಅಧಿಕಾರಿಗಳು ಕಂಡರು. ಅದು ತೀರ ದೊಡ್ಡದಾಗಿ B-29 ಬಾಂಬರ್ ವಿಮಾನದ ನಾಲ್ಕರಷ್ಟು ವಿಸ್ತಾರವಾಗಿ ಕಾಣುತ್ತಿತ್ತು. ಫೈಟರ್ ವಿಮಾನಗಳಿಗೆ ಅದೇನೆಂದು ನೋಡಲು ಸೂಚನೆಕೊಡಲಾಯ್ತು. ಆದರೆ ಫೈಟರ್ ಜೆಟ್ ವಿಮಾನಗಳು ಹೋಗಲೂ ಅಸಾಧ್ಯವಾದಷ್ಟು ಎತ್ತರದಲ್ಲಿ ಅದು ಇದ್ದುದರಿಂದ , ಫೈಟರ್‌ಗಳು ಅಸಹಾಯಕವಾಗಿ ಹಿಂದಿರುಗಿದವು.

ಅಮೆರಿಕದ ವಾಯುಪಡೆಗಳ ವಕ್ತಾರರು ಅಲ್ಲಗಳೆದಂತೆಲ್ಲಾ ನಿರಂತರವಾಗಿ 'ಫ್ಲೈಯಿಂಗ್ ಸಾಸರ್' ಸಂಗತಿಗಳು ಸಂಭವಿಸತೊಡಗಿದವು. ಅಮೆರಿಕದ ವಾಯುಪಡೆ ನಿಜವಾಗಿಯೂ ಇಕ್ಕಟ್ಟಿಗೆ ಸಿಕ್ಕಿಕೊಂಡಿತು. ಈಗ ಅವರು ಇದನ್ನು ಉಪೇಕ್ಷಿಸುವಂತೆಯೂ ಇರಲಿಲ್ಲ. ಅಥವಾ 'ಫ್ಲೈಯಿಂಗ್ ಸಾಸರ್'ಗಳ ರಹಸ್ಯವನ್ನು ಸಂಶೋಧಿಸಿ ಹೊರಗೆಡಹುವಂತೆಯೂ ಇರಲಿಲ್ಲ. ಕೆಲವು ವಾಯುಪಡೆಯ ಉನ್ನತಾಧಿಕಾರಿಗಳೂ ಈ ಸಂಗತಿಗಳ ಬಗ್ಗೆ ಜನಗಳಿಗೆ ಏನನ್ನೂ ಹೇಳದೆ ನುಣುಚಿಕೊಳ್ಳುವುದು ಒಳ್ಳೆಯದಲ್ಲವೆನ್ನುವ ತೀರ್ಮಾನಕ್ಕೆ ಬಂದರು.


'ಫ್ಲೈಯಿಂಗ್ ಸಾಸರ್' ಬಗ್ಗೆಯ ಎಲ್ಲ ವರದಿಗಳನ್ನು ATIO ಎನ್ನುವ ಮಂಡಳಿಗೆ ಒಪ್ಪಿಸಿ ಜನಗಳಿಗೆ ತಿಳಿಸುವ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದರು. (AITO) ಎಂದರೆ (Air Technical Intelligence Officers) ಎಂದರ್ಥ. ಆಕಾಶ ವಿದ್ಯಮಾನಗಳ ಭದ್ರತೆಯ ಅತ್ಯುನ್ನತ ಮಂಡಳಿ ಇದು. ಅನೇಕ ದಿನಗಳ ಸಮಾಲೋಚನೆಯ ನಂತರ ಅವರು ಅತ್ಯಂತ ಎಚ್ಚರಿಕೆಯ ಪತ್ರಿಕಾ ಹೇಳಿಕೆಯೊಂದನ್ನು ನೀಡಿದರು. ಏಕೆಂದರೆ ಅಮೆರಿಕದ ಜನತೆಯಲ್ಲಿ ಭಯ ಕಾತರಗಳನ್ನು ಉಂಟುಮಾಡದೆ ಅವರಿಗೆ ನಿಧಾನವಾಗಿ ವಾಸ್ತವ ಸಂಗತಿಗಳ ಬಗ್ಗೆ ಅರಿವು ಮೂಡಿಸಬೇಕೆಂಬುದೇ ಅವರ ಉದ್ದೇಶವಾಗಿತ್ತು. ಆ ಪತ್ರಿಕಾ ಹೇಳಿಕೆ ಹೀಗಿದೆ "ನಮಗೆ ಈವರೆಗೂ ಈ 'ಫ್ಲೈಯಿಂಗ್ ಸಾಸರ್' ಗಳ ಇರುವಿಕೆಯ ಬಗ್ಗೆಯಾಗಲಿ ಇಲ್ಲದಿರುವಿಕೆಯ ಬಗ್ಗೆಯಾಗಲಿ ಖಡಾಖಂಡಿತವಾಗಿ ತಿಳಿಸುವಂತಹ ಸಮರ್ಥಸಾಕ್ಷ್ಯಾಧಾರಗಳು ದೊರೆತಿಲ್ಲ. ಆದರೆ ನಮ್ಮ ವಾಯು ಪಡೆಯ ಇಂಟೆಲಿಜೆನ್ಸ್ ವಿಭಾಗದವರಿಗೆ ವಿವರಿಸಲು ಅಸಾಧ್ಯವಾ ಗಿರುವಂತಹ ಕೆಲವು ಘಟನೆಗಳು ನಡೆದಿರುವುದು ನಿಜ , ಎಲ್ಲಿಯವರಿಗೆ ಈ ಪರಿಸ್ಥಿತಿ ಹೀಗೇ ಇರುತ್ತದೆಯೋ ಅಲ್ಲಿಯವರೆಗೂ ವಾಯುಪಡೆ ತನ್ನ ಸಂಶೋಧನೆ ವಿಶ್ಲೇಷಣೆಗಳನ್ನು 'ಫ್ಲೈಯಿಂಗ್ ಸಾಸರ್' ಬಗ್ಗೆ ಮುಂದುವರಿಸುತ್ತದೆ".

ಈ ಪತ್ರಿಕಾ ಹೇಳಿಕೆಯಲ್ಲಿ ವಾಯುಪಡೆಯ ವಕ್ತಾರರು ಈವರೆಗೂ ಭ್ರಾಂತಿ , ತಪ್ಪುಕಲ್ಪನೆ , ಸುಳ್ಳು ಎಂದು ಮುಂತಾಗಿ ಉಪಯೋಗಿಸುತ್ತಿದ್ದ

ಪದಗಳನ್ನು ಕೈಬಿಟ್ಟಿದ್ದರು. 'ಫ್ಲೈಯಿಂಗ್ ಸಾಸರ್' ಗಳೆದುರು ತಮ್ಮ ಯುದ್ಧಸಾಮಾಗ್ರಿಗಳ ಅಸಹಾಯಕತೆಯನ್ನು ಒಪ್ಪಿಕೊಳ್ಳಲೇಬೇಕಾಗಿದೆ ಎಂಬ ಧಾಟಿ ಇತ್ತು.

ಈ ಹೇಳಿಕೆ ಪತ್ರಿಕೆಗಳಲ್ಲಿ ಅಮೆರಿಕದ ಜನತೆಯನ್ನು ತಲುಪುತ್ತಿದ್ದಂತೆ ಮತ್ತೊಂದು ಕೋಲಾಹಲಕಾರಕ ಘಟನೆ ಅಮೆರಿಕದಲ್ಲಿ ಸಂಭವಿಸಿತು. ಅದನ್ನು ಬ್ಲೂ ಬುಕ್ 'ಜುಲೈ ಕ್ರೈಸಿಸ್' ಅಥವಾ 'ಜುಲೈ ಬಿಕ್ಕಟ್ಟು' ಎಂದು ಕರೆದಿದೆ.

# ಜುಲೈ ಕ್ರೈಸಿಸ್ !



ಮೇಲ್ಕಾಣಿಸಿರುವ ಫೋಟೋ ಅಮೆರಿಕಾ ಗೂಢಚಾರ ಇಲಾಖೆಯ ದಾಖಲೆಗಳು. ವಾಷಿಂಗ್‌ಟನ್ ಏರ್ ಪೋರ್ಟಿನ ರೇಡಾರ್ ಪರದೆಯ ಮೇಲೆ ಮೂಡಿರುವ 'ಯು ,ಎಫ್ ,ಒ'ಗಳ ಈ ಎರಡೂ ಚಿತ್ರಗಳೂ ಏರ್ ಪೋರ್ಟಿನ ಆಟೋಮ್ಯಾಟಿಕ್ ಕ್ಯಾಮರ ತೆಗೆದದ್ದು. ಮೊದಲ ಚಿತ್ರಕ್ಕೂ ಎರಡನೆಯ ಚಿತ್ರಕ್ಕೂ ನಡುವಿನ ಕಾಲದ ಅಂತರ ಹತ್ತು ಸೆಕೆಂಡುಗಳು. ಕ್ಯಾಥೋಡ್ ಬೆಳಕಿನ ಕೋಲು ಎರಡನೆಯ ಸುತ್ತು ಬರುವುದರೊಳಗೆ 'ಯು ,ಎಫ್ ,ಒ'ಗಳು ಪರದೆಯ ಮೇಲೆ ಕ್ರಮಿಸಿರುವ ದೂರವನ್ನು ಗಮನಿಸಿ. ಆಕಾಶದಲ್ಲಿ ಒಂದು ವಸ್ತು ಹತ್ತು ಸೆಕೆಂಡಿನ ಒಳಗೆ ಅಷ್ಟು ದೂರ ಕ್ರಮಿಸಬೇಕಾದರೆ ಅದರ ವೇಗ ಗಂಟೆಗೆ ಎಂಟು ಸಾವಿರ ಮೈಲುಗಳು.

೧೯೫೨ ಜೂನ್‌ನಲ್ಲಿ ಜಗತ್ತಿನಾದ್ಯಂತ 'ಫ್ಲೈಯಿಂಗ್ ಸಾಸರ್' ಸಂಗತಿಗಳು ಹೆಚ್ಚತೊಡಗಿದವು. ಇವು ಯಾವ ಕಾರಣಕ್ಕಾಗಿ ಎಂದು

ಗೊತ್ತಿಲ್ಲದಿದ್ದರೂ ಅಮೆರಿಕದ ರಕ್ಷಣಾ ಸ್ಥಾವರಗಳ ಮೇಲೆ, ಅಣುಸ್ಥಾವರಗಳ ಮೇಲೆ ಮತ್ತು ಮಿಲಿಟರಿ ವಿಮಾನಗಳ ಬಳಿ ಅವು ಹೆಚ್ಚಾಗಿ ವೀಕ್ಷಣೆ ನಡೆಸತೊಡಗಿದ್ದವು. ಈ 'ಫ್ಲೈಯಿಂಗ್ ಸಾಸರ್'ಗಳ ವೀಕ್ಷಣೆ ಹೆಚ್ಚಾಗಿ ರಾತ್ರಿ ನಡೆಯುತ್ತಿದ್ದುದರಿಂದಲೂ, ಅವು ಹೆಚ್ಚಾಗಿ ರಕ್ಷಣಾ ವಿಭಾಗದವರಿಂದಲೇ ನೋಡಲ್ಪಡುತ್ತಿದ್ದುದರಿಂದಲೂ ಎಲ್ಲ ದೇಶಗಳ ಸರ್ಕಾರಗಳಿಗೆ ಇದನ್ನು ಗೋಪ್ಯವಾಗಿಡುವುದು ಸುಲಭವಾಯ್ತು.

'ಫ್ಲೈಯಿಂಗ್ ಸಾಸರ್'ಗಳು ಒಮ್ಮೊಮ್ಮೆ ಏಕಾಂಗಿಯಾಗಿ ಒಮ್ಮೊಮ್ಮೆ ಹಲವಾರು ಆಕಾಶದಲ್ಲಿ ಹಾರಾಡುತ್ತಾ ವೀಕ್ಷಣೆ ನಡೆಸುತ್ತಿದ್ದವು. ಕೆಲವು ವೇಳೆ ಯುದ್ಧ ವಿಮಾನಗಳಂತೆ ವ್ಯೂಹ ರಚಿಸಿಕೊಂಡು ಅಪರಿಮಿತಿ ವೇಗದಲ್ಲಿ ಹೋಗುತ್ತಿದ್ದವು. ಅಮೆರಿಕಾ ವಾಯುಪಡೆಗೂ ಗೂಢಚಾರ ಶಾಖೆಗೂ ಚಿಂತೆಯಾಗತೊಡಗಿತ್ತು. ಅವುಗಳ ಹಾರಾಟ ಏಕೆ ಮಿಗಿಲಾಗುತ್ತಿದೆ ಎಂದು ಯಾರಿಗೂ ಗೊತ್ತಿಲ್ಲದಿದ್ದರೂ ಭೂಮಿಯ ಮೇಲೆ ಧಾಳಿ ಮಾಡಲು ಅವು ಅಂತಿಮ ವೀಕ್ಷಣೆ ನಡೆಸುತ್ತಿದ್ದಂತೆ ತೋರುತ್ತಿತ್ತು. ನಾಳೆ ನಾಳಿದ್ದಿನಲ್ಲಿ ಇವು ಸಾಲುಸಾಲಾಗಿ ಬಂದು ಭೂಮಿಗಿಳಿಯುತ್ತವೆ ಎನ್ನುವಂತೆ ಗೂಢಚಾರ ಶಾಖೆಗೆ ಸಹಸ್ರಾರು ಘಟನೆಗಳು ವರದಿಯಾಗತೊಡಗಿದವು. ದೂರ ಗ್ರಹಗಳ ಜೀವಿಗಳು ಭೂಮಿಗೆ ಬಂದಿಳಿಯಬಹುದೆಂಬ ಕಲ್ಪನೆಯೇ ಜನಸಾಮಾನ್ಯರಿಗೆ ನಡುಕ ಹುಟ್ಟಿಸಬಹುದೆಂಬುದನ್ನು ಸರ್ಕಾರ ಚೆನ್ನಾಗಿ ತಿಳಿದಿತ್ತು. ಜನಗಳಿಗೆ ಈ ವಿಷಯ ಗೊತ್ತಾಗುವ ಮೊದಲೇ ಇವುಗಳ ಹಾರಾಟ ಕಡಿಮೆಯಾಗಬಹುದೆಂದು ಹಾರೈಸುತ್ತಾ ಅಮೆರಿಕದ ವಾಯುದಳ ಮತ್ತು ಗೂಢಚಾರ ಇಲಾಖೆ ಕಾಯತೊಡಗಿತು.

ಆದರೆ ಇವರ ನಿರೀಕ್ಷೆ ಮತ್ತು ಹಾರೈಕೆಯನ್ನೂ ಮೀರಿ ಒಂದೇ ಸಮ 'ಫ್ಲೈಯಿಂಗ್ ಸಾಸರ್'ಗಳ ಹಾರಾಟ ಹೆಚ್ಚತೊಡಗಿತು.

ಇದ್ದಕ್ಕಿದ್ದಂತೆ ಇಂಡಿಯಾನ ಪೋಲೀಸ್ ನಗರದಲ್ಲಿ ಒಂದು 'ಫ್ಲೈಯಿಂಗ್ ಸಾಸರ್' ಸುಮಾರು ೫೦೦೦ ಅಡಿ ಎತ್ತರದಲ್ಲಿ ಕಾಣಿಸಿಕೊಂಡಿತು. ಸಂಜೆಯಾದ್ದರಿಂದ ಪಾರ್ಕುಗಳಲ್ಲಿ ದಾರಿಗಳಲ್ಲಿ ನೂರಾರು ಜನಗಳು ಕಿಕ್ಕಿರಿದಿದ್ದರು. ಚಕಿತರಾದ ಜನಗಳು ಆಕಾಶದತ್ತ ನೋಡುತ್ತಿದ್ದಂತೆಯೇ ಬೆಳಕಿನ ಉಂಡೆಯಂತೆ ಪ್ರಜ್ವಲಿಸುತ್ತಾ ಸಾಗಿದ 'ಫ್ಲೈಯಿಂಗ್ ಸಾಸರ್' ಸುಮಾರು ಗಂಟೆಗೆ ೩೦೦ಮೈಲು ವೇಗದಲ್ಲಿ ಹೋದುದರಿಂದ ಎಲ್ಲರೂ ಈ ಸಾಸರನ್ನು ಚೆನ್ನಾಗಿ ಕಂಡರು.

ಈ ಘಟನೆಯಾದ ಎರಡು ನಿಮಿಷದೊಳಗೇ ಪತ್ರಿಕಾ ಕಛೇರಿಗಳು, ಪೋಲೀಸ್ ಸ್ಟೇಷನ್ನುಗಳು, ವಿಮಾನ ನಿಲ್ದಾಣದ ಅಧಿಕಾರಿಗಳು ಎಲ್ಲ ಕಡೆ ಜನರು ನುಗ್ಗಿ ಪ್ರಶ್ನಿಸತೊಡಗಿದರು. ಸಾವಿರಾರು ಜನ ತರತರದ ಊಹಾಪೋಹಗಳನ್ನು ಹಬ್ಬಿಸತೊಡಗಿದರು. ಈ 'ಫ್ಲೈಯಿಂಗ್ ಸಾಸರ್' ಘಟನೆ

ಹುಟ್ಟು ಹಾಕಿದ ಸಮೂಹ ಸನ್ನಿಯನ್ನು ನೋಡಿ ಸರ್ಕಾರ ದಂಗಾಗಿಹೋಯ್ತು. ಇಷ್ಟಕ್ಕೇ ಹೀಗಾದರೆ ವಾಯುದಳದವರಿಗೆ ಗೊತ್ತಿರುವ ರಹಸ್ಯವನ್ನೆಲ್ಲಾ ಪ್ರಕಟಿಸಿದರೆ ಯಾವ ರೀತಿಯ ದೊಂಬಿ ಏಳಬಹುದು ಎಂದು ಅವರಿಗೆ ಗಾಬರಿಯಾಯ್ತು.

ಈ ವಿಚಿತ್ರ ಗಗನಯಂತ್ರ ಇಂಡಿಯಾನ ಪೋಲೀಸ್ ನಗರದತ್ತ ಬರುತ್ತಿದ್ದಾಗಲೇ ಕೆಲವು ವೈಮಾನಿಕರು ಇದನ್ನು ನೋಡಿದ್ದರು. ಅದರಲ್ಲಿ ಕ್ಯಾಪ್ಟನ್ ರಿಚರ್ಡ್ ಕೇಸ್ ಒಬ್ಬ. ತಾನು ಆ ಯಂತ್ರವನ್ನು ನೋಡಿದಾಗ ಸುಮಾರು ೯೦೦ ಮೈಲುಗಳ ವೇಗದಲ್ಲಿ , ೧೫೦೦೦ ಅಡಿಗಳ ಎತ್ತರದಲ್ಲಿ ಅದು ಸಾಗುತ್ತಿತ್ತೆಂದೂ ತನ್ನ ವಿಮಾನವನ್ನು ಕಂಡಕೂಡಲೇ ಅದು ತನ್ನ ವೇಗವನ್ನು ತಗ್ಗಿಸಿ ಇಳಿಯುತ್ತಾ ಕೆಳಗೆ ಬಂದು ತನ್ನ ವಿಮಾನದ ಬಳಿಯೇ ಸಮಾನಾಂತರವಾಗಿ ಕೊಂಚ ದೂರ ಹಾರಿತೆಂದೂ ಆತ ಹೇಳಿದ. ಅದರ ವರ್ತನೆಯಿಂದ ಅದು ಯಾವುದೋ ಬುದ್ಧಿವಂತಿಕೆಯ ಹತೋಟಿಗೆ ಒಳಪಟ್ಟಿದ್ದ ಆಕಾಶ ಯಂತ್ರವೆಂದು ತೋರುತ್ತದೆಂದು ಹೇಳಿದ. ಇನ್ನು ಮೂರು ಜನ ಸಾರಿಗೆ ಸಂಸ್ಥೆಯ ವೈಮಾನಿಕರೂ ಸಹ ರಿಚರ್ಡ್ ಕೇಸ್ ಹೇಳಿದ ವರದಿಯನ್ನೇ ಪುನಾರಾವರ್ತನೆ ಮಾಡಿದರು.

ವಾಯುದಳ ಈ ಸಾರಿ ಆ ಹಾರುವ ಯಂತ್ರಕ್ಕಿಂತ ಮಿಗಿಲಾಗಿ ಅದು ಇಂಡಿಯಾನ ಪೋಲೀಸ್ ನಗರದಲ್ಲಿ ಎಬ್ಬಿಸಿದ್ದ ಉನ್ಮತ್ತ ಸಮೂಹ ಸನ್ನಿಗೆ ದಿಗಿಲುಗೊಂಡಿದ್ದಿತು.

'ಫ್ಲೈಯಿಂಗ್ ಸಾಸರ್' ಮೊಟ್ಟಮೊದಲ ಬಾರಿಗೆ ದೊಡ್ಡನಗರ ಒಂದರ ಜನಸಂದಣಿಯ ಮೇಲೆ ಹಾರಿತ್ತು! 'ಫ್ಲೈಯಿಂಗ್ ಸಾಸರ್' ಗಳನ್ನು ಹತ್ತಿರದಿಂದ ವೀಕ್ಷಿಸಿದ ಸಾಮಾನ್ಯ ಜನರು ಯಾವ ರೀತಿ ಗಾಬರಿ ಬೀಳಬಹುದೆಂದು ಸರ್ಕಾರಕ್ಕೆ ಅಂದಾಜು ಬರತೊಡಗಿತು. ಅದು ವೇಗವಾಗಿ ಹಾರಿಹೊಯ್ತು. ಇಲ್ಲದೆ ಆ 'ಫ್ಲೈಯಿಂಗ್ ಸಾಸರ್' ಏನಾದರೂ ನಗರವನ್ನು ಸುತ್ತಿದ್ದರೆ! ಅಥವಾ ಮೇಲೆ ಕೆಲಕಾಲ ಸ್ಥಬ್ಧವಾಗಿ ನಿಂತಿದ್ದರೆ! ಅಥವಾ ಎಲ್ಲಾದರೂ ಇಳಿಯುವಂತೆ ಕೆಳಕೆಳಗೆ ಬಂದಿದ್ದರೆ ಅದರಿಂದುಂಟಾಗಬಹುದಿದ್ದ ನುಗ್ಗಾಟ ಗಲಭೆಗಳನ್ನು ಯಾರಿಗೂ ತಡೆಯಲಾಗುತ್ತಿರಲಿಲ್ಲ.

ತಮ್ಮ ತಲೆಯ ಮೇಲೆ ಹಾರಿಹೋದ ಫ್ಲೈಯಿಂಗ್‌ಸಾಸರು ಮತ್ತೇನಾದರೂ ಹಿಂದಿರುಗಿ ಬರಬಹುದೇನೊ ಎಂದು ಜನ ಕಾತರ ಭಯಗಳಲ್ಲಿ ಕಾಯುತ್ತ ಕುಳಿತರು. ಅದೃಷ್ಟವಶಾತ್ ಅದು ಹಿಂದಿರುಗಲಿಲ್ಲ. ಹಾಗಾಗಿ ನಿಧಾನವಾಗಿ ಸಾಮೂಹಿಕ ಅಶಾಂತಿ ಕಡಿಮೆಯಾಯ್ತು.

ಈ ಇಂಡಿಯಾನ ಪೋಲೀಸ್ ಗಲಭೆ ಕಡಿಮೆಯಾದಾಗ ವಾಯು ದಳದವರು ಸಮಾಧಾನದ ನಿಟ್ಟುಸಿರು ಬಿಟ್ಟರು. ಆದರೆ ಇದು ಮುಂದೆ

ಅಮೆರಿಕಾದಾದ್ಯಂತ ಏಳಬಹುದಾಗಿದ್ದ ಅಲ್ಲೋಲಕಲ್ಲೋಲಗಳಿಗೆ ಕೇವಲ ಮುನ್ನುಡಿಯಾಗಿತ್ತಷ್ಟೆ.

ಇದಾದ ಮಾರನೆ ದಿನ ಪ್ರಯಾಣಿಕನ್ನೊಯ್ಯುತ್ತಿದ್ದ DC-4 ವಿಮಾನದ ಎದುರು ಇದ್ದಕ್ಕಿದ್ದಂತೆ ಆರು 'ಫ್ಲೈಯಿಂಗ್ ಸಾಸರ್' ಗಳು ಕಂಡವು. DC-4 ವಿಮಾನದ ಚಾಲಕರು W.B.ನ್ಯಾಷ್ ಮತ್ತು ಫೊರ್ಟಿನ್ ಬೆರ್ರಿ. ಈ ಇಬ್ಬರೂ ತುಂಬಾ ಅನುಭವಸ್ಥರಾದ ಅನೇಕ ಸಾವಿರ ಗಂಟೆಗಳ ವಿಮಾನ ಹಾರಾಟದ ಅನುಭವವುಳ್ಳ ವೈಮಾನಿಕರು. ಇವರು ನೋಡುತ್ತಿದ್ದಂತೆಯೆ ಆರು 'ಫ್ಲೈಯಿಂಗ್ ಸಾಸರ್' ಗಳೂ ವಿಮಾನವನ್ನು ಕಂಡೊಡನೆ ತಮ್ಮ ವೇಗವನ್ನು ನಿಧಾನಮಾಡಿದವು. ಅವುಗಳ ವೇಗ ಕಡಿಮೆಯಾದಂತೆ ಅವುಗಳಿಂದ ಹೊಮ್ಮುತ್ತಿದ್ದ ಬಿಳಿಯ ಬೆಳಕು ನಿಧಾನವಾಗಿ ಹಳದಿಯಾಗುತ್ತ ಕೆಂಪು ಬಣ್ಣಕ್ಕೆ ತಿರುಗಿತು. ಅವು ವಿಮಾನದ ಬಳಿ ಬಂದು ಚಕ್ಕನೆ ಬಲಕ್ಕೆ ತಿರುಗಿ ಮತ್ತೆ V ಆಕಾರದಲ್ಲಿ ವ್ಯೂಹ ರಚಿಸಿಕೊಂಡು ವಿಮಾನಕ್ಕೆ ಕೊಂಚವೇ ಮುಂದೆ ಹಾರುತ್ತಾ ಹೋಗುವುದನ್ನು ವೈಮಾನಿಕರೊಡಗೂಡಿ ಎಲ್ಲರೂ ನೋಡಿದರು.

ಅವರೆಲ್ಲಾ ಈ ಅದ್ಭುತ ಯಂತ್ರಗಳನ್ನು ವೀಕ್ಷಿಸುತ್ತಿರುವಾಗ ವಿಮಾನದ ಕೆಳಗಿನಿಂದ ಇನ್ನೆರಡು 'ಫ್ಲೈಯಿಂಗ್ ಸಾಸರ್' ಗಳು ವೇಗವಾಗಿ V ವ್ಯೂಹದಲ್ಲಿ ಹೋಗುತ್ತಿದ್ದ ಆರು 'ಫ್ಲೈಯಿಂಗ್ ಸಾಸರ್' ಗಳನ್ನು ಮೀರಿಸಿ ಮುಂದೆ ಹೋದವು. ಆ ಯಂತ್ರಗಳು DC-4 ವಿಮಾನದ ನಾಲ್ಕರಷ್ಟು ದೊಡ್ಡದಾಗಿದ್ದವು. V ವ್ಯೂಹ ರಚಿಸಿಕೊಂಡು ಹೋಗುತ್ತಿದ್ದ ಆರು ಸಾಸರುಗಳೂ ಮಿಕ್ಕೆರಡು ಸಾಸರುಗಳು ತಮಗಿಂತ ಮುಂದೆ ಹೋದ ಕೂಡಲೇ ಅವುಗಳನ್ನು ಕೂಡಿಕೊಳ್ಳಲು ತಮ್ಮ ವೇಗವನ್ನು ಹೆಚ್ಚಿಸತೊಡಗಿದವು. ಅವುಗಳಿಂದ ಬರುತ್ತಿದ್ದ ಬೆಳಕು ಮತ್ತೆ ಕಿತ್ತಳೆ ಬಣ್ಣದಿಂದ ಬಿಳಿಯ ಬಣ್ಣಕ್ಕೆ ತಿರುಗಿತು. ೬ ಸಾಸರುಗಳೂ ತಮ್ಮಿಂದ ಮುಂದೆ ಹೋಗುತ್ತಿದ್ದ ಎರಡು ಸಾಸರುಗಳನ್ನು ಕ್ಷಣಮಾತ್ರದಲ್ಲಿ ಕೂಡಿಕೊಂಡು ಆಕಾಶದಲ್ಲಿ ಮಿಂಚಿನಂತೆ ಹೋದವು.

ಈ ವಿದ್ಯಮಾನದಿಂದ ಚಕಿತರಾದ ವೈಮಾನಿಕರು ನಾರ್‌ಫಾಕ್ ವಿಮಾನನಿಲ್ದಾಣಕ್ಕೆ ರೇಡಿಯೋ ಮೂಲಕ ವಿಷಯ ತಿಳಿಸಿದರು. ಅಲ್ಲಿ ವಾಯುದಳದ ಗೂಢಚಾರ ಇಲಾಖೆಯವರು ಕಾಯುತ್ತಾ ಇದ್ದರು. ವಿಮಾನದ ಎಲ್ಲ ಪ್ರಯಾಣಿಕರೂ ಈ ಸಂಗತಿಯ ಪ್ರೇಕ್ಷಕರಾಗಿದ್ದುದರಿಂದ ಈ ವರದಿಯನ್ನು ಗುಟ್ಟಾಗಿಡಲು ರಕ್ಷಣಾದಳಕ್ಕೆ ಸಾಧ್ಯವಾಗಲೇ ಇಲ್ಲ. ಗೂಢಚಾರ ಶಾಖೆಯ ವಿಶ್ಲೇಷಣೆಗೂ ಮೊದಲೇ ಈ ಸುದ್ದಿ ರೇಡಿಯೊ ಮತ್ತು ಪತ್ರಿಕೆಗಳ ಮುಖಾಂತರ ದೇಶದಾದ್ಯಂತ ಬಿತ್ತರಿಸಲಾಗಿತ್ತು. ಕ್ಯಾಪ್ಟನ್ ನ್ಯಾಷ್‌ರವರ ಅಂದಾಜು ಲೆಕ್ಕಾಚಾರದ ಪ್ರಕಾರ ಈ ಯಂತ್ರಗಳು ಗಂಟೆಗೆ ೪೦೦೦ ಮೈಲಿಗಿಂತ ಹೆಚ್ಚು ವೇಗದಲ್ಲಿ ಹೊರಟು ಹೋಗಿದ್ದವು.

ಈ ಘಟನೆಯಾದ ದಿನವೇ ಬಹಾಮಾ, ಹ್ಯಾಂಪ್ಟನ್, ವರ್ಜಿನೀಯಾ, ಇಂಡಿಯಾನ ಮುಂತಾದ ಅನೇಕ ಕಡೆಗಳಿಂದ ಸಾಲುಗಟ್ಟಿ 'ಫ್ಲೈಯಿಂಗ್ ಸಾಸರ್' ವರದಿಗಳು ಬರತೊಡಗಿದ್ದವು.

ಜನಕ್ಕೆ ಒಂದಂತೂ ಸ್ಪಷ್ಟವಾಯ್ತು. ತಮ್ಮ ದೇಶದ ವಿಮಾನ ನಿಲ್ದಾಣಗಳು, ನಗರಗಳು, ಆಯಕಟ್ಟಿನ ಸ್ಥಳಗಳು ಮತ್ತು ಕೈಗಾರಿಕೆಗಳು ಎಲ್ಲವನ್ನೂ ಒಂದೂ ಬಿಡದೆ ನಿರಂತರವಾಗಿ ಈ ಅಪರಿಚಿತ ಹಾರುವ ವಸ್ತುಗಳು ವೀಕ್ಷಿಸಿ ವಿಶ್ಲೇಷಿಸುತ್ತಿವೆ. ಇವುಗಳ ಶಕ್ತಿ ಸಾಮರ್ಥ್ಯದ ಎದುರು ನಾವು ಯಾವುದನ್ನೂ ರಹಸ್ಯವಾಗಿ ಇಡಲು ಸಾಧ್ಯವೇ ಇಲ್ಲ ಎನ್ನುವುದು.

ಇಡೀ ವಾಯುದಳಕ್ಕೆ ಯಾವ ಸಮಯದಲ್ಲಾದರೂ ಸಿದ್ದವಿದ್ದು 'ಫ್ಲೈಯಿಂಗ್ ಸಾಸರ್'ಗಳನ್ನು ಸಮೀಪಿಸಿ ಆದಷ್ಟು ಪರೀಕ್ಷಿಸಿ ವಿವರಗಳನ್ನು ಪಡೆಯಬೇಕೆಂದು ಆಜ್ಞೆ ಮಾಡಲಾಗಿತ್ತು. ಈವರೆಗೂ ಸಾಸರುಗಳ ವಿಷಯ ಎತ್ತಿ ಅಪಹಾಸ್ಯ ಮಾಡುತ್ತಿದ್ದ ಇಡೀ ಪತ್ರಿಕಾವರ್ಗ ಈಗ ಸಾಸರುಗಳ ಸಮಾಚಾರ ತಿಳಿಸಿರೆಂದು ವಾಯುದಳದ ಅಧಿಕಾರಿಗಳ ಮೇಲೆ ಇನ್ನಿಲ್ಲದಂತೆ ಒತ್ತಡ ತರತೊಡಗಿದ್ದವು. ಯಾವ ಮಾತಾಡಿದರೆ ಇನ್ಯಾವ ಕೋಲಾಹಲಕ್ಕೆ ಕಾರಣವಾಗುತ್ತದೆಯೊ ಎಂದು ವಾಯುದಳದ ವಕ್ತಾರನಾದ ಕ್ಯಾಪ್ಟನ್ ರೂಪೆಲ್ಟ್ ಆದಷ್ಟು ಮೌನವನ್ನೇ ಆಶ್ರಯಿಸಿದರು.

ಈ ಮೌನದ ದೆಸೆಯಿಂದ ಆದ ಅನಾಹುತವೆಂದರೆ ಪತ್ರಿಕೆಗಳು ವಿಚಿತ್ರವಾದ ಊಹಾಪೋಹಗಳನ್ನು ಬರೆಯತೊಡಗಿದವು. 'ಫ್ಲೈಯಿಂಗ್ ಸಾಸರ್' ಗಳು ರಷ್ಯಾದ ಆಧುನಿಕ ಯುದ್ಧ ಯಂತ್ರಗಳೆಂದು ಕೆಲವು ಪತ್ರಿಕೆಗಳು ಬರೆದು ನಾರ್ವೆಯಲ್ಲಿ ಒಂದು ಸಾಸರು ಕೆಟ್ಟು ನೆಲಕ್ಕೆ ಬಿತ್ತೆಂದೂ ಇದರಲ್ಲಿ ರಷ್ಯಾದ ಗುರುತುಗಳಿದ್ದುವೆಂದೂ ಹಬ್ಬಿಸಿದವು.

ಇದರೊಡನೆ ಪೂರ್ವಜರ್ಮನಿಯಿಂದ ತಪ್ಪಿಸಿಕೊಂಡು ಪಶ್ಚಿಮ ಜರ್ಮನಿಗೆ ಬಂದ ಓರ್ವ ಬರ್ಲಿನ್ ಮೇಯರ್ ಫ್ಲೈಯಿಂಗ್ ಸಾಸರು ಜರ್ಮನಿಯ ಪೂರ್ವ ಭಾಗದಲ್ಲಿ ನೆಲಕ್ಕಿಳಿದುದನ್ನು ಅದರೊಳಗಿಂದ ಮನುಷ್ಯರು ಹೊರಬಂದು ಮತ್ತೆ ಸಾಸರಿನೊಳಕ್ಕೆ ಹೋದದ್ದನ್ನು ಕಂಡೆನೆಂದು ಸಾಕಷ್ಟು ನಂಬಲರ್ಹವಾದ ಸಾಕ್ಷ್ಯಾಧಾರಗಳೊಡನೆ ವರದಿ ಮಾಡಿದ. ಆದರೆ ಅದು ರಷ್ಯಾ ನಿರ್ಮಿತ ಯಂತ್ರವೇ ಎಂದು ನಿಷ್ಕೃಷ್ಟವಾಗಿ ತಿಳಿಸಲು ಆತನ ಬಳಿ ಸಾಧ್ಯವಾಗಲಿಲ್ಲ.

ಇದೇ ರೀತಿ ಅನೇಕಾನೇಕ ಊಹಾಪೋಹಗಳು ಹಬ್ಬ ತೊಡಗಿದವು. ಇಷ್ಟೆಲ್ಲ ಆದರೂ ಪರಿಸ್ಥಿತಿ ಕೈ ಮೀರುವ ಹಂತಕ್ಕೆ ಹೋಗಿರಲಿಲ್ಲ. ಆದರೆ ಜೂನ್ ೨೦ರಂದು ಸರ್ಕಾರದ ಬುಡಕ್ಕೆ ಕೊಡಲಿಪೆಟ್ಟು ಬಿದ್ದಂತೆ ವಾಷಿಂಗ್‌ಟನ್‌ನಲ್ಲೆ ವೈಟ್‌ಹೌಸಿನ ಮೇಲೆ 'ಫ್ಲೈಯಿಂಗ್ ಸಾಸರ್'ಗಳ

ವಿದ್ಯಮಾನಗಳು ಜರುಗತೊಡಗಿದವು. ವಾಷಿಂಗ್‌ಟನ್ ನ್ಯಾಷನಲ್ ಏರ್‌ಪೋರ್ಟಿನ ರೇಡಾರ್ ಕಂಟ್ರೋಲ್ ಸೆಂಟರ್ ಈ 'ಜುಲೈ ಕ್ರೈಸಿಸ್'ನ ಕೇಂದ್ರವಾಗಿ ಪರಿಣಮಿಸಿತು.

ವಾಷಿಂಗ್‌ಟನ್ ವಿಮಾನ ನಿಲ್ದಾಣ ಜಗತ್ತಿನಲ್ಲಿ ಅತ್ಯಂತ ಹೆಚ್ಚು ವಿಮಾನಗಳ ಹಾರಾಟವನ್ನು ಹೊಂದಿರುವ ವಿಮಾನ ನಿಲ್ದಾಣ. ಈ ರೇಡಾರ್ ಕಂಟ್ರೋಲ್ ಸೆಂಟರಿನ ಕೆಲಸ ಏನೆಂದರೆ , ಇಳಿಯುವ ಮತ್ತು ಹಾರುವ ವಿಮಾನಗಳಿಗೆ ಒಂದಕ್ಕೊಂದು ಘರ್ಷಣೆಯಾಗಿ ಅಪಘಾತಗಳಿಗೆ ಒಳಗಾಗದಂತೆ ಅವುಗಳನ್ನು ರೇಡಾರ್ ಮೂಲಕವೇ ಗುರುತಿಸಿ ಸರಿಯಾದ ನಿರ್ದೇಶನ ಕೊಡುವುದು. ನಿರ್ದೇಶನ ಕೊಡುವುದರಲ್ಲಿ ಕೊಂಚವೇ ತಪ್ಪು ಮಾಡಿದರೂ ಸಹಸ್ರಾರು ಜನರ ಪ್ರಾಣಕ್ಕೆ ಸಂಚಕಾರ ಒದಗುತ್ತದೆ. ಆದ್ದರಿಂದಲೇ ಈ ಸೆಂಟರಿನಲ್ಲಿ ಜಗತ್ತಿನ ಅತ್ಯುತ್ತಮ ರೇಡಾರ್ ತಜ್ಞರು ಕೆಲಸ ಮಾಡುತ್ತಿರುವರು.

ಇದೊಂದು ಸೂಕ್ಷ್ಮ ಕೆಲಸ. ಈ ಜನ ವಿಮಾನಗಳನ್ನು ಕಣ್ಣಿಂದ ನೋಡುವುದಿಲ್ಲ. ರೇಡಾರ್ ಪರದೆಯ ಮೇಲೆ ಸುಮಾರು ನೂರು ಮೈಲುಗಳ ದೂರದಲ್ಲೇ ಸಣ್ಣಚುಕ್ಕೆಗಳಂತೆ ಕಾಣಿಸಿಕೊಳ್ಳುವ ವಿಮಾನಗಳನ್ನು ರೇಡಿಯೋ ಮೂಲಕವೆ ಸಂಪರ್ಕಿಸಿ ಅವುಗಳನ್ನು ಸರಿಯಾದ ದಾರಿಗೆ ನಿರ್ದೇಶಿಸಿ ಇಳಿಯುವಂತೆ ನೋಡಿಕೊಳ್ಳಬೇಕು. ರೇಡಾರ್ ಪರದೆಯ ಮೇಲೆ ಆ ವಿಮಾನಗಳ ದೂರ , ವೇಗ , ದಿಕ್ಕು , ಅವುಗಳು ಬರುವ ಸ್ಥಳಗಳನ್ನು ಕ್ಷಣಾರ್ಧದಲ್ಲೆ ಗುರುತಿಸಬೇಕು. ಇದಿಷ್ಟು ಸಂಕೀರ್ಣ ಕೆಲಸಗಳು ಆ ಕಂಟ್ರೋಲ್ ಕೊಠಡಿಯ ಅರೆಕತ್ತಲ ಕೋಣೆಯಲ್ಲಿ ನಡೆಯುತ್ತಿರುತ್ತದೆ. ವಿಮಾನದ ಚುಕ್ಕೆಗಳು ರೇಡಾರ್ ಪರದೆಯ ಮೇಲೆ ಬಂದಕೂಡಲೇ ಪರದೆಯ ಹಿಂದಿನಿಂದ ಬ್ಲಿಪ್ ಬ್ಲಿಪ್ ಎಂದು ಸದ್ದು ಬರತೊಡಗುತ್ತದೆ. ಆದ್ದರಿಂದ ವಿಮಾನಗಳಿಗೆ ಬ್ಲಿಪ್‌ಗಳೆಂದು ಕರೆಯುತ್ತಾರೆ.

ರೇಡಾರ್ ಉಪಕರಣ ಕೆಲಸ ಮಾಡುವ ರೀತಿಯನ್ನು ನಾವು ಕೊಂಚ ತಿಳಿಯುವುದು ಒಳ್ಳೆಯದು. ವಿಮಾನ ನಿಲ್ದಾಣದ ಹೊರಗೆ ದೊಡ್ಡದೊಂದು ತಟ್ಟೆಯಾಕಾರದ ರೇಡಾರ್ ಆ್ಯಂಟೆನ ಅಥವಾ ತಟ್ಟೆ ಗಿರಿ ಗಿರಿ ಆಕಾಶವನ್ನು ಸುತ್ತುಬಳಸಿ ತಿರುಗುತ್ತಾ ಇರುತ್ತದೆ. ಇದರಿಂದ ಹೊರಡುವ ರೇಡಾರ್ ತರಂಗಗಳು ಆಕಾಶದ ಎಲ್ಲೆಡೆಯನ್ನೂ ಪೊರಕೆ ಗುಡಿಸಿದಂತೆ ಆವರಿಸಿಕೊಂಡು ತಿರುಗುತ್ತಾ ಇರುತ್ತದೆ. ಇದಕ್ಕೆ ಸಂವಾದಿಯಾಗಿ ಕಂಟ್ರೋಲ್ ರೂಮಿನೊಳಗೆ ರೇಡಾರ್ ಪರದೆಯ ಮೇಲೆ ಒಂದು ಕ್ಯಾಥೋಡ್ ಬೆಳಕಿನ ಕೋಲು ಹತ್ತು ಸೆಕೆಂಡಿಗೆ ಒಂದು ಸಾರಿಯಂತೆ ಇಡೀ ರೇಡಾರ್ ಪರದೆಯನ್ನು ಗುಡಿಸುತ್ತಾ ಇರುತ್ತದೆ.

ರೇಡಾರ್ ಆ್ಯಂಟೆನ ರೇಡಾರ್ ತರಂಗಗಳಿಂದ ಇಡೀ

ಆಕಾಶವನ್ನು ಗುಡಿಸುತ್ತಾ ಸುತ್ತುತ್ತಿರಬೇಕಾದರೆ ಅದರಿಂದ ಹೊಮ್ಮಿದ ತರಂಗಗಳು ಆಕಾಶದ ಯಾವುದೇ ವಸ್ತುವಿಗೆ ತಾಗಿ ರೇಡಾರ್ ತಟ್ಟೆಗೆ ತರಂಗಗಳನ್ನು ಪ್ರತಿಫಲಿಸಿದರೂ ಅದು ತಕ್ಷಣವೇ ರೇಡಾರ್ ಪರದೆಯ ಮೇಲೆ ಚಿಕ್ಕ ಚುಕ್ಕೆಯ ರೂಪದ ಬ್ಲಿಪ್ ಆಗಿ ಕಾಣಿಸಿಕೊಳ್ಳುತ್ತದೆ. ಬಾತುಗಳು, ಹದ್ದುಗಳು ಗಾಳಿಗೆ ಹಾರಿದ ತಗಡು ಮುಂತಾದ ವಸ್ತುಗಳು ಈ ಪ್ರತಿಯೊಂದನ್ನೂ ರೇಡಾರ್ ಪತ್ತೆಹಚ್ಚಿ ಪರದೆಯ ಮೇಲೆ ಮೂಡಿಸುತ್ತದೆ. ಆದರೆ ರೇಡಾರ್ ತಜ್ಞರು ವಿಮಾನಗಳಲ್ಲದ ಯಾವುದೇ ವಸ್ತುವನ್ನೂ ರೇಡಾರ್ ಪರದೆಯ ಮೇಲೆ ಕ್ಷಣಾರ್ಧದಲ್ಲಿ ಪತ್ತೆ ಹಚ್ಚುವಷ್ಟು ನಿಷ್ಣಾತರಾಗಿರುತ್ತಾರೆ.

ಜೂನ್ ೨೦ರಂದು ಎಂಟು ಜನ ರೇಡಾರ್ ತಜ್ಞರ ಟೀಮು ಬಂದು ಆಗಲೇ ಕೆಲಸ ಮಾಡುತ್ತಿದ್ದ ಎಂಟು ಜನರನ್ನು ಕಳಿಸಿ ಕೆಲಸಕ್ಕೆ ಕುಳಿತರು. ಆ ಟೀಮಿನ ಮುಖ್ಯಸ್ಥ ರೇಡಾರ್ ತಜ್ಞ ಹ್ಯಾರಿ ಜಿ.ಬರ್ನೇಸ್. ಬರ್ನೇಸ್ ಡ್ಯೂಟಿಗೆ ಬಂದ ಕೂಡಲೇ ಎಲ್ಲಾ ರೇಡಾರ್ ಉಪಕರಣಗಳನ್ನೂ ಚೆಕ್ ಮಾಡಿ ಎಲ್ಲ ಪರದೆಗಳನ್ನೂ ಒಮ್ಮೆ ನೋಡಿ ಒಬ್ಬೊಬ್ಬರಿಗೆ ಒಂದೊಂದನ್ನು ವಹಿಸಿ ತನ್ನ ಟೇಬಲ್ಲಿಗೆ ಹೋದ. ಆಗ ಮಧ್ಯರಾತ್ರಿ, ಆಕಾಶ ಶುಭ್ರವಾಗಿತ್ತು. ಎಲ್ಲ ರೇಡಾರ್ ಪರದೆಗಳೂ ಖಾಲಿಯಿದ್ದವು. ಎಲ್ಲ ಪರದೆಗಳ ಮೇಲು ಸುಮ್ಮನೆ ಕ್ಯಾಥೋಡ್ ಬೆಳಕಿನ ಕೋಲುಗಳು ಗಿರಿಗಿರಿ ಎಂದು ಹತ್ತು ಸೆಕೆಂಡಿಗೆ ಒಂದು ಆವರ್ತನದಂತೆ ತಿರುಗುತ್ತಾ ಆಕಾಶ ಖಾಲಿಯಾಗಿರುವುದನ್ನು ತೋರಿಸುತ್ತಿದ್ದವು.

ಸರಿಯಾಗಿ ರಾತ್ರಿ ೧೨-೪೦ಕ್ಕೆ ಇದ್ದಕ್ಕಿದ್ದಂತೆ ಸ್ಪಷ್ಟವಾದ ಬ್ಲಿಪ್‌ಗಳು ಪರದೆಯ ಮೇಲೆ ಮೂಡಿದವು. ಕೆಲಸದ ಮೇಲಿದ್ದ ತಜ್ಞ ನೂಗೇಟ್ ಆಶ್ಚರ್ಯದಿಂದ ನೋಡಿದ. ಈ ವಿಚಿತ್ರ ಯಂತ್ರಗಳು ರೇಡಾರ್ ವಲಯದೊಳಕ್ಕೆ ಒಂದು ಕಡೆಯಿಂದ ಪ್ರವೇಶಿಸದೆ ಇದ್ದಕ್ಕಿದ್ದಂತೆ ಮಧ್ಯದಲ್ಲಿ ಹೇಗೆ ಕಾಣಿಸಿಕೊಂಡವು? ಆತನಿಗೆ ಅರ್ಥವಾಗಲಿಲ್ಲ. ಕ್ಯಾಥೋಡ್ ಬೆಳಕಿನ ಕೋಲು ಇಡೀ ಪರದೆಯನ್ನು ಹತ್ತು ಸೆಕೆಂಡಿಗೆ ಒಮ್ಮೆ ಸುತ್ತಿ ಬರುವುದರೊಳಗೆ ಅತ್ಯಂತ ವೇಗವಾಗಿ ಆ ಜಾಗಕ್ಕೆ ಬಂದಿವೆ! ಎಂದರೆ ಸೆಕೆಂಡಿಗೆ ೧೧೦ ಮೈಲಿಗಿಂತ ವೇಗವಾಗಿ ಅವು ರೇಡಾರ್ ವಲಯದೊಳಕ್ಕೆ ನುಗ್ಗಿ ಬಂದಿವೆ!

"ಬೇಗ ಬರ್ನೇಸ್ ಕರೆಯಿರಿ" ಎಂದು ರೇಡಾರ್ಸ್ ಅಪರೇಟರ್ ಕೋಪ್ಲಾಂಡ್ ಪಿಸುಗುಟ್ಟಿದ. ಬರ್ನೇಸ್ ಓಡೋಡುತ್ತ ಬಂದು ಬೇರೆ ಬೇರೆ ಸ್ಕೋಪ್‌ಗಳ ಮುಖಾಂತರ ಪರೀಕ್ಷಿಸಿದ. ಸ್ಪಷ್ಟವಾಗಿ ಬ್ಲಿಪ್‌ಗಳು ಎಲ್ಲ ಪರದೆಗಳ ಮೇಲೂ ಕಾಣಿಸತೊಡಗಿದ್ದವು. ಕೂಡಲೇ ರೇಡಾರ್ ಆ್ಯಂಟೆನ ಗೋಪುರಕ್ಕೆ ಬರ್ನೇಸ್ ಫೋನ್ ಮಾಡಿದ. ಅಲ್ಲಿಂದಲೂ ಉತ್ತರ ಬಂತು. "ನಮ್ಮ ಸ್ಕೋಪಿನ ಪರದೆಗಳ ಮೇಲೂ ಬ್ಲಿಪ್‌ಗಳು ಮೂಡಿವೆ. ಅಷ್ಟೇ ಅಲ್ಲ ಇಲ್ಲಿಗೆ ಕಣ್ಣಿಗೇ ಒಂದು ವಸ್ತು ಕಾಣತೊಡಗಿದೆ. ಅದರಿಂದ ಕಿತ್ತಳೆ ಬಣ್ಣದ ದೀಪ ಕಾಣುತ್ತಿದೆ"

ಎಂದು ಟ್ಯಾಂಟಿನ ಗೋಪುರದಿಂದ ಉತ್ತರ ಬಂತು.

ಬರ್ನೇಸ್‌ಗೆ ಈಗ ನಿಜವಾಗಿಯೂ ಚಿಂತೆಯಾಯ್ತು. ರೇಡಾರ್ ಯಂತ್ರದ ದೋಷವೇನೂ ಇರಲಿಲ್ಲ. ವಾಶಿಂಗ್ಟನ್ ಆಕಾಶದ ಮೇಲೆ ಯಾವುವೋ ಅಪರಿಚಿತ ಯಂತ್ರಗಳು ವೀಕ್ಷಣ ಹಾರಾಟ ನಡೆಸುತ್ತಿವೆ ! ಬರ್ನೇಸ್ ಕೂಡಲೇ ಏರ್ ಡಿಫೆನ್ಸ್ ಕಮಾಂಡಿಗೆ ರೇಡಿಯೋ ಸಂದೇಶ ಕಳಿಸಿದ. ಮಾತಾಡುತ್ತಿರಬೇಕಾದರೆ ಆತನ ಕಣ್ಣು ರೇಡಾರ್ ಪರದೆಯ ಮೇಲೆ ಇತ್ತು. ಈಗ ಮೂರು ಬ್ಲಿಪ್‌ಗಳು ಕಾಣಿಸುತ್ತಿದ್ದವು. ಒಂದು ಅಮೆರಿಕಾ ಅಧ್ಯಕ್ಷರ ನಿವಾಸಸ್ಥಾನವಾದ ವೈಟ್‌ಹೌಸ್ ಮೇಲೆಯೇ ವೀಕ್ಷಣೆ ನಡೆಸುತ್ತಿತ್ತು. ಇನ್ನೊಂದು ವಾಶಿಂಗ್ಟನ್ ಸಿಟಿ ಮೇಲೆ ನಿಂತಿತ್ತು. ಈ ಎರಡೂ ಕೂಡ ಪ್ರತಿಬಂಧಿಸಿದ ಸ್ಥಳಗಳಾಗಿದ್ದವು. ಮೇರಿಲ್ಯಾಂಡಿನ ಅಂಡ್ರೂಸ್ ನಿಲ್ದಾಣದಿಂದ ಉತ್ತರ ಬಂತು.

"ನಮಗೂ ಮೂರು ಬ್ಲಿಪ್‌ಗಳು ಕಾಣಿಸುತ್ತಿವೆ. ನೀವು ಗುರುತಿಸಿದ ಜಾಗದಲ್ಲೇ ನಮಗೂ ಕಾಣಸಿಕ್ಕಿವೆ."

"ನಮ್ಮಲ್ಲಿ ವೀಕ್ಷಕ ವಿಮಾನಗಳಿಲ್ಲ. ಅವು ಡೆನ್‌ವೇರ್‌ನಿಂದ ಬರಬೇಕು. ಅರ್ಧಗಂಟೆಯಾದರೂ ಆಗುತ್ತದೆ. ಪ್ರಯತ್ನಿಸುತ್ತೇನೆ" ಎಂದು ಏರ್ ಡಿಫೆನ್ಸ್ ಕಮಾಂಡಿನಿಂದ ಉತ್ತರ ಬಂತು.

ಈ ವೇಳೆಗೆ ಯಾವುದೋ ಒಂದು ವಿಮಾನ ನಿಲ್ದಾಣದ ಹತ್ತಿರಾಗುತ್ತಿತ್ತು. ರೇಡಾರ್ ತಜ್ಞ ಜೆಮ್ ರಿಕೆಟಿ ರೇಡಿಯೊ ಮುಖಾಂತರ ಆ ವಿಮಾನದ ಪೈಲೆಟ್‌ಗೆ ಯು.ಎಫ್.ಓ.ಗಳು ಇರುವ ಜಾಗಗಳನ್ನು ನಿರ್ದೇಶನ ಮಾಡಿ "ಬರುತ್ತಾ ಅವೇನೆಂದು ಹಾಗೇ ನೋಡಲು ಸಾಧ್ಯವೇ. ನಾನು ಕಂಟ್ರೋಲ್ ರೂಮಿನಿಂದಲೇ ನಿನಗೆ ಸರಿಯಾದ ನಿರ್ದೇಶನ ಕೊಡುತ್ತೇನೆ" ಎಂದು ಕೇಳಿಕೊಂಡ. ರೇಡಿಯೊ ಮುಖಾಂತರವೇ ರಿಕೆಟಿ ಆ ವಿಮಾನವನ್ನು ಯು.ಎಫ್.ಓ.ದ ಕಡೆ ಕೊಂಚ ದೂರ ನಿರ್ದೇಶಿಸತೊಡಗಿದ. ಆ ವಿಮಾನ ಯು.ಎಫ್.ಓ.ಗೆ ಕೊಂಚ ದೂರ ಇತ್ತು. ಇದ್ದಕ್ಕಿದ್ದಂತೆಯೇ ಆ ಮೂರು ಬ್ಲಿಪ್‌ಗಳು ರೇಡಾರ್ ಪರದೆಯಿಂದ ಮಾಯವಾಗಿ ಹೋದವು.

ಕ್ಯಾಥೋಡ್ ಕಿರಣ ಇನ್ನೊಂದು ಸುತ್ತು ಬಂದಾಗ ಮೂರು ಅಪರಿಚಿತ ಬ್ಲಿಪ್‌ಗಳೂ ಇರಲಿಲ್ಲ. ಅದನ್ನು ಶೋಧಿಸಲೆಂದು ನಿರ್ದೇಶಿಸಿದ ವಿಮಾನ ಮಾತ್ರ ಇತ್ತು. ೧೦ ಸಕೆಂಡಿನೊಳಗೆ ಆ ಯು.ಎಫ್.ಓ.ಗಳು ರೇಡಾರ್ ವ್ಯಾಪ್ತಿಯನ್ನೊ ಮೀರಿ ಮಾಯವಾಗಬೇಕಾದರೆ ಅವು ಕೊನೆಯ ಪಕ್ಷ ಗಂಟೆಗೆ ೧೦೦೦ ಮೈಲಿ ವೇಗದಲ್ಲಿಯಾದರೂ ಹೋಗಿರಬೇಕೆಂದು ರೇಡಾರ್ ನಿಷ್ಣಾತ ಬರ್ನೇಸ್ ಲೆಕ್ಕ ಹಾಕಿದ. ಅದನ್ನು ಪರೀಕ್ಷಿಸಂದು ನಿರ್ದೇಶಿಸುತ್ತಿದ್ದ ವಿಮಾನ ಚಾಲಕ ರೇಡಿಯೊ ಮುಖಾಂತರ ಹೇಳಿದ, "ನಾನು ಅವು ಮೂರೂ ಯಂತ್ರಗಳನ್ನು ಕಂಡೆ. ಅವು ಏನೆಂದು ತಿಳಿಯದಷ್ಟು ವೇಗದಲ್ಲಿ

ಮಿಂಚಿಹೋದವು" ಎಂದು. ಆ ವಿಮಾನವು ನಿಲ್ದಾಣದಲ್ಲಿ ಬಂದಿಳಿಯಿತು. ಆದರೆ ವೈಮಾನಿಕನನ್ನು ಪ್ರಶ್ನಿಸುವುದಕ್ಕೆ ಮೊದಲೇ ಮತ್ತೆ ರೇಡಾರ್ ಪರದೆಯ ಮೇಲೆ ಅಪರಿಚಿತ ಯು.ಎಫ್.ಓ. ಬ್ಲಿಪ್‌ಗಳು ಪ್ರತ್ಯಕ್ಷವಾದವು!

ಕಂಟ್ರೋಲ್ ರೂಮಿಗೆ ರೇಡಾರ್ ಗೋಪುರದಿಂದ ಕರೆ ಬಂತು. ಬರ್ನೆಸ್ ಕಾತುರನಾಗಿ ಫೋನ್ ಎತ್ತಿಕೊಂಡ. ಗೋಪುರದ ಆಪರೇಟರ್ ಜೋ ಜೆಕೋ ಮಾತನಾಡಿದ. ಆತ ತನ್ನ A.S.R ಸ್ಕೋಪ್ ಮುಖಾಂತರ ಯು.ಎಫ್.ಓ ವನ್ನು ಹಿಂಬಾಲಿಸುತ್ತಿದ್ದ. A.S.R ಸ್ಕೋಪ್ ಅತಿವೇಗದ ವಿಮಾನಗಳ ವೇಗವನ್ನು ನಿರ್ಧರಿಸುವ ಯಂತ್ರ. ಒಂದು ಯು.ಎಫ್.ಓ. ನ್ಯೂಯಾರ್ಕಿನ ಮೇಲಕ್ಕೆ ಬಂದ ವೇಗವನ್ನು ಅದು ಅಳೆದಿತ್ತು.

ಯು.ಎಫ್.ಓ. ಒಂದು ಸೆಕೆಂಡಿಗೆ ೨ಮೈಲಿ ವೇಗದಲ್ಲಿ ಬಂದಿತ್ತು. ಅಂದರೆ ಗಂಟೆಗೆ ೭೨೦೦ಮೈಲಿ ವೇಗ!

ಈಗ ಅನೇಕ ಯು.ಎಫ್.ಓ.ಗಳು ವಾಷಿಂಗ್‌ಟನ್ ಮೇಲೆ ಸುತ್ತುತ್ತಾ ಹಾರಾಡುತ್ತಿದ್ದವು. ಈವರೆಗೂ ವಾಶಿಂಗ್‌ಟನ್ ರೇಡಾರ್ ಕಂಟ್ರೋಲ್ ಸಿಬ್ಬಂದಿ ಯು.ಎಫ್.ಓ.ಗಳ ಬಗ್ಗೆ ಬಾಹ್ಯಾಕಾಶದ ಯಾತ್ರಿಕರ ಬಗ್ಗೆ ಹಾಸ್ಯ ಮಾಡಿಕೊಂಡು ನಗುತ್ತಾ ಇದ್ದವರೇ. ಆದರೆ ಜೂನ್ ೨೦ರ ರಾತ್ರಿ ವಾಶಿಂಗ್‌ಟನ್ ಆಕಾಶದಲ್ಲಿ ಸಂಭವಿಸಿದ ವಿದ್ಯಮಾನಗಳಿಂದ ಬೆವೆತು ಹೋಗತೊಡಗಿದ್ದರು. ಅನೇಕ ಯು.ಎಫ್.ಓ.ಗಳು ಅಲ್ಲಿ ಸುತ್ತತೊಡಗಿದ್ದವು. ರೇಡಾರ್ ಮುಖಾಂತರ , ಬರಿಕಣ್ಣಿಗೆ , ಹಾಗೂ ಟೆಲಿಸ್ಕೋಪ್‌ಗಳಲ್ಲಿ ಇಡೀ ಸಿಬ್ಬಂದಿವರ್ಗ ಸುಮಾರು ಗಂಟೆಗಳ ಕಾಲ ಈ ಯು.ಎಫ್.ಓ.ಗಳ ಮೆರವಣಿಗೆಯನ್ನು ವೀಕ್ಷಿಸಿತು. ಈ ಸೂಪರ್‌ಮೆಶೀನುಗಳ ಅದ್ಭುತ ಹಾರಾಟದ ವೈಖರಿಯನ್ನು ಎಲ್ಲ ನೋಡಿದರು.

ಅನೇಕ ಸಾರಿಗೆ ವಿಮಾನಗಳ ಪಕ್ಕದಲ್ಲೇ ಯು.ಎಫ್.ಓ.ಗಳು ಹಾರಾಡುತ್ತಾ ವೀಕ್ಷಣೆ ನಡೆಸಿದವು. ಫೈಟರ್ ವಿಮಾನಳು ಬೆನ್ನಟ್ಟಿದ ಕೂಡಲೇ ಫೈಟರ್ ವಿಮಾನಗಳಿಗಿಂತ ಹತ್ತುಪಟ್ಟು ವೇಗದಲ್ಲಿ ಮಾಯವಾಗತೊಡಗಿದವು.

ಸುಮಾರು ಬೆಳಗಿನ ಝಾವ ೫.೩೦ರ ಹೊತ್ತಿಗೆ ರೇಡಿಯೊ ಎಂಜಿನಿಯರ್ E.W. ಛೇಂಬರ್ಸ್ , ತನ್ನ ರಾತ್ರಿ ಪಾಳಿ ಮುಗಿಸಿ ಹೊರ ಬಂದಾಗ ಆತ ತಲೆಯ ಮೇಲೆ ಐದು ಅಗಾಧ ಗಾತ್ರದ ಸಾಸರುಗಳು ಸುತ್ತುತ್ತಾ ಇರುವುದನ್ನು ನೋಡಿದ. ಕೊಂಚಹೊತ್ತು ಹಾರಾಟ ನಡೆಸಿದ ಅವು ಇದ್ದಕ್ಕಿದ್ದಂತೆ ಉನ್ನತ್ತ ವೇಗದಲ್ಲಿ ಆತನ ಕಣ್ಣಿನಿಂದ ಮರೆಯಾದವು. ಬೆಳಗಾಗಿ ವಾಶಿಂಗಟನ್ನಿನ ಜನ ಹೊರ ಬರುವುದರೊಳಗೆ ಆಕಾಶದಿಂದ ಎಲ್ಲ ಯು.ಎಫ್.ಓ.ಗಳೂ ಕಣ್ಮರೆಯಾಗಿದ್ದವು. ಆದರೆ ಪತ್ರಿಕೆಗಳಲ್ಲಿ ಜೂನ್ ೨೦ರ ರಾತ್ರಿಯ ಸುದ್ದಿಗಳೆಲ್ಲಾ ಪ್ರಕಟವಾಗಿಬಿಟ್ಟವು. ಅಮೆರಿಕದಾದ್ಯಂತ ಗೊಂದಲ , ಕೋಲಾಹಲ ಎದ್ದಿತು. ಲಕ್ಷಾಂತರ ಕಾಗದಗಳು , ಟೆಲಿಗ್ರಾಮುಗಳು

ವೆಂಟಗಾನಿಗೆ ಪ್ರವಾಹದೋಪಾದಿಯಲ್ಲಿ ಬರತೊಡಗಿದವು.

"ಇವೇನಾದರೂ ಅಮೆರಿಕ ಮಿಲಿಟರಿಯ ರಹಸ್ಯ ಯಂತ್ರಗಳಾಗಿದ್ದಪಕ್ಷದಲ್ಲಿ ಅಮೆರಿಕಾ ಜನತೆ ಮನಃಸ್ವಾಸ್ಥ್ಯಕ್ಕಾಗಿ ದಯವಿಟ್ಟು ಸರ್ಕಾರ ನಿಜಸಂಗತಿಯನ್ನು ಹೇಳಿಬಿಡಲಿ" ಎಂದು ಪತ್ರಿಕೆಗಳು ಮನವಿ ಮಾಡಿಕೊಳ್ಳತೊಡಗಿದವು.

# ಯು.ಎಫ್.ಓ.ಗಳ ಮೂಲ ಬಾಹ್ಯಾಕಾಶದ ತಾರಾಮಂಡಲವೆ?

ಜುಲೈನಲ್ಲಿ ಅಮೆರಿಕದಾದ್ಯಂತ ಸಾಸರುಗಳ ಬಗ್ಗೆ ಎದ್ದ ಕೋಲಾಹಲ ತಾನಾಗಿಯೇ ತಣ್ಣಗಾಗಬಹುದೆಂದು ಯು.ಎಫ್.ಓ. ವಕ್ತಾರರು ಕಾಯತೊಡಗಿದರು. ಏಕೆಂದರೆ ಜಗತ್ತಿನ ಅತ್ಯಂತ ಬಲಿಷ್ಠ ವಾಯುಪಡೆಯೆಂದು ಹೆಸರಾದ ಅಮೆರಿಕದ ವಾಯುದಳ ಈ ಸಾಸರುಗಳ ಬಗ್ಗೆ ತಮ್ಮ ದಿಗ್ಭ್ರಾಂತಿಯನ್ನು ವ್ಯಕ್ತಪಡಿಸಿದರೆ ಅಮೆರಿಕದ ಜನಸಾಮಾನ್ಯರಲ್ಲಿ ಮೂಡಿಸ ಬಹುದಾದ ಕಳವಳದ ಬಗ್ಗೆ ಅವರು ಹೆದರಿದರು. ಆದರೆ ವಾಯುಪಡೆಯ ಈ ಮೌನ ಅನೇಕ ಊಹಾಪೋಹಗಳಿಗೆ ಎಡೆಕೊಟ್ಟಿತು. ಪ್ರತಿಷ್ಠಿತ ಪತ್ರಿಕೆಗಳೂ ಸಹ ತರತರದ ಗಾಳಿಸುದ್ದಿಗಳನ್ನು ಪ್ರಚಾರಮಾಡ ತೊಡಗಿದವು. ಅದರಲ್ಲಿ ಒಂದು ಅಮೆರಿಕದ ಅಧ್ಯಕ್ಷರು , ಅಮೆರಿಕಾ ದೇಶದ ಆಕಾಶದ ಸರಹದ್ದನ್ನು ಉಲ್ಲಂಘಿಸಿದ ಸಾಸರುಗಳನ್ನು ಹೊಡೆದುರುಳಿಸಿ ಎಂದು ವಾಯುಪಡೆಗಳಿಗೆ ಸೂಚಿಸಿದ್ದಾರೆ ಎನ್ನುವ ವಾರ್ತೆ.

ಈ ವಾರ್ತೆಯನ್ನು ಓದಿದ ಅಮೆರಿಕದ ಜನಸಾಮಾನ್ಯರೂ , ಬುದ್ಧಿಜೀವಿಗಳೂ ಇನ್ನಷ್ಟು ತಲ್ಲಣಗೊಂಡರು. ನ್ಯಾಸಾದ ವಿಜ್ಞಾನಿಗಳು ಸಮಾವೇಶ ಒಂದರಲ್ಲಿ ಇದನ್ನು ಚರ್ಚಿಸಿದರು. ಅನಂತರ ರಾಬರ್ಟ್ ಎಲ್ ಪ್ರಾನ್ಸ್‌ವರ್ತ್ , ಅಮೆರಿಕ ಸಂಯುಕ್ತ ಸಂಸ್ಥಾನದ ರಾಕೆಟ್ ಸೊಸೈಟಿ ಅಧ್ಯಕ್ಷರು ವೈಟ್‌ಹೌಸಿಗೆ ಒಂದು ಟೆಲಿಗ್ರಾಂ ಸಂದೇಶವನ್ನು ಕಳಿಸಿದರು. ಅಮೆರಿಕಾದ ಅಧ್ಯಕ್ಷರಿಗೆ ವಿಜ್ಞಾನಿ ಪ್ರಾನ್ಸ್‌ವರ್ತ್ ಕಳಿಸಿದ ಸಂದೇಶ ಹೀಗಿದೆ:

"ನಾವು ಗೌರವಯುತವಾಗಿ ತಮಗೆ ತಿಳಿಸುವುದೇನೆಂದರೆ , ಈ ಅಪರಿಚಿತ ಹಾರುವ ವಸ್ತುಗಳ ವಿರುದ್ಧ ಯಾವುದೇ ರೀತಿಯ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳಬಾರದೆಂದು ವಿನಂತಿಸಿಕೊಳ್ಳುತ್ತೇವೆ. ಭೂಗ್ರಹಕ್ಕೆ ಅತೀತವಾದ ಈ ವಸ್ತುಗಳ ಬಗ್ಗೆ ಏನಾದರೂ ಪ್ರತೀಕಾರ ಕ್ರಮ ಕೈಗೊಂಡಲ್ಲಿ ಅದರ ಪರಿಣಾಮ ಭಯಂಕರವಾದೀತೆಂದು ನಮಗನ್ನಿಸುತ್ತದೆ. ಅಷ್ಟಲ್ಲದೆ ಬಾಹ್ಯಾಕಾಶದ ನಮಗಿಂತ ಮುಂದುವರಿದ ಜೀವಿಗಳಿಂದ ನಾವು ಪ್ರತ್ಯೇಕಿಸಲ್ಪಡುತ್ತೇವೆ. ಏನೇ ಆದರೂ ಮೈತ್ರಿಯುತ ಸಂಪರ್ಕಕ್ಕಾಗಿ ನಾವು ಕೈಲಾದಷ್ಟು ಪ್ರಯತ್ನಿಸುತ್ತಿರುವುದು ಒಳ್ಳೆಯದೆಂದೂ ನಮ್ಮ ಅಭಿಪ್ರಾಯ."

ಈ ಸಂದೇಶವನ್ನು ಅಮೆರಿಕಾದ ಅಧ್ಯಕ್ಷರಿಗೆ ಕಳಿಸಿದ ಅನಂತರ ಅದನ್ನು ಅವರು ಪತ್ರಿಕೆಗಳಿಗೂ ಬಿಡುಗಡೆ ಮಾಡಿದರು. ಈ ಮನವಿ

ಅಮೆರಿಕದ ಅತ್ಯುನ್ನತ ವಿಜ್ಞಾನಿಗಳ ಅಭಿಪ್ರಾಯವಾಗಿತ್ತು. ಆಗ ವಾಯುದಳದ ಮುಖ್ಯಸ್ಥರಾಗಿದ್ದವರು ಜನರಲ್ ಸ್ಯಾಂಫರ್ಡ್, ಹಾರುವ ಸಾಸರುಗಳು ವಾಯುದಳಕ್ಕೆ ಪತ್ರಿಕಾ ಹೇಳಿಕೆ ನೀಡಿ ಜನರ ಸಂಶಯ, ಭಯಗಳನ್ನು ನಿವಾರಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದ್ದವು.

ಜುಲೈ ಕ್ರೈಸಿಸ್ ಅನಂತರ ಹಲವಾರು ಮುಖ್ಯ ಸಂಗತಿಗಳು ಸಂಭವಿಸಿದವು. ವಾಯುದಳ ಇದನ್ನು ಗುಟ್ಟಾಗಿಡದೇ ಪತ್ರಿಕೆಗಳಿಗೆ ಆಗಿಂದಾಗ್ಗೆ ಬಿಡುಗಡೆ ಮಾಡಿತು. ತಮ್ಮ ಯು.ಎಫ್.ಓ. ಕುರಿತಾದ ಸಂಶೋಧನೆಯಲ್ಲಿ ಪತ್ರಿಕೆಗಳನ್ನೂ ಜನರನ್ನೂ ಪಾಲುದಾರರನ್ನಾಗಿ ಮಾಡಿಕೊಳ್ಳಲು ವಾಯುದಳ ಈ ಕ್ರಮ ಕೈಗೊಂಡಿತ್ತು. ಇದರಲ್ಲಿ ಮೆಕ್ಸಿಕೋ ಕೊಲ್ಲಿಯ ಘಟನೆ ಹಾರುವ ಸಾಸರುಗಳ ಬಗ್ಗೆ ಮುಂದೆ ಬರಬಹುದಾದ ವಿವರಣೆಗಳ ದೃಷ್ಟಿಯಿಂದ ಬಹುಮುಖ್ಯವಾದುದು.

ಅಮೆರಿಕಾದ ಅತಿದೊಡ್ಡ ಬಾಂಬರ್ ವಿಮಾನಗಳಲ್ಲಿ ಒಂದಾದ B-29 ವಿಮಾನ ಟೆಕ್ಸಾಸ್‌ನ ತನ್ನ ನೆಲೆಗೆ ಬೆಳಗಿನ ಝಾವ ೫.೨೪ಕ್ಕೆ ಹಿಂದಿರುಗುತ್ತಿದ್ದಾಗ ಸಂಭವಿಸಿದ ಘಟನೆ ಇದು. ಈ ಬಾಂಬರ್ ವಿಮಾನಕ್ಕೆ ವಿಮಾನದೊಳಗೇ ರೇಡಾರ್ ಉಪಕರಣವಿರುತ್ತದೆ. ಭೂ ಮತ್ತು ನೌಕಾ ನೆಲೆಗಳಿಂದ ಆಕಾಶವನ್ನು ವಿಶ್ಲೇಷಣೆ ಮಾಡುವಂತೆಯೇ B-29 ಬಾಂಬರ್ ವಿಮಾನದಿಂದಲೂ ಆಕಾಶವನ್ನು ರೇಡಾರ್ ವಿಶ್ಲೇಷಣೆಗೆ ಒಳಪಡಿಸಬಹುದು.

ಲೂಸಿಯಾನಾದಿಂದ ಸುಮಾರು ನೂರು ಮೈಲುಗಳಷ್ಟು ದೂರದಲ್ಲಿ ಮೆಕ್ಸಿಕೋ ಕೊಲ್ಲಿಯ ಮೇಲೆ ಗಸ್ತಿನ ಹಾರಾಟ ಮಾಡುತ್ತಿದ್ದ ಈ ವಿಮಾನಕ್ಕೆ ಕ್ಯಾಪ್ಟನ್ ಜಾನ್ ಹಾರ್ಟ್‌ರ್ ಪೈಲೆಟ್ ಆಗಿದ್ದರು. ಹಾರ್ಟ್‌ರ್ ವಿಮಾನದೊಳಕ್ಕೆ ಬಗ್ಗಿ ರೇಡಾರ್ ಆಪರೇಟರ್ ಆಗಿದ್ದ ಲೆಫ್ಟಿನೆಂಟ್ ಕೋಲ್‌ಮನ್‌ಗೆ ರೇಡಾರ್ ಸೆಟ್ಟನ್ನ ಚಾಲೂ ಮಾಡಿ ದೂರದ ಸಮುದ್ರ ತೀರವನ್ನು ವಿಶ್ಲೇಷಿಸುವಂತೆ ತಿಳಿಸಿದರು. ರೇಡಾರ್ ಪರದೆಯೊಂದು ವೈಮಾನಿಕರ ಕಾಕ್‌ಪಿಟ್‌ನ ಎದುರು ಸಹ ಇತ್ತು.

ಕೋಲ್‌ಮನ್ ಒಳಗೆ ಮುಖ್ಯ ರೇಡಾರ್ ಪರದೆ ಎದುರು ಕುಳಿತು ದೂರದ ಸಮುದ್ರ ತೀರದತ್ತ ರೇಡಾರ್ ತರಂಗಗಳನ್ನು ಹಾಯಿಸುತ್ತಾ ಇದ್ದರು. ೫ ಗಂಟೆ ೨೫ ನಿಮಿಷಕ್ಕೆ ಸರಿಯಾಗಿ ರೇಡಾರ್ ಕಿರಣ ಪರದೆಯನ್ನು ಸುತ್ತುತ್ತಾ ಇರಬೇಕಾದರೆ ರೇಡಾರ್ ಪರದೆಯ ಒಂದು ಮೂಲೆಯಲ್ಲಿ ಹಠಾತ್ತಾಗಿ ಒಂದು ಚುಕ್ಕೆ ಅಥವಾ ಬ್ಲಿಪ್ ಕಾಣಿಸಿಕೊಂಡಿತು. ರೇಡಾರ್ ಕಿರಣ ಪರದೆಯನ್ನು ಇನ್ನೊಂದು ಸುತ್ತು ಬಂದಾಗ ಮತ್ತೆ ಆ ಬ್ಲಿಪ್ ಪರದೆಯ ಮೇಲೆ ಕಾಣಿಸಿಕೊಂಡ ಜಾಗನೋಡಿ ಕೋಲ್‌ಮನ್ ಬೆಚ್ಚಿಬಿದ್ದರು.

ರೇಡಾರ್ ಕಿರಣ ಪರದೆಯ ಸುತ್ತ ಸುತ್ತಿ ಬರುವ ಮೂರು

ಕ್ಷಣದಲ್ಲಿ ಆ ಬ್ಲಿಪ್ ಹದಿಮೂರು ಮೈಲಿ ಚಲಿಸಿತ್ತು!

ಮೂರನೇ ಸುತ್ತು ಬರುವುದರೊಳಗೆ ಆ ಯು.ಎಫ.ಓ. ಇನ್ನಷ್ಟು ಮುಂದಕ್ಕೆ B-29 ವಿಮಾನದತ್ತಲೇ ದಿಕ್ಕು ಬದಲಾಯಿಸಿತ್ತು. ಇನ್ನೊಬ್ಬ ಆಪರೇಟರ್ ಸಾರ್ಜಂಟ್ ಬೇಯ್ಲಿಗೆ ಕೋಲ್‌ಮನ್ ಕೂಗಿ ಕೇಳಿಕೊಂಡರು.

"ಬೇಯ್ಲಿ ಇದ್ಯಾವುದೋ ಅಪರಿಚಿತ ವಸ್ತು ಹಾರಿ ಬರುತ್ತಿದೆ, ಇದರ ವೇಗ ವಿಶ್ಲೇಷಿಸಲು ಸಹಾಯ ಮಾಡು"

ಇಬ್ಬರೂ ದಿಗ್ಭ್ರಾಂತಿಯಿಂದ ಕಂಪ್ಯೂಟರ್ ಮುಖಾಂತರ ಲೆಕ್ಕ ಹಾಕಿದರು.

ಅದು ಹಾರಿ ಬರುತ್ತಿದ್ದ ವೇಗ ಗಂಟೆಗೆ ೫೨೪೦ ಮೈಲಿ!

"ಕ್ಯಾಪ್ಟನ್ ನಿಮ್ಮೆದುರಿರುವ ಸ್ಕೋಪಿನತ್ತ ಕೊಂಚ ಕಣ್ಣಿಡಿ, ಈಗ ತಾನೇ ಯಾವುದೋ ಅಪರಿಚಿತ ವಸ್ತು ಸುಮಾರು 5000 ಮೈಲು ವೇಗದಲ್ಲಿ ಬರುತ್ತಿರುವುದು ಕಂಡಿದೆ" ಎಂದು ಕೋಲ್‌ಮನ್ ವಿಮಾನದ ಪೈಲೆಟ್ ಕ್ಯಾಪ್ಟನ್ ಹಾರ್ಟರ್‌ಗೆ ಹೇಳಿದ.

"ಛೇ ಛೇ ಅಸಾಧ್ಯ! ರೇಡಾರ್ ಸ್ಕೋಪು ಸರಿ ಇದೆಯೋ ಕೊಂಚ ನೋಡು" ಎಂದು ಕ್ಯಾಪ್ಟನ್ ಹೇಳಿದ.

ಮತ್ತೆ ಕೋಲ್‌ಮನ್ ಸ್ಕೋಪಿನತ್ತ ಗಮನ ಹರಿಸಿದ. ಸಾರ್ಜಂಟ್ ಬೇಯ್ಲಿ ರೇಡಾರ್ ಪರದೆಯತ್ತ ದೃಷ್ಟಿ ಕೀಲಿಸಿಕೊಂಡು ಕುಳಿತ.

ಒಂದು ಕ್ಷಣ ಕಳೆಯಿತು. ವಿಮಾನದ ಇನ್ನೊಂದು ಮೂಲೆಯಿಂದ "ನನ್ನ. ರೇಡಾರ್ ಪರದೆಯ ಮೇಲೂ ಬ್ಲಿಪ್ ಕಾಣಿಸಿಕೊಂಡಿದೆ" ಎಂದು ನ್ಯಾವಿಗೇಟರ್ ಕ್ಯಾಸಿಡಿ ಇಂಟರ್‌ಕಾಂನಲ್ಲಿ ಹೇಳಿದ.

ಅಷ್ಟರಲ್ಲಿ ಕ್ಯಾಪ್ಟನ್ ಹಾರ್ಟರ್ ಧ್ವನಿ ಕಾಕ್‌ಪಿಟ್‌ನ ಕಡೆಯಿಂದ ಬಂತು.

"ನನ್ನ ರೇಡಾರ್ ಪರದೆಯ ಮೇಲೆ ನಾಲ್ಕು ಅಪರಿಚಿತ ವಸ್ತುಗಳು ನನ್ನ ವಿಮಾನದ ನೇರಕ್ಕೆ. ಕಾಣಿಸಿಕೊಂಡಿವೆ, ನಿಮ್ಮ ರೇಡಾರ್‌ಗಳನ್ನು ಪರೀಕ್ಷಿಸಿ."

ಈ ವೇಳೆಗಾಗಲೇ ಆ ಅಪರಿಮಿತ ವೇಗದ ವಸ್ತುಗಳು ತಮ್ಮ ವಿಮಾನವನ್ನು ಸಮೀಪಿಸಿರಬಹುದೆಂದು ಊಹಿಸಿದ ಸಾರ್ಜಂಟ್ ಬೇಯ್ಲಿ ನೆಗೆದು ವಿಮಾನದ ಕಿಟಕಿಯಿಂದ ಇಣುಕಿದ. ಬೇಯ್ಲಿ ಕಣ್ಣಿಗೆ ವಿಮಾನದ ರೆಕ್ಕೆಗೆ ಕೊಂಚ ದೂರದಲ್ಲಿ ಪ್ರಕಾಶಮಾನವಾದ ಹಾರುವ ಸಾಸರೊಂದು ಮಿಂಚಿಹೋಯಿತು. ಅದನ್ನು ಇತರರಿಗೆ ಆತ ತಿಳಿಸಬೇಕೆನ್ನುವಷ್ಟರೊಳಗೆ ಎಲ್ಲರ ರೇಡಾರ್ ಪರದೆಗಳ ಮೇಲೂ ಒಂದು ಗುಂಪು ಬ್ಲಿಪ್‌ಗಳು ಕಾಣಿಸಿಕೊಂಡವು. ಅವು ನೇರವಾಗಿ ವಿಮಾನದತ್ತಲೇ ಬರುತ್ತಿದ್ದವು. ಅವು ವಿಮಾನಕ್ಕೆ ಡಿಕ್ಕಿ ಹೊಡೆಯುವ

ಸಂಭವ ಕಡಿಮೆ ಇದ್ದರೂ ಅವುಗಳ ಉನ್ನತ್ತ ವೇಗದಲ್ಲಿ ಏನಾಗಬಹುದು ಎಂದು ಹೇಳಲು ಯಾರಿಗೂ ಸಾಧ್ಯವಿರಲಿಲ್ಲ. ಆ ಬ್ಲಿಪ್‌ಗಳು ಕ್ಷಣಾರ್ಧದಲ್ಲಿ ರೇಡಾರ್ ವ್ಯಾಪ್ತಿಯನ್ನು ಮೀರಿ ಮಾಯವಾದವು. ಇದಾದನಂತರ ಸುಮಾರು ಆರು ನಿಮಿಷ ಆಕಾಶವೆಲ್ಲಾ ಖಾಲಿಯಾಗಿತ್ತು. ವಿಮಾನದ ಸಿಬ್ಬಂದಿಯೆಲ್ಲ ತಾವು ಕಂಡಿದ್ದು ನಿಜವೋ ಭ್ರಾಂತಿಯೋ ಎಂದು ಯೋಚಿಸುತ್ತ ಸುಧಾರಿಸಿಕೊಳ್ಳುತ್ತಿದ್ದರು.

ಕೋಲ್‌ಮನ್ ಪರದೆಯ ಮೇಲೆ ಇದ್ದಕ್ಕಿದ್ದಂತೆ ಮತ್ತೆ ಒಂದು ಗುಂಪು ಬ್ಲಿಪ್‌ಗಳು ಪ್ರತ್ಯಕ್ಷವಾದವು. ಕೋಲ್‌ಮನ್ ಮತ್ತು ಸಾರ್ಜಂಟ್ ಬೇಯ್ಲಿ ಮತ್ತೆ ಅವುಗಳ ವೇಗವನ್ನು ಕಂಪ್ಯೂಟರ್‌ನಲ್ಲಿ ವಿಶ್ಲೇಷಿಸಿದರು. ಅವು ಎಂದಿನಂತೆ ೫೦೦೦ ಮೈಲುಗಳನ್ನು ಮೀರಿತ್ತು.

ವಿಮಾನದ ಕಾಕ್‌ಪಿಟ್‌ನಲ್ಲಿ ಕುಳಿತಿದ್ದ ಕ್ಯಾಪ್ಟನ್ ಹಾರ್ಟರ್ ಕಣ್ಣುಗಳು ಅಲ್ಲಿದ್ದ ರೇಡಾರ್ ಪರದೆಯ ಮೇಲೆ ನೆಟ್ಟು ಹೋಗಿತ್ತು. ವಿಮಾನದ ಹಿಂದೆ ಸುಮಾರು ४೦ ಮೈಲಿ ದೂರದಲ್ಲಿ ೫ ಅಪರಿಚಿತ ವಸ್ತುಗಳು ಭಯಂಕರ ವೇಗದಲ್ಲಿ ಹಾರುತ್ತಿದ್ದವು. ಅವುಗಳು ಇದ್ದಕ್ಕಿದ್ದಂತೆ ದಿಕ್ಕು ಬದಲಿಸಿ ವಿಮಾನದತ್ತ ತಿರುಗುತ್ತಲೂ , ಕ್ಯಾಪ್ಟನ್ ಹಾರ್ಟರ್ ಬೆವರತೊಡಗಿದ! ಏಕೆಂದರೆ ಅವು ಆ ವೇಗದಲ್ಲಿ ವಿಮಾನವನ್ನು ಸಮೀಪಿಸಲು ಅವಕ್ಕೆ ಕೇವಲ ಎರಡೂವರೆ ಸೆಕೆಂಡುಗಳು ಸಾಕಿತ್ತು.

ಗಾಬರಿಬಿದ್ದ ಹಾರ್ಟರ್ ತನ್ನ ವಿಮಾನದ ರಡ್ಡರ್ ಹಿಡಿದು ವಿಮಾನವನ್ನು ಅತ್ತಿತ್ತ ತಿರುಗಿಸಬೇಕೆಂದು ಯೋಚಿಸುತ್ತಿರುವಾಗಲೇ ಇನ್ನೊಂದು ವಿಚಿತ್ರ ಘಟನೆ ನಡೆಯಿತು. ವಿಮಾನವನ್ನು ಸಮೀಪಿಸಿದ್ದ ಸಾಸರುಗಳು ಇದ್ದಕ್ಕಿದ್ದಂತೆಯೇ ತಮ್ಮ ವೇಗವನ್ನು B-29 ವಿಮಾನದ ವೇಗಕ್ಕೆ ತಗ್ಗಿಸಿಕೊಂಡು ವಿಮಾನದ ನಿರೀಕ್ಷಣೆ ಮಾಡುತ್ತ ಹಾರತೊಡಗಿದವು. ಸುಮಾರು ಆರು ನಿಮಿಷಗಳ ಕಾಲ ವಿಮಾನ ವೀಕ್ಷಣೆ ಮಾಡುತ್ತಾ ಹಾರಿದ ಅವು ಮತ್ತೆ ವೇಗವನ್ನು ಹೆಚ್ಚಿಸಿಕೊಂಡು ವಿಮಾನವನ್ನು ಮೀರಿಸಿ ಮುಂದೆ ಹೋದವು. ರೇಡಾರ್ ಮುಖಾಂತರ ಅವನ್ನು ಹಿಂಬಾಲಿಸುತ್ತಿದ್ದ ವಿಮಾನದ ಸಿಬ್ಬಂದಿಗೆ ಆಕಾಶದಲ್ಲಿ ತುಂಬ ಎತ್ತರದಲ್ಲಿ ಇನ್ನೊಂದು ದೊಡ್ಡ ಬ್ಲಿಪ್ ಕಾಣಿಸಿತು. ಅದು ರೇಡಾರ್ ಪರದೆಯ ಮೇಲೆ ಕಾಣಿಸಿಕೊಂಡ ಗಾತ್ರದಿಂದಲೇ ಅದು ಅತಿದೊಡ್ಡ ಆಕಾಶಯಂತ್ರವಿರಬೇಕೆಂದು ಹಾರ್ಟರ್ ಲೆಕ್ಕ ಹಾಕಿದ.

B-29 ವಿಮಾನವನ್ನು ಮೀರಿಸಿ ಹಾರಿ ಮುಂದೆ ಹೋದ ಸಾಸರುಗಳು ಅದೇ ವೇಗದಲ್ಲಿ (ಎಂದರೆ ಗಂಟೆಗೆ ೫೨४೦ ಮೈಲು) ನೇರವಾಗಿ ಆ ದೊಡ್ಡ ಬ್ಲಿಪ್ ಕಡೆಗೆ ಧಾವಿಸಿ ಒಂದೊಂದಾಗಿ ಅದರೊಳಗೆ ಐಕ್ಯವಾದವು. ತಕ್ಷಣ ಆ ದೊಡ್ಡ ಆಕಾಶಯಂತ್ರದ ವೇಗ ವರ್ಧಿಸತೊಡಗಿತು. ಕಣ್ಣು ಮಿಟುಕಿಸುವುದರೊಳಗೆ ಆ ದೊಡ್ಡ ಬ್ಲಿಪ್ ರಾಡಾರ್ ಪರದೆಯ ಮೇಲೆ

ಮಿಂಚಿನಂತೆ ಮುಂದುವರಿದು ರೇಡಾರ್ ಪರಿಧಿಯಿಂದಲೇ ಮಾಯವಾಯ್ತು. ಹಾರ್ಟರ್‌ಗೆ ತಾನು ಕಂಡಿದ್ದು ನಿಜವೋ ಸುಳ್ಳೋ ಎಂದು ಗಾಬರಿಯಾಯ್ತು.

ಕೆಲವು ಕ್ಷಣಗಳ ನಂತರ ಇಂಟರ್‌ಕಾಮ್‌ನಲ್ಲಿ ಕೋಲ್‌ಮನ್ ದನಿ ಕೇಳಿಸಿತು.

"ಕ್ಯಾಪ್ಟನ್ ರೇಡಾರ್ ಪರದೆ ನೋಡುತ್ತಿದ್ದೀರಾ?"

"ಹೌದು ನೋಡುತ್ತಿದ್ದೆ.

"ಆ ದೊಡ್ಡ ಬ್ಲಿಪ್ ವೇಗವನ್ನು ಕಂಪ್ಯೂಟರಿನಲ್ಲಿ ವಿಶ್ಲೇಷಿಸಿದೆವು, ಹೇಳಿದರೆ ನೀವು ನಂಬುವುದಿಲ್ಲ, ಅದರ ವೇಗ ಎಷ್ಟು ಗೊತ್ತೇ? ಗಂಟೆಗೆ ೯,೦೦೦ ಮೈಲಿ!"

"ನನಗೆ ನಂಬಿಕೆ ಬಂತು, ನಾನೂ ಅಷ್ಟೇ ಅಂದಾಜು ಮಾಡಿದ್ದೆ" ಕ್ಯಾಪ್ಟನ್ ಹಾರ್ಟರ್ ಹೇಳಿದ.

B-29 ವಿಮಾನ ಟೆಕ್ಸಾಸಿನ ತನ್ನ ನೆಲೆಯ ಕಡೆಗೆ ತನ್ನ ಯಾನ ಮುಂದುವರಿಸಿತು. ಉದ್ದಕ್ಕೂ ಇನ್ನೇನಾದರೂ ಸಂಭವಿಸೀತೋ ಎಂದು ಸಿಬ್ಬಂದಿ ಎಲ್ಲಾ ರೇಡಾರ್ ವೀಕ್ಷಣೆ ನಡೆಸುತ್ತಾ ಮುಂದುವರಿದರು. ಆದರೆ ಏನೂ ಸಂಭವಿಸಲಿಲ್ಲ. ಸಾಸರುಗಳು "ಸುಳಿವೇ ಇಲ್ಲದಂತೆ" ಮಾಯವಾಗಿದ್ದವು.

ಅವರು ಕಂಡ ಯು.ಎಫ್.ಓ. ಸಂಗತಿಯ ಅರ್ಥ ಅವರಿಗೆ ನಿಚ್ಚಳವಾಗಿತ್ತು. ಈ ಸಾಸರುಗಳೆಲ್ಲಾ ಒಂದು ದೊಡ್ಡ ತಾಯಿ ವಿಮಾನದಿಂದ ಬರುತ್ತದೆ! ಅವು ಅದರಿಂದ ಹೊರಬಂದು ಭೂಮಿಯ ವೀಕ್ಷಣೆ ನಡೆಸುತ್ತವೆ! ಸಾಸರುಗಳ ಪ್ರಚಂಡ ವೇಗವನ್ನು ಗಮನಿಸಿದರೆ ಅವು ಭೂಮಿಯ ಯಾವ ಭಾಗಕ್ಕೆ ಬೇಕಾದರೂ ಕ್ಷಣಾರ್ಧದಲ್ಲಿ ಹೋಗಿ ವೀಕ್ಷಣೆ ನಡೆಸಿ ಬರಬಹುದು.

ಟೆಕ್ಸಾಸ್ ಮೇಲೆ ಅವರು ಕಂಡ ಆ ದೊಡ್ಡ ವಿಮಾನ ಚಿಕ್ಕ ಸಾಸರುಗಳನ್ನು ಭೂವೀಕ್ಷಣೆಗೆ ಕಳಿಸಿತ್ತು. ಅವುಗಳ ವೀಕ್ಷಣೆ ಮುಗಿದಕೂಡಲೇ ಸಾಸರುಗಳು ಹೋಗಿ ಮಾತೃವಿಮಾನವನ್ನು ಸೇರಿಕೊಂಡವು. ಮಾತೃವಿಮಾನದ ವೇಗ ಊಹಾತೀತ! ಗಂಟೆಗೆ ಕನಿಷ್ಟ ೯೦೦೦ ಎಂದರೆ ನಂಬುವುದೇ ಕಷ್ಟ! ಆದರೆ B-29 ವಿಮಾನದ ರೇಡಾರ್‌ಗಳೆಲ್ಲ ಸರಿಯಾಗಿ ಕೆಲಸ ಮಾಡುತ್ತಿದ್ದವು. ವಿಮಾನದ ಮೂರು ರೇಡಾರ್ ಸ್ಕೋಪುಗಳೂ ಆ ಯು.ಎಫ.ಓ.ಗಳನ್ನು ಸರಿಯಾಗಿ ಒಂದೇ ಜಾಗದಲ್ಲಿ ಗುರುತಿಸಿದ್ದವು. ಅದೆಲ್ಲಕ್ಕಿಂತ ಮಿಗಿಲಾಗಿ ಸಾರ್ಜಂಟ್ ಬೇಯ್ಲಿ ಕಿಟಕಿಯಿಂದ ಇಣುಕಿ ವಿಮಾನಕ್ಕೆ ಅನತಿ ದೂರದಲ್ಲೇ ಸಾಸರು ಮಿಂಚಿ ಹೋದುದನ್ನು ಕಣ್ಣಾರೆ ನೋಡಿದ್ದಂತೂ ಅಲ್ಲಗಳೆಯಲ ಸಾಧ್ಯವಾದ ಸಾಕ್ಷಿಯಾಗಿತ್ತು.

ಕ್ಯಾಪ್ಟನ್ ಹಾರ್ಟರ್ ನೆಲೆಗೆ ರೇಡಿಯೊ ಮುಖಾಂತರ ಮಾತಾಡಿ ನಡೆದುದನ್ನು ತಿಳಿಸಿದ. B-29 ನಿಲ್ದಾಣದಲ್ಲಿ ಇಳಿಯುವುದಕ್ಕೆ ಮೊದಲೇ

ಕಾತರರಾದ ಗೂಢಚಾರ ಇಲಾಖೆ ಅಧಿಕಾರಿಗಳು ಕಾಯುತ್ತಿದ್ದರು.

ವಿಮಾನದ ಸಿಬ್ಬಂದಿಯ ಪ್ರತಿಯೊಬ್ಬರ ಹೇಳಿಕೆಯನ್ನೂ ತೆಗೆದುಕೊಳ್ಳಲಾಯ್ತು. ಅನಂತರ ಸಿಬ್ಬಂದಿಯನ್ನು ಒಬ್ಬೊಬ್ಬರನ್ನೇ ಪ್ರತ್ಯೇಕವಾಗಿ ಪ್ರಶ್ನಿಸಿ ಹೇಳಿಕೆ ತೆಗೆದುಕೊಳ್ಳಲಾಯ್ತು. ಅವರೆಲ್ಲರ ಹೇಳಿಕೆಗಳಲ್ಲೂ ಮೊದಲಿನಿಂದ ಕೊನೆಯವರೆಗೆ ಯಾವುದೇ ಬಗೆಯ ವಿರೋಧಾಭಾಸ ಕಾಣಲಿಲ್ಲ.

ಈ ಯು.ಎಫ್.ಒ.ಗಳನ್ನು ಆಮ್ಲಜನಕದ ಕೊರತೆಯಿಂದ ಉಂಟಾದ ವೈಮಾನಿಕರ ಭ್ರಾಂತಿ ಎಂದು ಕರೆಯಲು ಸಾಧ್ಯವಿರಲಿಲ್ಲ. ಏಕೆಂದರೆ ರೇಡಾರ್ ಮೇಲೆ ಗುರುತಿಸಲಾಗಿತ್ತು. ರೇಡಾರ್ ಸರಿಯಾಗಿರಲಿಲ್ಲ ಎಂದು ಸಂದೇಹಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಮೂರು ರೇಡಾರ್‌ಗಳು ಏಕಕಾಲದಲ್ಲಿ ಒಂದೇ ರೀತಿಯಾಗಿ ಯು.ಎಫ್.ಒ.ಗಳನ್ನು ಗುರುತಿಸಿದ್ದವು. ಇದರೊಡನೆ ರೇಡಾರ್ ಗುರುತಿಸಿದ ವಸ್ತುವನ್ನು ಸಾರ್ಜಂಟ್ ಬೇಯ್ಲಿ ಬರಿಗಣ್ಣಿನಿಂದ ಸಹ ನೋಡಿದ್ದ. ಉಲ್ಕಾಪಾತವೆಂದು ಹೇಳಲೂ ಸಾಧ್ಯವಿರಲಿಲ್ಲ. ಉಲ್ಕೆಯಂತೆ ಒಂದೇ ಕಡೆಗೆ ಇವು ಧಾವಿಸದೇ ನಡೆಸಲ್ಪಡುವ ವಸ್ತುವಿನಂತೆ ಇವು ವರ್ತಿಸುತ್ತಾ ಹಾರಿಹೋಗಿ ಆಕಾಶದ ಮಾತೃನೌಕೆಯೊಂದಕ್ಕೆ ಸೇರಿಕೊಂಡಿದ್ದವು. ಗೂಢಚಾರ ಇಲಾಖೆಗೆ ಇದನ್ನು ಯಾವ ರೀತಿಯೂ ವ್ಯಾಖ್ಯಾನಿಸಿ ತಪ್ಪಿಸಿಕೊಳ್ಳಲು ಅಸಾಧ್ಯವಾದ ವರದಿಯಾಗಿತ್ತು ಇದು.

ಎಲ್ಲಕ್ಕಿಂತ ಮಿಗಿಲಾಗಿ ಈ ಯು.ಎಫ್.ಒ.ಗಳು ಭೂ ಮಂಡಲದ ಮೂಲದಿಂದ ಬರುತ್ತಿಲ್ಲ. ನಮ್ಮ ತಾರಾ ಮಂಡಲದ ಬೇರೆಡೆ ಎಲ್ಲಿಂದಲೋ ಬರುತ್ತಿವೆ ಎನ್ನುವ ಸಂದೇಹಕ್ಕೆ ಈ ಘಟನೆ ನೇರಸಾಕ್ಷಿಯಾಗಿತ್ತು.

ಇದಕ್ಕೆ ತಕ್ಕಂತೆ ಇನ್ನೊಂದು ಘಟನೆ ಬ್ರಿಟನ್ನಿನ ಲೇಕನ್ ಹೀತ್ ವಾಯುದಳ ವಿಮಾನನೆಲೆಯಲ್ಲಿ ಸಂಭವಿಸಿತ್ತು. ಈ ರೇಡಾರ್ ಘಟನೆಗಳನ್ನೆಲ್ಲಾ ಬ್ಲೂ ಬುಕ್ ಕಮಿಟಿಯ ರೇಡಾರ್ ನಿಷ್ಣಾತ ಗೋರ್ಡನ್ ಡಿ ಥಾಯಿರ್‌ರಿಗೆ (NOAA)ಗೆ ಮುಂದಿನ ತನಿಖೆ ಮತ್ತು ವಿಶ್ಲೇಷಣೆಗೆ ಒಪ್ಪಿಸಲಾಯ್ತು. ಅದು 'ಯು ,ಎಫ್ ,ಒ'ಗೆ ಸಂಬಂಧಿಸಿದ ದಾಖಲೆಗಳಲ್ಲಿ ಥಾಯರ್ ವರದಿ ಎಂದು ಪ್ರಖ್ಯಾತವಾಗಿದೆ. (NOAA) ಎಂದರೆ (National Occanic And Atmospheric Administration)

# ಲೇಕನ್ ಹೀತ್ ನೆಲೆಯ ವಿಚಿತ್ರ ಘಟನೆಗಳು



ಲಂಡನ್ನಿನ ಲೇಕನ್‌ಹೀತ್ ವಿಮಾನ ನಿಲ್ದಾಣದಲ್ಲಿ ಯು.ಎಫ್.ಒ.ಗಳ ಪ್ರಚಂಡ ವೇಗದ ಹಾರಾಟ ವೈಖರಿಯನ್ನು ದಿಗ್ಭ್ರಾಂತರಾಗಿ ವೀಕ್ಷಿಸುತ್ತಿರುವ ರೇಡಾರ್ ತಜ್ಞರು. ಈ ಸೂಪರ್ ಮೇಶೀನುಗಳ ಹಾರಾಟ ವೈಖರಿ ರೇಡಾರ್‌ನಂಥ ಸೂಕ್ಷ್ಮ ಉಪಕರಣಗಳಲ್ಲಿ ದಾಖಲಾಗತೊಡಗಿದ ಮೇಲೆ ಇವುಗಳನ್ನು ಸುಳ್ಳೆಂದೂ ಗೂಢಚಾರ ಇಲಾಖೆಗೆ ಅಲ್ಲಗಳೆಯಲು ಸಾಧ್ಯವಾಗಲಿಲ್ಲ.

'ಲೇಕನ್ ಹೀತ್ ಪ್ರಕರಣ ಒಂದು ಒಗಟಿನಂಥ ಅಸಾಧಾರಣ ಸಂಗತಿಯಾಗಿದೆ. 'ಫ್ಲೈಯಿಂಗ್ ಸಾಸರ್'ಗಳಿಗೆ ಸಂಬಂಧಿಸಿದ ರೇಡಾರ್ ದಾಖಲೆಗಳಲ್ಲೆಲ್ಲಾ ಇದು ಮುಖ್ಯವಾದುದೆಂದು ಭಾವಿಸಲು ಕಾರಣವೇನೆಂದರೆ ಈ 'ಫ್ಲೈಯಿಂಗ್ ಸಾಸರ್'ಗಳ ಚಲನವಲನಗಳು ಬುದ್ಧಿ ಅಥವಾ ಪ್ರಜ್ಞೆಯಿಂದ ನಿಯಂತ್ರಿತವಾದವು ಎಂದು ಬಗೆಯಲು ಇದೊಂದು ಬಲವಾದ ದಾಖಲೆ ಎಂದೇ ಹೇಳಬಹುದು. ಈ ಆಕಾಶಯಂತ್ರಗಳ ಮೂಲ ಎಲ್ಲಿಯದು? ಅದನ್ನು ಯಾವ ಪ್ರಜ್ಞೆ ಹೇಗೆ ನಿಯಂತ್ರಿಸುತ್ತದೆ ಎಂದು ಹೇಳಲಾಗದಿದ್ದರೂ ಲೇಕನ್ ಹೀತ್ ಪ್ರಕರಣದಲ್ಲಿ ಅವು ವರ್ತಿಸಿರುವ ರೀತಿ, ಅವುಗಳ ನಡವಳಿಕೆ

ಸಂಪೂರ್ಣ ನಿಯಂತ್ರಿತ ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ' ಎಂದು ಥಾಯೆರ್ ಕಮಿಟಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಯಾವ ಪ್ರಜ್ಞೆ? ಎಲ್ಲಿಂದ ನಿಯಂತ್ರಿಸುತ್ತದೆ? ಅದು ಸಾಸರಿನ ಒಳಗೇ ಇದೆಯೋ ಅಥವಾ ಅವುಗಳನ್ನು ಇಲ್ಲಿಗೆ ತಂದುಬಿಡುವ ಮಾತೃ ನೌಕೆಯೊಂದರಲ್ಲಿದೆಯೋ? ಅಥವಾ ಲಕ್ಷಾಂತರ ಮೈಲುಗಳಾಚೆ ಇರುವ ಸೌರಮಂಡಲದ ಯಾವುದಾದರೂ ಗ್ರಹದಲ್ಲಿದೆಯೋ ಅಥವಾ ಇನ್ನೂ ಕೋಟ್ಯಾಂತರ ಮೈಲುದೂರದ ನಕ್ಷತ್ರಮಂಡಲದಲ್ಲಿದೆಯೋ?

ವಾಯುದಳದ ವಿಶ್ಲೇಷಣಾ ವಿಭಾಗ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹೇಳಲಿಲ್ಲ. ಆದರೆ ತಮಗೆ ದೊರೆತ ಗಟ್ಟಿ ಸಾಕ್ಷಾಧಾರಗಳ ಮುಖಾಂತರ ಈ ಪ್ರಶ್ನೆಗಳತ್ತ ಒಂದೊಂದಾಗಿ ಹೆಜ್ಜೆ ಇಡುತ್ತಿತ್ತು. ಮೊದಲು ಇವನ್ನು ಭ್ರಾಂತಿಗಳೆಂದು ಅಲ್ಲಗಳೆದವರು ಅನಂತರ ಅವು ವಾಸ್ತವಗಳೆಂದು ಒಪ್ಪಿಕೊಂಡರು. ಅನಂತರ ಅವು ಭೂಗೋಲದ ಮೂಲಗಳಿಂದ ಬರುತ್ತಿಲ್ಲ ಎನ್ನುವ ತೀರ್ಮಾನಕ್ಕೆ ಬಂದರು. ಲೇಕನ್ ಹೀತ್ ಪ್ರಕರಣದ ವಿಶ್ಲೇಷಣೆಯಲ್ಲಿ ಅವುಗಳ ನಡವಳಿಕೆ ಯಾವುದೋ ಬುದ್ಧಿಯ ಅಥವಾ ಪ್ರಜ್ಞೆಯ ನಿಯಂತ್ರಣಕ್ಕೆ ಒಳಪಟ್ಟಂತೆ ಇದೆ ಎಂದು ಹೇಳಿದರು.

ಥಾಯರ್ ತನ್ನ ತನಿಖೆಯಲ್ಲಿ ಲೇಕನ್‌ಹೀತ್ ಪ್ರಕರಣದ ಎಲ್ಲ ಸಾಕ್ಷಿಗಳನ್ನೂ ಭೇಟಿ ಮಾಡಿ ಪ್ರಶ್ನಿಸಿ ಹೇಳಿಕೆ ತೆಗೆದುಕೊಂಡಿದ್ದಾರೆ. ಅದರಲ್ಲಿ ಲೇಕನ್‌ಹೀತ್ ವಾಯುದಳ ವಿಮಾನ ನಿಲ್ದಾಣದ ರೇಡಾರ್ ಏರ್ ಟ್ರಾಫಿಕ್ ಕಂಟ್ರೋಲ್ ಸೆಂಟರಿನ ರಾತ್ರಿಪಾಳಿಯ ಸೂಪರ್‌ವೈಜರ್ ಹೇಳಿಕೆ ಅತಿಮುಖ್ಯವಾದುದು. ಆಗ ಆತ ಸಂಜೆ ಐದು ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆವರೆಗೆ ಡ್ಯೂಟಿ ಮಾಡಲು ಹಾಜರಾಗಿದ್ದ. ಅದನ್ನು ಆತನ ಮಾತಿನಲ್ಲಿ ಕೇಳೋಣ.

"ನಾನು ಆಗತಾನೆ ಡ್ಯೂಟಿಗೆ ಹಾಜರಾಗಿ ಸೂಪರ್‌ವೈಜರ್ ಡೆಸ್ಕಿನಲ್ಲಿ ಕುಳಿತಿದ್ದೆ. ಟೆಲಿಫೋನ್ ಗಂಟೆ ಬಾರಿಸಿತು. ಕೈಗೆತ್ತಿಕೊಂಡಾಗ ಅದು ಸ್ಕಲ್‌ಥ್ರೋಪ್ ವಿಮಾನ ನೆಲೆಯಿಂದ ಬಂದ ನೇರಸಂಪರ್ಕ ಎಂದು ಗೊತ್ತಾಯ್ತು. ಅಲ್ಲಿನ ರೇಡಾರ್ ವೀಕ್ಷಕ ಫೋನಿನಲ್ಲಿ ಕೇಳಿದ 'ನಿಮ್ಮ ರೇಡಾರ್ ಪರದೆಯ ಮೇಲೆ ಯಾವುದಾದರೂ ವಸ್ತು ಗಂಟೆಗೆ ೪೦೦೦ ಮೈಲಿ ವೇಗದಲ್ಲಿ ಚಲಿಸುತ್ತಿದೆಯಾ?' ಎಂದು.

ಸ್ಕಲ್‌ಥ್ರೋಪ್ ವಿಮಾನ ನಿಲ್ದಾಣಕ್ಕೆ ೪೦ ಮೈಲಿ ದೂರದಿಂದ ಒಂದು 'ಫ್ಲೈಯಿಂಗ್ ಸಾಸರ್' ಹಾರಿ ಬಂದಿತೆಂದೂ ಗಂಟೆಗೆ ೪೦೦೦ ಮೈಲು ವೇಗದಲ್ಲಿ ನೇರವಾಗಿ ಸ್ಕಲ್‌ಥ್ರೋಪ್ ನೆಲೆಯಮೇಲೆ ಹಾರಿಹೋಯ್ತೆಂದೂ ವೀಕ್ಷಣಗೋಪುರದ ಆಪರೇಟರ್ ಅದನ್ನು ಬರಿಗಣ್ಣಿನಿಂದಲೂ ನೋಡಿದನೆಂದೂ ,

ಅಪರಿಮಿತ ವೇಗದಲ್ಲಿ ಹಾರಿಹೋಗುತ್ತಿದ್ದ ಅದು ಆಕಾಶದಲ್ಲಿ ಮಿಂಚಿನಂತೆ ಹೋಯಿತೆಂದೂ ಹೇಳಿದ. ಅದು ಆಕಾಶದಲ್ಲಿ ಹಾದುಹೋದಾಗ ವಿಮಾನ ನಿಲ್ದಾಣದ ಮೇಲೆ ಹಾರಾಡುತ್ತಿದ್ದ C-47 ವಿಮಾನ ಒಂದರ ಚಾಲಕನೂ ಕಂಡನೆಂದು ಸ್ಕಲ್‌ಥ್ರೋಪ್ ರೇಡಾರ್ ಆಪರೇಟರ್ ವರದಿ ಮಾಡಿದ.

'ನಾನು ಆ ವರದಿ ಬಂದಕೂಡಲೇ ಎಲ್ಲ ರೇಡಾರ್ ಆಪರೇಟರಿಗೂ ಎಲ್ಲ ದಿಕ್ಕುಗಳನ್ನೂ ಹುಡುಕಿರೆಂದು ಆಜ್ಞಾಪಿಸಿದೆ. ತಕ್ಷಣ ಎಲ್ಲ ರೇಡಾರ್ ಯಂತ್ರಗಳೂ ಚಾಲೂ ಆದವು. ನಾವು ರೇಡಾರ್ ಆಂಟೆನಾವನ್ನು ಯಾವರೀತಿ ಅಳವಡಿಸಿದ್ದೆವೆಂದರೆ ಹತ್ತು ಮೈಲಿಯಿಂದ ಹಿಡಿದು ಇನ್ನೂರು ಮೈಲಿವರೆಗಿನ ಆಕಾಶವನ್ನು ಪೊರಕೆಯಲ್ಲಿ ಗುಡಿಸಿದಂತೆ ರೇಡಾರ್ ತರಂಗಗಳಿಂದ ಗುಡಿಸಿ ವಿಶ್ಲೇಷಿಸುವಂತೆ ಮಾಡಿದ್ದೆವು. ಆಕಾಶದಲ್ಲಿ ಆಗ ಯಾವುದೇ ಸಾರಿಗೆ ವಿಮಾನಗಳೂ ಇರಲಿಲ್ಲ. ಹೆಚ್ಚೂ ಕಡಿಮೆ ಆಕಾಶ ಬರಿದಾಗಿತ್ತು.

'ಒಬ್ಬ ರೇಡಾರ್ ಆಪರೇಟರಿಗೆ ಲೇಕನ್‌ಹೀತ್‌ನ ಆಗ್ನೇಯ ದಿಕ್ಕಿನಲ್ಲಿ ಒಂದು ಬ್ಲಿಪ್ ಕಂಡುಬಂತು. ಆ ವಸ್ತು ಸುಮಾರು ೨೦ ಮೈಲುಗಳಾಚೆ ಆಕಾಶದಲ್ಲಿ ನಿಶ್ಚಲವಾಗಿ ನಿಂತಿತ್ತು. ಈ ವಸ್ತುವಿನತ್ತ ಕೂಡಲೇ ಎಲ್ಲ ಆಪರೇಟರುಗಳೂ ತಮ್ಮ ರೇಡಾರನ್ನು ತಿರುಗಿಸಿದರು. ನಾವೆಲ್ಲ ಹಲವಾರು ನಿಮಿಷಗಳವರೆಗೆ ರೇಡಾರಿನ ಮುಖಾಂತರ ಇದನ್ನು ವೀಕ್ಷಿಸಿದೆವು. ನಾನು ಲೇಕನ್‌ಹೀತ್‌ನಲ್ಲಿರುವ CCA ಘಟಕಕ್ಕೆ ಫೋನ್ ಮಾಡಿ ಅವರಿಗೂ ಇದು ಕಾಣುತ್ತಿದೆಯೆ? ಕೇಳಿದೆ. ಅವರೂ ಸಹ ಆ ವಸ್ತು ಇರುವುದನ್ನು ಸ್ಥಿರಪಡಿಸಿದರು.

'ನಾವು ನಿಶ್ಚಲವಾಗಿದ್ದ ಈ ವಸ್ತುವನ್ನು ನೋಡುತ್ತಿರಬೇಕಾದರೆ ಈ ವಸ್ತು ಇದ್ದಕ್ಕಿದ್ದಂತೆ ಚಲಿಸಲಾರಂಭಿಸಿತು. ಅದು ಸುಮಾರು ಗಂಟೆಗೆ ಆರುನೂರು ಮೈಲು ವೇಗದಲ್ಲಿ ಚಲಿಸುತ್ತಿದೆಯೆಂದು ಕಂಪ್ಯೂಟರಿನಲ್ಲಿ ಲೆಕ್ಕ ಹಾಕಿದೆವು. ಅದು ಚಲಿಸುವಾಗ ನಿಧಾನವಾಗಿ ವೇಗವೃದ್ಧಿ ಮಾಡಿಕೊಳ್ಳುತ್ತಿರಲಿಲ್ಲ. ತಟಕ್ಕನೆ ಗಂಟೆಗೆ ಆರುನೂರು ಮೈಲು ವೇಗದಲ್ಲಿ ಚಲಿಸಿ ತಟಕ್ಕನೆ ನಿಲ್ಲುತ್ತಿತ್ತು.

'ನಾನು ತಕ್ಷಣ ಲಂಡನ್ನಿನ ಏರ್ ಡಿವಿಷನ್ ಕಮಾಂಡಿಗೆ ನಮಗೆ ಕಾಣುತ್ತಿರುವುದನ್ನೂ ಹಾಗೇ ಸ್ಕಲ್‌ಥ್ರೋಪ್ ವಿಮಾನ ನಿಲ್ದಾಣದ ಆಪರೇಟರ್ ನಮಗೆ ಹೇಳಿದ್ದನ್ನೂ ವರದಿ ಮಾಡಿದೆ. ಅವರು ಅಲ್ಲಿಂದ ಕೂಡಲೇ ಮೂರನೇ ಡಿವಿಜನ್ ಏರ್‌ಫೋರ್ಸ್ ಕಮಾಂಡಿಗೂ ನನಗೂ ಸಂಪರ್ಕ ಕಲ್ಪಿಸಿದರು. ನನ್ನ ಟೆಲಿಫೋನು ಈಗ ಏಳನೇ ಏರ್ ಡಿವಿಜನ್ ಕಮಾಂಡಿಗೂ ಮತ್ತು ಸ್ಕಲ್‌ಥ್ರೋಪ್ ನಿಲ್ದಾಣಕ್ಕೂ ಲಗತ್ತಾಗಿತ್ತು. ನನಗೆ ಈ ಎಲ್ಲರ ಪರಸ್ಪರ ಸಂಭಾಷಣೆ ಕೇಳುತ್ತಿತ್ತು. ಹಾಗೂ ನನ್ನ ವರದಿ ಇವರೆಲ್ಲರಿಗೂ ಕೇಳುತ್ತಿತ್ತು. ನಾನು ನಡೆದುದೆಲ್ಲವನ್ನೂ

ಮತ್ತೊಮ್ಮೆ ವರದಿ ಮಾಡಿ ಅನಂತರ ರೇಡಾರ್ ಪರದೆಯ ಮೇಲೆ ಆ ವಸ್ತುವಿನ ಚಲನವಲನಗಳ ವೀಕ್ಷಕ ವಿವರಣೆ ಕೊಡತೊಡಗಿದೆ.

'ಆ ವಸ್ತು ಅನೇಕ ಸಾರಿ ತನ್ನ ಜಾಗ ಬದಲಿಸಿತು. ಪ್ರತಿ ಸಾರಿಯೂ ಅದು ಚಲಿಸಿದಾಗ ತಟಕ್ಕನೆ ಗಂಟೆಗೆ ೬೦೦ ಮೈಲಿ ವೇಗದಲ್ಲಿ ಚಲಿಸಿ ತಟಕ್ಕನೆ ನಿಲ್ಲುತ್ತಿತ್ತು. ಒಮ್ಮೊಮ್ಮೆ ನಿಂತಾಗಲೂ ಅದು ಮತ್ತೆ ಚಲಿಸಲು ಐದಾರು ನಿಮಿಷ ತೆಗೆದುಕೊಳ್ಳುತ್ತಿತ್ತು. ಬಹುಶಃ ಇನ್ನೂ ಹೆಚ್ಚು ಕಾಲ ಇರಬಹುದೇನೋ ನಾನು ಸರಿಯಾಗಿ ಗಮನಿಸಲಾಗಲಿಲ್ಲ. ಏಕೆಂದರೆ ನಾನು ಫೋನಿನಲ್ಲಿ ಕಮಾಂಡಿಂಗ್ ಆಫೀಸಿನ ಜೊತೆ ನಿರಂತರವಾಗಿ ಮಾತನಾಡುತ್ತಾ ನಡೆಯುತ್ತಿರುವುದನ್ನು ವರದಿ ಮಾಡುತ್ತಿದ್ದೆ. ಅವರು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರವನ್ನೂ ಹೇಳುತ್ತಿದ್ದೆ.

'ಸುಮಾರು ಮುಕ್ಕಾಲು ಗಂಟೆಯವರೆಗೆ ನನ್ನ ವೀಕ್ಷಕ ವಿವರಣೆ ಇದೇರೀತಿ ನಡೆದಿತ್ತು. ಅನಂತರ ರಾಯಲ್ ಏರ್‌ಫೋರ್ಸಿನ ಅನ್ವೇಷಕ ಫೈಟರ್ ವಿಮಾನಗಳನ್ನು ಕಳಿಸಿರೆಂದು ಕೇಳಿಕೊಳ್ಳಬೇಕೆಂದು ನಿರ್ಧರಿಸಿದೆ. ಮೂರನೇ ಏರ್‌ಫೋರ್ಸ್ ಕಮಾಂಡಿಗೆ ವಿಮಾನಗಳನ್ನು ಕಳಿಸಿರೆಂದು ಹೇಳಿದೆ. ಆ ವಸ್ತು ಅದೇರೀತಿ ನಿಶ್ಚಲವಾಗಿಯೇ ವೀಕ್ಷಣೆ ಮುಂದುವರಿಸುತ್ತಿದೆಯೆಂದು ದೃಢಪಡಿಸಿ ಕೊಂಡನಂತರ ಲಂಡನ್ನಿನ ರಾಯಲ್ ಏರ್‌ಫೋರ್ಸ್ ನೆಲೆಗೆ ಎರಡು ಫೈಟರ್ ವಿಮಾನಗಳನ್ನು ಕಳಿಸಲು ತುರ್ತು ಸಂದೇಶ ಹೋಯ್ತು.'

'ಲಂಡನ್ನಿನಿಂದ ಹೊರಟ ಫೈಟರ್ ವಿಮಾನ ಲೇಕನ್ ಹೀತ್‌ನ ಆಗ್ನೇಯ ದಿಕ್ಕಿನಿಂದ ಬಂತು. ಅದು ಸುಮಾರು ೪೦ಮೈಲು ದೂರವಿರು ವಾಗಲೇ ರೇಡಿಯೋ ಮೂಲಕ ನನ್ನೊಡನೆ ಸಂಪರ್ಕಹೊಂದಿತು. ಆತನ ಮಾತು ರೇಡಿಯೋ ಮೂಲಕ ಕೇಳಿದ ಕೂಡಲೇ ಅದರ ವೈಮಾನಿಕನಿಗೆ ಲೇಕನ್ ಹೀತ್ ಮೇಲಿರುವ 'ಯು ,ಎಫ್ ,ಒ' ಹಿನ್ನೆಲೆಯನ್ನೆಲ್ಲಾ ಸಂಕ್ಷಿಪ್ತವಾಗಿ ವಿವರಿಸಿದೆ. ಲೇಕನ್ ಹೀತ್‌ನಿಂದ ಯಾವ ದಿಕ್ಕಿನಲ್ಲಿ ಎಷ್ಟು ದೂರದಲ್ಲಿ ಆತ ಇದ್ದಾನೆಂದೂ , ಯಾವ ದಿಕ್ಕಿನಲ್ಲಿ 'ಯು ,ಎಫ್ ,ಒ' ಇದೆ ಎಂದೂ ತಿಳಿಸಿದೆ. 'ಯು ,ಎಫ್ ,ಒ' ನೆಲದಿಂದ ಎಷ್ಟು ಎತ್ತರದಲ್ಲಿದೆ ಎಂದು ವೈಮಾನಿಕ ಕೇಳಿದ. ನಾನು ಅದು ಸರಿಯಾಗಿ ಗೊತ್ತಾಗುತ್ತಿಲ್ಲವೆಂದು ಹೇಳಿದೆ. ಆತ ತಾನು ೫೦೦೦ ಅಡಿ ಎತ್ತರದಲ್ಲಿ ಸಾಗಿಬರುತ್ತಿದ್ದೇನೆಂದು ಹೇಳಿದ.'

'ಈ ಸಂಭಾಷಣೆ ಎಲ್ಲ ನಡೆಯುತ್ತಿರುವಾಗ 'ಫ್ಲೈಯಿಂಗ್ ಸಾಸರ್' ಲೇಕನ್ ಹೀತ್ ನೆಲೆಯ ಮೇಲೆ ನಿಶ್ಚಲವಾಗಿ ನಿಂತಿತ್ತು. ವೈಮಾನಿಕನಿಗೆ ದಿಕ್ಕು ಸೂಚಿಸುತ್ತ ಆತನ ಫೈಟರ್ ವಿಮಾನವನ್ನು 'ಫ್ಲೈಯಿಂಗ್ ಸಾಸರ್' ಕಡೆಗೆ ನಿರ್ದೇಶಿಸತೊಡಗಿದೆವು. ನಾವು ನಿರಂತರವಾಗಿ 'ಫ್ಲೈಯಿಂಗ್ ಸಾಸರ್' ಇರುವ ದಿಕ್ಕನ್ನೂ ಫೈಟರ್ ವಿಮಾನಕ್ಕೂ 'ಫ್ಲೈಯಿಂಗ್ ಸಾಸರ್ ಗೂ ಇರುವ

ಅಂತರವನ್ನೂ ರೇಡಾರ್ ಪರದೆಯ ಮೇಲಿಂದ ಅಂದಾಜು ಮಾಡುತ್ತಾ ತಿಳಿಸುತ್ತಿದ್ದೆವು. ಫೈಟರ್ ವಿಮಾನಕ್ಕೆ 'ಯು ,ಎಫ್ ,ಒ' ದೂರದಲ್ಲಿ ಗೋಚರಿಸಿತೆಂದು ಕಾಣುತ್ತದೆ. ಫೈಟರ್ ವಿಮಾನದ ಪೈಲೆಟ್ "ಲೇಕನ್ ಹೀತ್ , 'ಫ್ಲೈಯಿಂಗ್ ಸಾಸರ್' ಕಡೆಗೆ ನನ್ನ ವಿಮಾನ ಗುರಿಇಟ್ಟು ಸಾಗುತ್ತಿದೆ" ಎಂದು ಉದ್ವೇಗದಲ್ಲಿ ರೇಡಿಯೋದಲ್ಲಿ ಹೇಳಿದ್ದು ಕೇಳಿಸಿತು. ನಾವೆಲ್ಲ ಕುತೂಹಲದಿಂದ ಆತನ ಮುಂದಿನ ವರದಿಯನ್ನು ನಿರೀಕ್ಷಿಸುತ್ತಿರಬೇಕಾದರೆ ಮತ್ತೆ ಪೈಲಟ್ ಮಾತು ಕೇಳಿತು. 'ಲೇಕನ್ ಹೀತ್ , ಆ 'ಫ್ಲೈಯಿಂಗ್ ಸಾಸರ್' ಎಲ್ಲಿ ಹೋಯ್ತು. ನನ್ನ ಎದುರಿದ್ದಿದ್ದು ಈಗ ಕಾಣುತ್ತಲೇ ಇಲ್ಲ' ಎಂದ.

'ನಾವು ರೇಡಾರ್ ಪರದೆಯಲ್ಲಿ ನೋಡಿದೆವು. 'ಫ್ಲೈಯಿಂಗ್ ಸಾಸರ್' ದಾಟಿ ಫೈಟರ್ ವಿಮಾನ ಮುಂದೆ ಹೋಗಿದ್ದಂತೆ ತೋರಿತು. 'ಫ್ಲೈಯಿಂಗ್ ಸಾಸರ್' ಫೈಟರ್ ವಿಮಾನದ ಹಿಂದೆ ಅದೇ ವೇಗದಲ್ಲಿ ಹಿಂಬಾಲಿಸತೊಡಗಿತ್ತು.

'ತಕ್ಷಣ ನಮಗೆ ಏನು ನಡೆದಿರಬಹುದೆಂದು ಹೊಳೆಯಿತು. ಫೈಟರ್ ವಿಮಾನ 'ಫ್ಲೈಯಿಂಗ್ ಸಾಸರ್'ನ್ನು ಸಮೀಪಿಸುತ್ತಿದ್ದಂತೆಯೆ 'ಫ್ಲೈಯಿಂಗ್ ಸಾಸರ್' ಮಿಂಚಿನಂತೆ ಫೈಟರ್ ವಿಮಾನದ ಹಿಂದಕ್ಕೆ ಹೋಗಿತ್ತು. ಅದು ಎಷ್ಟು ವೇಗವಾಗಿ ವಿಮಾನವನ್ನು ಸುತ್ತು ಬಳಸಿ ಅದರ ಹಿಂದಕ್ಕೆ ಹೋಗಿತ್ತೆಂದರೆ ರೇಡಾರ್ ಪರದೆಯ ಮೇಲೆ ಅದನ್ನು ಗಮನಿಸಲು ನಮಗೆ ಸಾಧ್ಯವಾಗಲಿಲ್ಲ.

'ಫೈಟರ್ ವಿಮಾನದ ಪೈಲೆಟ್ ಮತ್ತೆ ಸುತ್ತುಬಳಸಿ ಅದಕ್ಕೆ ಅಭಿಮುಖವಾಗಿ ಹೋಗುತ್ತೇನೆಂದು ವಿಮಾನವನ್ನು ವೃತ್ತಾಕಾರವಾಗಿ ತಿರುಗಿಸಿದ. ಆದರೆ 'ಫ್ಲೈಯಿಂಗ್ ಸಾಸರ್' ಅದೇ ವೇಗದಲ್ಲಿ ವಿಮಾನವನ್ನು ವೃತ್ತಾಕಾರವಾಗಿ ಹಿಂಬಾಲಿಸಿದ್ದರಿಂದ ಫೈಟರ್ ವಿಮಾನದ ಪೈಲೆಟ್ಟಿಗೆ ಅದಕ್ಕೆ ಇದಿರಾಗಲು ಸಾಧ್ಯವಾಗಲೇ ಇಲ್ಲ.

ಫೈಟರ್ ವಿಮಾನದ ಪೈಲೆಟ್ ತನ್ನ ಬೆನ್ನ ಹಿಂದಿನಿಂದ 'ಫ್ಲೈಯಿಂಗ್ ಸಾಸರ್'ಅನ್ನು ಕೊಡಕಿಬಿಡಲು ಏನೇನೋ ಮಾಡಿದ. ಸುತ್ತುಬಳಸಿ , ಎಡಕ್ಕೆ ತಿರುಗಿ ಬಲಕ್ಕೆ ತಿರುಗಿ , ಮೇಲಕ್ಕೆ ಏರಿ , ಕೆಳಕ್ಕೆ ಡೈವ್ ಮಾಡಿ , ನಾನಾತರಹ ಆಕಾಶದ ಸರ್ಕಸ್ಸುಗಳನ್ನೆಲ್ಲಾ ಮಾಡಿದ. ಆದರೆ 'ಫ್ಲೈಯಿಂಗ್ ಸಾಸರ್' ವಿಮಾನಕ್ಕೆ ಅಂಟಿಸಿದ ಬಾಲದ ರೀತಿಯಲ್ಲಿ ಒಂದೇ ವೇಗದಲ್ಲಿ ವಿಮಾನವನ್ನು ಹಿಂಬಾಲಿಸುತ್ತ ವಿಮಾನಕ್ಕೂ 'ಫ್ಲೈಯಿಂಗ್ ಸಾಸರ್' ಗೂ ಒಂದೇ ದೂರವನ್ನು ಉಳಿಸಿಕೊಂಡಿತ್ತು. ಅವು ಒಂದರ ಹಿಂದೆ ಒಂದು ಸುಮಾರು ೬೦೦ ಅಡಿಗಳ ಅಂತರದಲ್ಲಿ ಹಿಂಬಾಲಿಸುತ್ತಿದ್ದವೆಂದು ನನ್ನ ಅಂದಾಜು.

ಫೈಟರ್ ವಿಮಾನದ ಪೈಲೆಟ್ ಸುಮಾರು ಹತ್ತು ನಿಮಿಷಗಳ ಕಾಲ ಈರೀತಿ ಆಕಾಶದಲ್ಲಿ ಅಂತರ್ಲಾಗ ಹಾಕುತ್ತಾ ಆ 'ಯು ,ಎಫ್ ,ಒ'ವನ್ನು ತನ್ನ ಬೆನ್ನಿನಿಂದ ಕೊಡಕಲು ಪ್ರಯತ್ನಿಸಿದ. ಈ ಮಧ್ಯೆ ಆತ ನಮ್ಮೊಡನೆ

ಮಾತಾಡುತ್ತಾ ಇದ್ದ. ಆತನ ಧ್ವನಿಯಲ್ಲಿ ನಿಧಾನವಾಗಿ ಗಾಬರಿ ಮತ್ತು ಹೆದರಿಕೆಗಳು ಮೂಡತೊಡಗಿದವು.'

ಕೊನೆಗೆ ಪೈಲೆಟ್ "ಲೇಕನ್‌ಹೀತ್ , ನಾನು ಹಿಂದಿರುಗುತ್ತೇನೆ ನನ್ನ ಪೆಟ್ರೋಲ್ ಮುಗಿಯುತ್ತಾ ಬಂತು" ಎಂದು ಹೇಳಿದ್ದು ಕೇಳಿತು. ಆ 'ಫ್ಲೈಯಿಂಗ್ ಸಾಸರ್' ಆತ ಮರಳುತ್ತಿದ್ದಂತೆಯೇ ಕೊಂಚ ದೂರದವರೆಗೆ ಹಿಂಬಾಲಿಸಿ ಅನಂತರ ಮತ್ತೆ ಆಕಾಶದಲ್ಲಿ ನಿಶ್ಚಲವಾಗಿ ನಿಂತುಬಿಟ್ಟಿತು. ನಾವು ಆ ಫೈಟರ್ ವಿಮಾನಕ್ಕೆ ಆ 'ಫ್ಲೈಯಿಂಗ್ ಸಾಸರ್' ಹಿಂಬಾಲಿಸುವುದನ್ನು ಬಿಟ್ಟು ಮತ್ತೆ ನಿಶ್ಚಲವಾಗಿ ನಿಂತಿದೆ ಎಂದು ತಿಳಿಸಿದೆವು. ತಕ್ಷಣ ಅದೇ ತರಂಗಾಂತರದಲ್ಲಿ ಲಂಡನ್ನಿನಿಂದ ಬರುತ್ತಿದ್ದ ಇನ್ನೊಂದು ಫೈಟರ್ ವಿಮಾನದ ಚಾಲಕನ ಧ್ವನಿ ಕೇಳಿಸಿತು.

'ಇಬ್ಬರು ವಿಮಾನ ಚಾಲಕರೂ ಮಾತಾಡಿಕೊಳ್ಳುತ್ತಿದ್ದುದು ನಮಗೆ ಕೇಳಿಸಿತು. ಎರಡನೆ ವಿಮಾನ ಚಾಲಕ 'ಏನನ್ನಾದರೂ ನೋಡಿದೆಯಾ?' ಎಂದು ಕೇಳಿದ.'

'ನೋಡಿದೆ! ಏನನ್ನೋ ನೋಡಿದೆ! ಆದರೇನು ಮಾಡುವುದು. ಅದು ನನ್ನನ್ನೇ ಮೂರ್ಖನನ್ನಾಗಿ ಮಾಡಿತು' ಎಂದು ಮೊದಲ ಫೈಟರ್ ಪೈಲೆಟ್ ಹೇಳಿದ. 'ಏನಾಯಿತು?' ಎಂದು ಇನ್ನೊಬ್ಬ ಕೇಳಿದ್ದು ಕೇಳಿಸಿತು. ಅನಂತರ ಕೊಂಚ ಹೊತ್ತು ಯಾರ ಮಾತೂ ಕೇಳಲಿಲ್ಲ. ಕೊಂಚ ಹೊತ್ತಿನ ಅನಂತರ 'ಲೇಕನ್ ಹೀತ್ ನಾನು ಹಿಂದಿರುಗುತ್ತಿದ್ದೇನೆ. ನನ್ನ ವಿಮಾನ ಯಾಕೋ ತೊಂದರೆ ಕೊಡುತ್ತಿದೆ' ಎಂದು ಎರಡನೆ ಫೈಟರ್ ಪೈಲೆಟ್ ಹೇಳಿದ.'

'ಇದೆಲ್ಲಾ ಪರಸ್ಪರ ಸಂಭಾಷಣೆ , ವರದಿ ಎಲ್ಲವನ್ನೂ ಕೇಳಿಸಿಕೊಳ್ಳುವಂತೆ ಮೂರನೇ ಮತ್ತು ಏಳನೇ ಡಿವಿಜನ್ ಕಮಾಂಡುಗಳಿಗೆ ನಾವು ನೇರ ರೇಡಿಯೋ ಸಂಪರ್ಕ ಕೊಟ್ಟಿದ್ದೆವು. ಅವರಿಗೆ ಇಲ್ಲೇನು ನಡೆಯುತ್ತಿದೆ ಎನ್ನುವುದರ ಸ್ಪಷ್ಟಚಿತ್ರ ಲಭ್ಯವಿತ್ತು.'

'ಇಷ್ಟೆಲ್ಲ ಆದನಂತರ ನಾವು ಏಳನೇ ಕಮಾಂಡಿಗೆ ಮುಂದೇನು ಮಾಡುವುದು ಎಂದು ಕೇಳಿದೆವು. ಅವರು ಏನು ಮಾಡುವುದೆಂದು ಯೋಚಿಸುತ್ತಿದ್ದರೆಂದು ತೋರುತ್ತದೆ. ಕೊಂಚ ಹೊತ್ತಿನ ಅನಂತರ ಏಳನೇ ಕಮಾಂಡಿನಿಂದ 'ಯು ,ಎಫ್ ,ಒ' ವನ್ನು ಹಾಗೇ ವೀಕ್ಷಿಸಿ ಮುಂದೇನು ನಡೆಯುತ್ತದೆ ತಿಳಿಸಿ ಎಂದು ಅಪ್ಪಣೆ ಬಂತು. 'ಯು ,ಎಫ್ ,ಒ' ನಾಲ್ಕಾರು ಬಾರಿ ಸ್ಥಳ ಬದಲಿಸಿ ಅನಂತರ ಲೇಕನ್ ಹೀತ್ ಉತ್ತರಾಭಿಮುಖವಾಗಿ ಸುಮಾರು ಗಂಟೆಗೆ ೬೦೦ ಮೈಲಿ ವೇಗದಲ್ಲಿ ಹೊರಟುಹೋಯ್ತು. ಆಗ ಅದು ಭೂಮಟ್ಟದಿಂದ ಸುಮಾರು ೫೦೦೦ ಅಡಿ ಎತ್ತರದಲ್ಲಿತ್ತು.

'ಈ ಎಲ್ಲ ಸಂಗತಿಗಳ ವಿವರವಾದ ವರದಿಯನ್ನು ತಯಾರಿಸಿ

ನಾನು ಮಾರನೇ ದಿನವೇ ನಮ್ಮ ಮೇಲಧಿಕಾರಿಗೆ ತಲುಪಿಸಿದೆ.'

ಲೇಕನ್ ಹೀತ್‌ನ ಸೂಪರ್‌ವೈಜರ್ ತನ್ನ ಹೆಸರನ್ನು ಬಹಿರಂಗಗೊಳಿಸಕೂಡದೆಂದು ಕೇಳಿಕೊಂಡ. ಜನಗಳ ಅಪಹಾಸ್ಯಕ್ಕೂ ಮೇಲಧಿಕಾರಿಗಳ ಸಂಶಯಕ್ಕೂ ಪಾತ್ರವಾಗಬಾರದೆಂದು ಆತ ಹೀಗೆ ಹೇಳಿದನೆಂದು ತೋರುತ್ತದೆ. ಥೇಯರ್ ವರದಿಯಲ್ಲಿ ಆತನ ಹೆಸರನ್ನು ನಮೂದಿಸಿಲ್ಲ.

ಈ ಎಲ್ಲ ಹಾರುವ ಸಾಸರುಗಳ ಘಟನೆಗಳಲ್ಲೂ ನಾವು ಸಾಸರುಗಳು ವೀಕ್ಷಣಾ ಹಾರಾಟ ನಡೆಸುವುದನ್ನೂ, ವಿಮಾನಗಳನ್ನು ಹಿಂಬಾಲಿಸುವುದನ್ನೂ ಗಮನಿಸಿದ್ದೇವೆ. 'ಯು ,ಎಫ್ ,ಒ' ಸಂಗತಿಗಳನ್ನು ತನಿಖೆ ಮಾಡಲು ನಿಯಮಿಸಿದ್ದ ಬ್ಲೂಬುಕ್ ಸಮಿತಿಯ ಖಗೋಲಶಾಸ್ತ್ರಜ್ಞ ಆಲೆನ್ ಜೆ ಹೈನೆಕ್ ಈ ಘಟನೆಗಳನ್ನು ಕೇವಲ 'ಫ್ಲೈಯಿಂಗ್ ಸಾಸರ್' ಘಟನೆಗಳು ಎಂದು ವರ್ಗೀಕರಿಸುತ್ತಾನೆ. ರಾತ್ರಿಯಲ್ಲಿ ಹಾರಾಡುವ ಬೆಳಕುಗಳು, ಬೆಳಗಿನಲ್ಲಿ ಮಿಂಚಿ ಮಾಯವಾಗುವ ತಟ್ಟೆಗಳು, ರೇಡಾರಿನ ಪರದೆಯಲ್ಲಿ ಕಾಣಿಸಿಕೊಳ್ಳುವ ಬ್ಲಿಪ್‌ಗಳು ಇವೆಲ್ಲ ಒಂದು ವರ್ಗ ಎಂದು ಕರೆಯುತ್ತಾನೆ.

ಎರಡನೆಯ ವರ್ಗವನ್ನು ಮೊದಲ ವರ್ಗದ ಮುಖಾಮುಖಿ ಎಂದು ಕರೆಯುತ್ತಾನೆ. (Close encounter of the first kind) ಎಂದರೆ ಹಾರುವ ಸಾಸರುಗಳನ್ನು ಮನುಷ್ಯರು ಹತ್ತಿರದಿಂದ ನೋಡಿದ್ದು. ಅದರ ವಿವರಗಳು, ಅದಕ್ಕೆ ಮುಖಾಮುಖಿಯಾದಾಗ ಅದರ ವೇಗದ ಪರಿಣಾಮಗಳು, ಅದರಿಂದ ಹೊಮ್ಮಿದ ಬೆಳಕಿನ ಸ್ವರೂಪ ಇತ್ಯಾದಿಗಳನ್ನೂ ಗಮನಿಸಿ ಹೇಳಿದ ಘಟನೆಗಳು Close encounter of the first kind ನಲ್ಲಿ ಸೇರುತ್ತವೆ.

Close encounter of the second kind ನಲ್ಲಿ ಹಾರುವ ತಟ್ಟೆಗಳು ಭೂಮಿಗಿಳಿದ ಸಂಗತಿಗಳು. ಅವು ಭೂಮಿಯ ಮೇಲೆ ನಿಂತಾಗ ಮತ್ತು ಅಲ್ಲಿಂದ ಹಾರಿದಾಗ ಭೂಮಿಯ ಮೇಲ್ಮೈ ಮೇಲೆ ಉಳಿದುಕೊಂಡ ಗುರುತುಗಳು ಅಥವಾ ಪರಿಣಾಮಗಳು, ಇವು ಇರುವ ಘಟನೆಗಳನ್ನು ಮೊದಲನೆ ರೀತಿಯ ಹತ್ತಿರದ ಮುಖಾಮುಖಿಯಲ್ಲಿ ವರ್ಗೀಕರಿಸುತ್ತಾನೆ.

Close encounter of the third kind ನಲ್ಲಿ ಭೂಮಿಗಿಳಿದ ಸಾಸರುಗಳಿಂದ ಮಾನವರನ್ನು ಹೋಲುವ ಜೀವಿಗಳು, ಯಾಂತ್ರಮಾನವರು ಅಥವಾ ಮನುಷ್ಯರೇ ಬಂದಿದ್ದು ಭೂಮಿಯ ಮನುಷ್ಯರೊಡನೆ ಮುಖಾಮುಖಿಯಾದುದು, ಸಂವಾದಿಸಲು ಯತ್ನಿಸಿದ್ದು ಮುಂತಾದವನ್ನು ವರ್ಗೀಕರಿಸುತ್ತಾನೆ. Close encounter of the third kind ಎಂಬ ಹಾರುವ ತಟ್ಟೆಗಳನ್ನು ಕುರಿತಾದ ಚಲನಚಿತ್ರಕ್ಕೆ ಆ ಹೆಸರನ್ನು ಹೈನೆಕ್ ಪುಸ್ತಕದಿಂದಲೇ ತೆಗೆದುಕೊಂಡಿದ್ದು.

ನಾನು ಈವರೆಗೆ ವಿವರಿಸಿದ ಸಂಗತಿಗಳೆಲ್ಲಾ 'ಫ್ಲೈಯಿಂಗ್ ಸಾಸರ್' ಸಂಗತಿಗಳ ಮೊದಲ ವರ್ಗಕ್ಕೆ ಸೇರಿದವೇ ಹೊರತು ಯಾವುವೂ Close encounterಗಳಲ್ಲ. ಆದರೆ ಈ ಸಂಗತಿಗಳಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದುದು ಮೂರು ವಿಷಯಗಳು. ಒಂದು ಹಾರುವ ಸಾಸರುಗಳು ಭ್ರಾಂತಿಗಳಲ್ಲ ನಿಜ ಎಂಬುದು. ಎರಡನೆಯದು ಅವು ಭೂಮಿಯ ಮೂಲದವುಗಳಾಗಿ ಕಾಣುತ್ತಿಲ್ಲ ಎಂಬುದು, ಮೂರನೆಯದು ಅವು ಬುದ್ಧಿ ಅಥವಾ ಪ್ರಜ್ಞೆಯ ನಿಯಂತ್ರಣಕ್ಕೆ ಒಳಪಟ್ಟಂತೆ ವರ್ತಿಸುತ್ತಿವೆ ಎಂಬುದು. ಇವಿಷ್ಟೂ ಅಮೆರಿಕಾದ ವಾಯುದಳವೇ ಒಪ್ಪಿಕೊಂಡ ತೀರ್ಮಾನಗಳು.

ಇದರೊಡನೆ ನಾವು ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಹಾರುವ ಸಾಸರುಗಳನ್ನು ನಮ್ಮ ಜೆಟ್ ವಿಮಾನಗಳು ಬೆನ್ನಟ್ಟಿದಾಗ ಅವು ಮಿಂಚಿ ಮಾಯವಾಗಿವೆಯೇ ಹೊರತು ವಿಮಾನಗಳ ಮೇಲೆ ಎರಗುವುದಾಗಲೀ, ದಾಳಿ ಮಾಡುವುದಾಗಲೀ ಮಾಡಿ ಆಕ್ರಮಣಶೀಲ ಪ್ರವೃತ್ತಿಯನ್ನು ತೋರಿಸಿಲ್ಲ. ಆದರೆ ಇದಕ್ಕೆ ಒಂದು ಅಪವಾದ ಮಾತ್ರ ಇದೆ. ಅದನ್ನೇ ಬ್ಲೂಬುಕ್ 'ಮೆಂಟಲ್ ದುರಂತ' ಎಂದು ಕರೆದಿದೆ. ಈ ದುರಂತ ನಿಜಕ್ಕೂ ಸಾಸರುಗಳ ಆಕ್ರಮಣಶೀಲ ಅಪಾಯಕಾರಿ ಪ್ರವೃತ್ತಿಯನ್ನು ತೋರಿಸುತ್ತದೆಯೇ ಎಂದು ಮುಂದೆ ಪರಿಶೀಲಿಸೋಣ.

# ಮೌಂಟ್ ರೈನರ್ ಬಳಿಯ ಅಪಘಾತ

Case XI(9 113.00)
Incident # 17-MT RAINER
Washington - 24th June 1947



ಈ ಚಿತ್ರ ಮೌಂಟ್ ರೈನರ್ ಬಳಿ ತೆಗೆದ ಚಿತ್ರವಲ್ಲ ಸ್ವಿಟ್ಜರ್ಲೆಂಡಿನ ಆಲ್ಪ್ಸ್ ಪರ್ವತದ ಬಳಿ ಪ್ರವಾಸಿಯೊಬ್ಬ ತೆಗೆದ ಚಿತ್ರದಲ್ಲಿ ಆಕಸ್ಮಿಕವಾಗಿ 'ಫ್ಲೈಯಿಂಗ್ ಸಾಸರ್' ಕಾಣಿಸಿಕೊಂಡಿದೆ.

'ಯು ,ಎಫ್ ,ಒ' ಘಟನೆಗಳ ವಿಶ್ಲೇಷಣೆ ಪ್ರಾರಂಭವಾಗುವ ಪ್ರಾಥಮಿಕ ಹಂತಗಳಲ್ಲಿ ಕೆನೆತ್ ಆರ್ನಾಲ್ಡರ ಅನುಭವಗಳು ಮತ್ತು ಕ್ಯಾಪ್ಟನ್ ಮೆಂಟಲ್‌ನ ದುರಂತ ಮರಣ ಈ ಎರಡೂ ತುಂಬ ಮುಖ್ಯವಾದವು. ಏಕೆಂದರೆ ಸುಮ್ಮನೆ ಕಣ್ಣೆದುರು ಮಿಂಚಿ ಮಾಯವಾಗುವ ಮರೀಚಿಕೆಗಳೆಂದು ಉದಾಸೀನ ಮಾಡಿ ದೇಶಾವರಿ ಹೇಳಿಕೆಗಳನ್ನು ಕೊಡುತ್ತಿದ್ದ ಸರ್ಕಾರಗಳು ಇವುಗಳು ಅಪಾಯಕಾರಿಗಳಾಗಬಹುದು , ದೇಶದ ಭದ್ರತೆಗೆ ಕಂಟಕವಾಗುವ ಸಾಧ್ಯತೆಗಳೂ ಇದೆ ಎಂದು ಪರಿಗಣಿಸಿ 'ಯು ,ಎಫ್ ,ಒ'ಗಳ ಬಗ್ಗೆ ಕ್ರಮಬದ್ಧ ವೈಜ್ಞಾನಿಕ ವಿಶ್ಲೇಷಣೆ ಪ್ರಾರಂಭಿಸಲು ಮೂಲ ಕಾರಣ ಈ ಮೇಲೆ ಹೇಳಿದ ಎರಡೂ ಘಟನೆಗಳು.

ಕೆನೆತ್ ಆರ್ನಾಲ್ಡ್ ತನ್ನ ಅನುಭವಗಳನ್ನು ಹೇಳಿದ ಬಳಿಕ ಆತನ ನಡವಳಿಕೆ , ಚಾರಿತ್ರ್ಯ , ಮನಃಸ್ಥಿತಿ ಆತನ ನೆರೆಹೊರೆಯವರ ಅಭಿಪ್ರಾಯಗಳು ಪ್ರತಿಯೊಂದನ್ನೂ ಅಮೆರಿಕಾದ ಗೂಢಚಾರ ಇಲಾಖೆ ಸಂಗ್ರಹಿಸಿತು. ಅಮೆರಿಕಾ ಸರ್ಕಾರದ ಗೂಢಚಾರಇಲಾಖೆ ಪ್ರತಿಯೊಂದು 'ಯು ,ಎಫ್ ,ಒ'ಗೆ ಸಂಬಂಧಿಸಿದ

ಸಂಗತಿಗಳನ್ನೂ ಯಾವಕ್ರಮದಲ್ಲಿ ತನಿಖೆ ವಿಶ್ಲೇಷಣೆ ಮಾಡುತ್ತಿತ್ತು ಎನ್ನುವ ಕುತೂಹಲಕ್ಕೆ ಕೆನೆತ್ ಆರ್ನಾಲ್ಡ್ ಕೇಸನ್ನು ಒಂದು ಪ್ರಾತಿನಿಧಿಕ ಉದಾಹರಣೆ ಎಂದು ನೋಡಬಹುದು. ಈ ಕಾರಣಕ್ಕಾಗಿ ಈ ಸಂಗತಿಯನ್ನು ಹೆಚ್ಚಿನ ವಿವರಗಳೊಂದಿಗೆ ಇಲ್ಲಿ ಪರಿಶೀಲಿಸಲಾಗಿದೆ.

ಕೆನೆತ್ ಆರ್ನಾಲ್ಡ್ ಹುಟ್ಟಿದ್ದು ಮಾರ್ಚ್ ೨೯.೧೯೧೫ರಲ್ಲಿ ಮಿನ್ನಸೋಟಾ ಜಿಲ್ಲೆಯ ಸುಬೇಕಾ ಊರಿನಲ್ಲಿ. ಆತನ ಪದವಿ ಮತ್ತು ಉಚ್ಚಶಿಕ್ಷಣ ಮಿನ್ನಸೋಟಾ ವಿಶ್ವವಿದ್ಯಾಲಯದಲ್ಲಿ. ಉಚ್ಚ ಶಿಕ್ಷಣದ ಅನಂತರ ಆತ ಅಗ್ನಿಶಾಮಕ ಉಪಕರಣಗಳನ್ನು ತಯಾರಿಸುವ ಕೊಲರಾಡೋದ ರೆಡ್ ಕಾಮೆಟ್ ಎನ್ನುವ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡ. ೧೯೩೯ರಲ್ಲಿ ಆತನನ್ನು ಜಿಲ್ಲೆಯ ಮ್ಯಾನೇಜರ್ ಆಗಿ ನೇಮಿಸಿ ಮುಂಬಡ್ತಿ ಕೊಡಲಾಯ್ತು. ೧೯೪೦ರಲ್ಲಿ ಆರ್ನಾಲ್ಡ್ ಕೆಲಸ ಮಾಡುತ್ತಿದ್ದ ಕಂಪೆನಿ ಬಿಟ್ಟು ಅಗ್ನಿಶಾಮಕ ಉಪಕರಣಗಳನ್ನು ಸರಬರಾಜು ಮಾಡುವ ತನ್ನದೇ ಒಂದು ಕಂಪೆನಿಯನ್ನು 'ಗ್ರೇಟ್ ವೆಸ್ಟ್ರನ್ ಫೈರ್ ಕಂಟ್ರೋಲ್ ಸಪ್ಲೈ' ಎನ್ನುವ ಹೆಸರಿನಲ್ಲಿ ಸ್ಥಾಪಿಸಿದ. ಆ ಕಂಪೆನಿಯ ಕೆಲಸ ಎಂದರೆ ಕಟ್ಟಗಳಲ್ಲಿ, ಆಫೀಸು, ಕಛೇರಿಗಳಲ್ಲಿ ಸ್ವಯಂಚಾಲಿತ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿ ಕೊಡುವುದು.

ಆತ ಹುಡುಗನಾಗಿದ್ದಾಗಲೇ ಅರ್ಲ್.ಟಿ.ವಿನ್ನೆಸ್ ಎನ್ನುವ ಕೋಚ್ ಬಳಿ ವಿಮಾನ ಹಾರಾಟ ತರಬೇತಿ ಪಡೆದ. ಆದರೆ ವಿಮಾನ ಹಾರಾಟ ತುಂಬಾ ದುಬಾರಿ ವ್ಯವಹಾರವಾದ್ದರಿಂದ ೧೯೪೩ರ ವರೆಗೂ ಹೆಚ್ಚಿನ ಹಾರಾಟ ಸಾಧ್ಯವಾಗಲಿಲ್ಲ. ತನ್ನದೇ ಅಗ್ನಿಶಾಮಕ ಕಂಪೆನಿ ಸ್ಥಾಪಿಸಿದ ಅನಂತರ ಆತನ ಬಳಿ ವಿಮಾನ ಹಾರಾಟಕ್ಕೆ ಅಗತ್ಯವಾದ ಹಣವೂ ಸೇರಿತು. ಜೊತೆಗೆ ಆತನ ಕೆಲಸಕ್ಕೆ ವಿಮಾನ ಸಂಚಾರದ ಅನಿವಾರ್ಯತೆಯೂ ಇತ್ತು. ತನ್ನದೇ ಒಂದು ವಿಮಾನವನ್ನೂ ಆತ ಕೊಂಡುಕೊಂಡ. ಪ್ರತಿ ತಿಂಗಳೂ ಆತ ತಿಂಗಳಿಗೆ ನಲ್ವತ್ತರಿಂದ ನೂರುಗಂಟೆಗಳವರೆಗೆ ವಿಮಾನ ಸಂಚಾರ ಮಾಡುತ್ತಿದ್ದ. ಇಡೀ ತನ್ನ ಕಾರ್ಯ ಕ್ಷೇತ್ರವನ್ನೆಲ್ಲಾ ತನಿಖೆ ಮಾಡಲು ಆತನಿಗೆ ಒಳ್ಳೆಯ ವಿಮಾನದ ಅಗತ್ಯ ಇದ್ದುದರಿಂದ ೧೯೪೭ರಲ್ಲಿ ಹೊಸ ಕ್ಯಾಲಿಯರ್ ವಿಮಾನವನ್ನು ಕೊಂಡುಕೊಂಡ. ಕ್ಯಾಲಿಯರ್ ವಿಮಾನಗಳು ಬಹು ಎತ್ತರದ ಹಾರಾಟಕ್ಕೂ ಚಿಕ್ಕ ರನ್‌ವೇಗಳಲ್ಲಿ ಉಪಯೋಗಿಸಲೂ ಸಹಕಾರಿಯಾಗಿದ್ದವು. ಆತನ ಕೆಲಸಕ್ಕೆ ಚಿಕ್ಕ ಬಯಲುಗಳಲ್ಲೂ ಗೋಮಾಳಗಳಲ್ಲೂ ಸಂದರ್ಭ ಬಿದ್ದರೆ ಇಳಿಯುವ ಹಾರುವ ಸಾಮರ್ಥ್ಯದ ವಿಮಾನ ಬೇಕಾಗಿತ್ತು.

ಜೂನ್೨೪ ,೧೯೪೭ ಮಂಗಳವಾರ ಆರ್ನಾಲ್ಡ್ ವಾಷಿಂಗ್‌ಟನ್‌ನಿಂದ ಹಿಂದಕ್ಕೆ ಯಾಕಿಮಾ ಎಂಬಲ್ಲಿಗೆ ಹೊರಟಿದ್ದ. ಆದರೆ ಆತನ ಪ್ರಯಾಣ ಸುಮಾರು ಒಂದು ಗಂಟೆ ತಡವಾಯ್ತು. ಇದಕ್ಕೆ ಕಾರಣ ಒಂದು ದೊಡ್ಡ

ನೌಕಾದಳದ ಸಾಗಾಣಿಕೆ ವಿಮಾನ ಮೌಂಟ್ ರೈನರ್ ಪರ್ವತಗಳ ಸಾಲಿನಲ್ಲಿ ಕೆಲವು ದಿನಗಳ ಹಿಂದೆ ಕಾಣೆಯಾಗಿತ್ತು. ಅವತ್ತಿನವರೆಗೂ ಅದರ ಅವಶೇಷಗಳ ಸುಳಿವು ಸಹ ಸಿಕ್ಕಿರಲಿಲ್ಲ. ಆದ್ದರಿಂದ ಆ ಪರ್ವತಗಳ ಎಡೆಯಲ್ಲಿ ವಿಮಾನದ ಅವಶೇಷಗಳಾಗಲೀ ಅಥವಾ ಅಪಘಾತದ ಇನ್ಯಾವುದೇ ಕುರುಹುಗಳಾಗಲೀ ಕಾಣುತ್ತದೆಯೆ ನೋಡಬೇಕೆಂದು ಆರ್ನಾಲ್ಡ್‌ನನ್ನು ಕೇಳಿಕೊಳ್ಳಲಾಯ್ತು. ಆರ್ನಾಲ್ಡ್ ಈ ಹುಡುಕಾಟದ ಹಾರಾಟ ಮಾಡಬೇಕಾಗಿ ಬಂದುದರಿಂದ ಯಾಕಿಮಾ ನಿಲ್ದಾಣಕ್ಕೆ ಹೋಗುವುದು ಒಂದು ಗಂಟೆ ತಡವಾಯ್ತು.ಆರ್ನಾಲ್ಡರ 'ಯು ,ಎಫ್ ,ಒ'ಗಳನ್ನು ನೋಡಿದ ಘಟನೆ ಸಂಭವಿಸಿದ್ದು ಈ ಕಾಲಾವಧಿಯಲ್ಲಿ. ಅದನ್ನು ಅಮೇರಿಕಾದ ಗೂಢಚಾರ ಇಲಾಖೆಗೆ ವರದಿಮಾಡಿದ ಆರ್ನಾಲ್ಡರ ಮಾತುಗಳಲ್ಲೇ ನೋಡೋಣ:-

"ಜೂನ್ ಹದಿನೇಳನೆ ತಾರೀಖು ನಾನು ಸೆಂಟ್ರಲ್ ಏರ್ ಸರ್ವಿಸ್ನಿನ ಕೆಲಸಗಳನ್ನೆಲ್ಲಾ ಮುಗಿಸಿ ವಾಷಿಂಗ್‌ಟನ್ನಿನ ಚೆಲ್ಲಿಸ್ ವಿಮಾನ ನಿಲ್ದಾಣದಿಂದ ಸುಮಾರು ಎರಡು ಗಂಟೆ ಹೊತ್ತಿಗೆ ಹಾರಿದೆ. ಯಾಕಿಮಾಗೆ ಹೋಗುವ ಉದ್ದೇಶವಿತ್ತು. ಆದರೆ ನನ್ನ ಪ್ರಯಾಣ ಸುಮಾರು ಒಂದು ಗಂಟೆ ತಡವಾಯ್ತು. ಮೌಂಟ್ ರೈನರ್ ಬಳಿ ಹಲವು ದಿನಗಳ ಹಿಂದೆ ಕಳೆದು ಹೋದ ನೌಕದಳದ ದೊಡ್ಡ ಸಾಗಣಿಕೆ ವಿಮಾನದ ಅವಶೇಷವೇನಾದರೂ ಕಾಣಸಿಗುತ್ತದೆಯೋ ನೋಡು ಎಂದು ಸಂಬಂದಪಟ್ಟ ಅಧಿಕಾರಿಗಳು ನಿರ್ದೇಶಿಸಿದ್ದರಿಂದ ಅಲ್ಲಿ ನಿರೀಕ್ಷಣ ಹಾರಾಟ ಮಾಡಬೇಕಿತ್ತು.

ನಾನು ನೇರವಾಗಿ ರೈನರ್ ಪರ್ವತಗಳ ಸಾಲಿನ ಕಡೆಗೆ ವಿಮಾನದಲ್ಲಿ ಹಾರಿದೆ. ರೈನರ್ ಪರ್ವತಗಳು ಸುಮಾರು ೯೦೦೦ ಅಡಿಗಳ ಎತ್ತರದ ಪರ್ವತಗಳು. ನಾನು ೯೫೦೦ ಅಡಿಗಳ ಎತ್ತರದಲ್ಲಿ ಹಾರುತ್ತಾ ಇದ್ದೆ. ಪರ್ವತಗಳ ಸಾಲು ಇದಿರಾದಾಗ ಪರ್ವತ ಶಿಖರಗಳ ಹತ್ತಿರಕ್ಕೆ ವಿಮಾನ ಇಳಿಸಿದೆ. ಪರ್ವತಗಳ ಸಾಲಿನುದ್ದಕ್ಕೂ ಹಬ್ಬಿರುವ ಕಾಡುಗಳನ್ನೂ ಕಣಿವೆಗಳನ್ನೂ ಕೊರಕಲುಗಳನ್ನೂ ನೋಡುತ್ತಾ ಪಶ್ಚಿಮಾಭಿಮುಖವಾಗಿ ಆಸ್ ಫೋರ್ಡ್ ಕಡೆಗೆ ಹಾರುತ್ತಾ ಹೋದೆ.

ಆ ಪರ್ವತಗಳ ಮಗ್ಗುಲುಗಳಲ್ಲಿ ನನಗೆ ವಿಮಾನದ ಅವಶೇಷ ಎನ್ನುವಂಥದೇನೂ ಕಾಣಲಿಲ್ಲ. ಮಿನೆರಲ್ ಎನ್ನುವ ಚಿಕ್ಕ ಊರಿನವರೆಗೂ ಹಾರಿಹೋದ ನಾನು ಆ ಊರು ದಾಟಿದ ತಕ್ಷಣ ಸುಮಾರು ಮುನ್ನೂರು ಡಿಗ್ರಿಯ ಒಂದು ದೊಡ್ಡ ಸುತ್ತುಹಾಕಿ ಮತ್ತೆ ವಾಪಸ್ ಮೌಂಟ್ ರೈನರ್ ಕಡೆಗೆ ಹೊರಟೆ. ಆಗ ನನ್ನ ವಿಮಾನ ೯೨೦೦ ಅಡಿ ಎತ್ತರದಲ್ಲಿ ಹಾರುತ್ತಾ ಇತ್ತು.

ಆಕಾಶ ಶುಭ್ರವಾಗಿ ನಿರ್ಮಲವಾಗಿತ್ತು. ಅಂಥ ಆಕಾಶದಲ್ಲಿ ಹಾರುವುದು ವೈಮಾನಿಕರಿಗೆ ಅತ್ಯಂತ ಸಂತಸದ ಹಾರಾಟ! ನಾನು ಯಾಕಿಮಾ

ದಿಕ್ಕಿಗೆ ವಿಮಾನವನ್ನು ತಿರುಗಿಸಿ ಹೆಚ್ಚಿಗೆ ಏನೂ ಮಾಡದೆ ಆಕಾಶವನ್ನೂ, ಕೆಳಗೆ ವಿಸ್ತಾರವಾಗಿ ಹಾಸಿದಂತಿದ್ದ ಬೆಟ್ಟ, ಗುಡ್ಡ, ಕಾಡುಗಳನ್ನೂ ನೋಡುತ್ತಾ ಕುಳಿತೆ. ನನ್ನ ವಿಮಾನ ಸುಲಲಿತವಾಗಿ ಹಾರುತ್ತಾ ಇತ್ತು.

ನನ್ನ ಬಲಗಡೆ ಒಂದು ದೊಡ್ಡ DC-4 ಪ್ರಯಾಣಿಕರ ವಿಮಾನ ಹಾರುತ್ತಾ ಇತ್ತು. ಅದು ಬಹುಶಃ ೧೪೦೦ ಅಡಿ ಎತ್ತರದಲ್ಲಿ ಹಾರುತ್ತಿರಬಹುದೆಂದು ಊಹಿಸಿದೆ.

ಆಕಾಶದಲ್ಲಿ ಅಂಥ ಗಾಳಿಯೂ ಬೀಸುತ್ತಿರಲಿಲ್ಲ. ನಾನು ಸುಮಾರು ಮೂರು ನಿಮಿಷ ಹಾಗೆ ಹಾರಿರಬಹುದು. ಇದ್ದಕ್ಕಿದ್ದಂತೆ ಒಂದು ಮಿಂಚು ಹೊಳೆದ ಹಾಗಾಯ್ತು. ಅದರ ಬೆಳಕು ನನ್ನ ವಿಮಾನದೊಳಗೆಲ್ಲ ಪ್ರತಿಫಲಿಸಿದ್ದರಿಂದ ನಾನು ಚಕಿತನಾಗಿ ಅತ್ತಿತ್ತ ನೋಡಿದೆ. ಯಾವುದೋ ವಿಮಾನ ನನಗೆ ಅರಿವಿಲ್ಲದಂತೆ ನನ್ನ ವಿಮಾನದ ಸಮೀಪದಲ್ಲೇ ಹಾರುತ್ತಿದೆಯೆಂದು ಅನ್ನಿಸಿತು. ಅದರ ಗಾಜುಗಳಿಂದ ಪ್ರತಿಫಲಿಸಿದ ಬಿಸಿಲು ನನ್ನ ವಿಮಾನದ ಮೇಲೆ ಬಿದ್ದಿರಬಹುದೆಂದು ಊಹಿಸಿ ವಿಮಾನದ ಕಿಟಕಿಯ ಮುಖಾಂತರ ಅತ್ತಿತ್ತ ನೋಡಿದೆ. ಆದರೆ ಆಕಾಶದ ಯಾವ ಮೂಲೆಗಳನ್ನು ಹುಡುಕಿದರೂ ನನ್ನ ವಿಮಾನದ ಎತ್ತರದಲ್ಲಿ ಯಾವುದೇ ಇನ್ನೊಂದು ವಿಮಾನವೂ ಕಾಣಲಿಲ್ಲ. ಹಾಗೇ ನನ್ನ ಹುಡುಕಾಟ ಮುಂದುವರಿಸಿ ನನ್ನ ಎಡಕ್ಕೆ ಮೌಂಟ್ ರೈನರ್ ಶಿಖರದ ಕಡೆಗೆ ನೋಡಿದಾಗ ನನಗೆ ವಿಚಿತ್ರ ಆಕಾರದ ಹಲವು ಆಕಾಶ ಯಂತ್ರಗಳು ಸಾಲುಗಟ್ಟಿಕೊಂಡು ಮೌಂಟ್ ರೈನರ್ ಕಡೆಗೆ ಸಾಗುತ್ತಿರುವುದು ಕಂಡಿತು. ಸುಮಾರು ನೂರ ಎಪ್ಪತ್ತು ಡಿಗ್ರಿಯಲ್ಲಿ ಪರಸ್ಪರ ವ್ಯೂಹ ರಚಿಸಿಕೊಂಡು ೯೫೦೦ ಅಡಿ ಎತ್ತರದಲ್ಲಿ ಉತ್ತರದಿಂದ ದಕ್ಷಿಣಕ್ಕೆ ನೇರವಾಗಿ ಮೌಂಟ್ ರೈನರ್ ಕಡೆಗೆ ಅವು ಹಾರುತ್ತಿದ್ದುವು!

ಅವು ವೇಗವಾಗಿ ಶಿಖರಕ್ಕೆ ಹತ್ತಿರಾಗುತ್ತಿದ್ದುವು. ನನಗೆ ಮೊದಲು ಅವು ಜೆಟ್ ವಿಮಾನಗಳಿರಬಹುದೆಂದೆನ್ನಿಸಿತು. ಅಂತೂ ನನ್ನ ವಿಮಾನದ ಮೇಲೆ ಬಿದ್ದ ಮಿಂಚಿನಂಥ ಪ್ರಭೆಗೆ ಇವೇ ಕಾರಣವೆಂದು ಹೊಳೆಯಿತು. ಏಕೆಂದರೆ ಅವುಗಳನ್ನು ನಾನು ಗಮನಿಸಿದ ಮೇಲೂ ಆ ಯಂತ್ರಗಳೊಳಗಿಂದ ಹಲವುಬಾರಿ ಪ್ರಜ್ವಲಿಸುವ ಬೆಳಕು ಪ್ರತಿಫಲಿಸಿದ್ದನ್ನು ನೋಡಿದೆ. ಅವುಗಳು ತಮ್ಮ ದಿಕ್ಕು ಸರಿಪಡಿಸಲು ಅತ್ತಿತ್ತ ಹೊರಳಿದಾಗ ಈ ರೀತಿ ಬಿಸಿಲನ್ನು ಪ್ರತಿಫಲಿಸುತ್ತಿದ್ದುವೋ ಏನೋ!.

ಅವು ನನ್ನಿಂದ ತುಂಬ ದೂರ ಇದ್ದುದರಿಂದಲೋ ಏನೋ ನನ್ನಿಂದ ಆ ಯಂತ್ರಗಳ ರೂಪ ಆಕಾರಗಳನ್ನು ಕೂಡಲೆ ನಿರ್ಧರಿಸಲಾಗಲಿಲ್ಲ. ಆದರೆ ಅವು ಮೌಂಟ್ ರೈನರ್ ಪರ್ವತದ ಹಿನ್ನೆಲೆಯಲ್ಲಿ ಹಾರತೊಡಗಿದಾಗ ಅದರ ತಪ್ಪಲಿನ ಬಿಳಿಯ ಹಿಮದ ಹಿನ್ನೆಲೆಯಲ್ಲಿ ಅವುಗಳ ರೂಪ

ಆಕಾರಗಳನ್ನು ಸ್ಥೂಲವಾಗಿ ಊಹಿಸಲು ಸಾಧ್ಯವಾಯ್ತು.

ನನಗೆ ಅವುಗಳ ಆಕಾರ ಮೊದಲಿಗೆ ಬಹಳ ವಿಚಿತ್ರವಾಗಿ ಕಂಡಿತು. ಏಕೆಂದರೆ ಅವುಗಳ ಬಾಲಗಳಾಗಲಿ ರೆಕ್ಕೆಗಳಾಗಲಿ ನನಗೆ ಕಾಣಲೇ ಇಲ್ಲ. ಇದರಿಂದ ನನಗೆ ವಿಪರೀತ ಕುತೂಹಲ ಉಂಟಾಯ್ತು. ಅವುಗಳು ಒಂದು ಪರ್ವತದ ಶಿಖರದ ಮೇಲಿಂದ ಇನ್ನೊಂದು ಶಿಖರದವರೆಗೆ ಹಾರುವ ಕಾಲವನ್ನು ಗಡಿಯಾರದಲ್ಲಿ ಲೆಕ್ಕ ಇಟ್ಟುಕೊಂಡು ಅವುಗಳ ವೇಗವನ್ನು ಅಂದಾಜು ಮಾಡಬೇಕೆಂದು ನಿರ್ಧರಿಸಿದೆ. ಆಕಾಶ ಎಷ್ಟೊಂದು ನಿರ್ಮಲವಾಗಿತ್ತೆಂದರೆ ಆ ವಸ್ತುಗಳನ್ನು ಸುಮಾರು ಐವತ್ತು ಮೈಲಿವರೆಗೂ ಆಕಾಶದಲ್ಲಿ ನೋಡಲು , ದೃಷ್ಟಿಯಲ್ಲೇ ಹಿಂಬಾಲಿಸಲು ಯಾವ ತೊಂದರೆಯೂ ಇರಲಿಲ್ಲ.

ನನ್ನ ವಿಮಾನದ ಡ್ಯಾಷ್ ಬೋರ್ಡಿನಲ್ಲಿ ಇದ್ದ ಸೂಕ್ಷ್ಮ ಗಡಿಯಾರ ವರ್ಷ , ತಿಂಗಳು , ತಾರೀಖು , ಗಂಟೆ , ನಿಮಿಷ , ಸೆಕೆಂಡುಗಳು ಪ್ರತಿಯೊಂದನ್ನೂ ನಿರಂತರವಾಗಿ ತೋರಿಸುತ್ತಿತ್ತು. ನನ್ನ ಗಡಿಯಾರ ಮೂರು ಗಂಟೆಗೆ ಇನ್ನೂ ಒಂದು ನಿಮಿಷ ಇರುವುದನ್ನು ತೋರಿಸುತ್ತಿದ್ದುದು ನನಗೆ ಸ್ಪಷ್ಟವಾಗಿ ನೆನಪಿದೆ. ನಾನು ಅತ್ಯಾಶ್ಚರ್ಯದಿಂದ ಈ ಆಕಾಶ ಯಂತ್ರಗಳನ್ನು ನೋಡಿದೆ. ಯಾವ ವಿಮಾನವೂ ಆ ವೇಗದಲ್ಲಿ ಗಿರಿಶಿಖರಗಳಿಗೆ ಅಷ್ಟೊಂದು ಸಮೀಪದಲ್ಲಿ ಹಾರುವುದಿಲ್ಲ. ಅವು ಮೌಂಟ್ ರೈನರ್ ಬಳಿಯಿಂದ ಗೂನು ಬೆನ್ನಿನಂತೆ ಕಾಣುತ್ತಿದ್ದ ಮತ್ತೊಂದು ಅನಾಮಧೇಯ ಗಿರಿಶಿಖರದ ಕಡೆಗೆ ದಕ್ಷಿಣಾಭಿಮುಖವಾಗಿ ನೇರವಾಗಿ ಹಾರಿದುವು. ಆದರೆ ಈಗ ಅವು ನನಗೆ ದಿಗಂತದ ನೇರಕ್ಕೇ ಕಾಣುತ್ತಿದ್ದುದರಿಂದ ಅವು ನನ್ನ ವಿಮಾನದ ಮಟ್ಟಕ್ಕೇ ಇದ್ದುವೆಂದು ಹೇಳಬಹುದು.

ಅವು ನನ್ನ ಕಣ್ಣೆದುರು ಆಗಾಗ ಫಳ್ ಫಳ್ ಎಂದು ಮಿಂಚುತ್ತಾ ವೇಗವಾಗಿ ಸಾಗಿದಾಗ ನನ್ನ ಮನಸ್ಸಿನಲ್ಲಿ ಪ್ರಧಾನವಾಗಿದ್ದ ಯೋಚನೆ ಎಂದರೆ ಈ ಹಾರುವ ಯಂತ್ರಗಳ ರೆಕ್ಕೆ ಬಾಲಗಳೆಲ್ಲ ಎತ್ತ ಹೋದವು? ನನಗೇಕೆ ಕಾಣುತ್ತಿಲ್ಲ? ಎಂಬುದು. ಯಾಕೆಂದರೆ ಯಾವ ವೈಮಾನಿಕನೂ ಹಾರುವ ಯಂತ್ರಗಳನ್ನು ಒಂದು ಕ್ಷಣ ನೋಡಿದರೂ ಇದನ್ನು ಗಮನಿಸಲೇ ಬೇಕು!

ಬಹುಶಃ ಅವು ನನ್ನಿಂದ ೨೦ ರಿಂದ ೨೫ ಮೈಲಿ ದೂರದಲ್ಲಿ ಇದ್ದವೆಂದು ಹೇಳಬಹುದು. ಅವು ಅಷ್ಟು ದೂರವಿದ್ದರೂ ನನಗೆ ಚೆನ್ನಾಗಿ ಕಾಣುತ್ತಿದ್ದುದನ್ನು ನೋಡಿದರೆ ಅವು ಬಹು ದೊಡ್ಡ ಆಕಾಶ ವಾಹನಗಳೇ ಇರಬೇಕು. ನಾನು ನನ್ನ ಜೇಬಿನಲ್ಲಿದ್ದ ಜ್ಯೂಸ್ ಫಾಸ್ಟನರ್ ಯಂತ್ರ ತೆಗೆದುಕೊಂಡು ಮೇಲೆ ಹಾರುತ್ತಿದ್ದ DC-4 ವಿಮಾನವನ್ನೂ ಕೆಳಗೆಹಾರುತ್ತಿದ್ದ ವಿಚಿತ್ರ ಆಕಾಶ ವಾಹನಗಳನ್ನೂ ಅದರಮುಖಾಂತರ ನೋಡಿ DC-4

ವಿಮಾನದೊಂದಿಗೆ ಹೋಲಿಸಿ ಇದೆಷ್ಟು ದೊಡ್ಡವಿರಬಹುದು ಎಂದೂ ಲೆಕ್ಕ ಹಾಕಿದೆ. ಅವು ಆ ದೊಡ್ಡ DC-4 ವಿಮಾನಕ್ಕಿಂತ ಕೊಂಚ ಚಿಕ್ಕವೆಂದು ಅನ್ನಿಸಿತು.

ಆ ಯಂತ್ರಗಳನ್ನು ನೋಡಿದಂತೆ ನೋಡಿದಂತೆ ನನ್ನ ಕುತೂಹಲ ಕಳವಳಗಳು ಹೆಚ್ಚುತ್ತಾ ಹೋದವು. ನನಗೆ ಹೆಚ್ಚು ಕಡಿಮೆ ಎಲ್ಲಾ ವಿಮಾನಗಳೂ ಚಿರಪರಿಚಿತವಿದ್ದುವು. ನೆಲದ ಮೇಲಾಗಲೀ ಆಕಾಶದಲ್ಲಾಗಲಿ ಯಾವುದೇ ವಿಮಾನವನ್ನು ಬೇಕಾದರೂ ಕ್ಷಣಮಾತ್ರದಲ್ಲಿ ಗುರುತಿಸ ಬಲ್ಲೆ. ಆದರೆ ಈ ಆಕಾಶ ವಿಮಾನಗಳನ್ನು ನೋಡಿದಾಗ ಮಾತ್ರ ವಿಪರೀತ ಗೊಂದಲಗೊಂಡೆ. ಈ ಆಕಾಶ ಯಂತ್ರಗಳ ಸಾಲು ಮೌಂಟ್ ರೈನರ್ ಕಣಿವೆಯಿಂದ ಮೌಂಟ್ ಹಡ್ಸನ್ ವರೆಗೆ ಹಾರಿತು. ಅವುಗಳೆರಡಕ್ಕೂ ಇರುವ ದೂರ ಸುಮಾರಾಗಿ ಐದು ಮೈಲುಗಳಿರಬಹುದು. ಈ ಸಾಲಿನ ಮೊದಲ ಯಂತ್ರ ಹಡ್ಸನ್ ಕಣಿವೆಯನ್ನು ತಲುಪುತ್ತಿದ್ದಾಗ ಕೊನೆಯದು ಇನ್ನೂ ರೈನರ್ ಪರ್ವತಾಗ್ರದ ಬಳಿ ಇತ್ತು. ಆದ್ದರಿಂದ ಈ ಆಕಾಶ ಯಂತ್ರಗಳು ಸುಮಾರು ಐದು ಮೈಲು ವಿಸ್ತೀರ್ಣದ ವ್ಯೂಹ ರಚಿಸಿದೊಂಡು ಹಾರುತ್ತಿದ್ದುವೆಂದು ಊಹಿಸಬಹುದು. ಅಷ್ಟಲ್ಲದೆ ಅವು ಒಂದು ಪರ್ವತದಿಂದ ಇನ್ನೊಂದು ಪರ್ವತಕ್ಕಿದ್ದ ದೂರವನ್ನು ಒಂದು ನಿಮಿಷ ನಲವತ್ತು ಮೂರು ಸೆಕೆಂಡುಗಳಲ್ಲಿ ಕ್ರಮಿಸಿದ್ದುವು. ಅವುಗಳ ವೇಗ ಹಾಗೂ ವಿಚಿತ್ರ ಆಕಾರಗಳ ಬಗ್ಗೆ ಆಶ್ಚರ್ಯ ಪಡುತ್ತಾ ನಾನು ವಿಮಾನ ನಡೆಸುತ್ತಿದ್ದೆ.

ಅವು ಹಡ್ಸನ್ ಶಿಖರದ ಬಳಿಗೆ ಹೋಗುವ ವೇಳೆಗೆ ನನಗೆ ದೃಷ್ಟಿ ದೂರವಾಗಿದ್ದುವು. ಆದರೂ ಅವುಗಳ ಹೊರ ಮೈಯಿಂದ ಪ್ರತಿ ಫಲಿಸುವಂತೆ ಬರುತ್ತಿದ್ದ ಜಾಜ್ವಲ್ಯಮಾನ ಪ್ರಭೆ ದೂರದ ನಕ್ಷತ್ರದಂತೆ ದಿಗಂತದವರೆಗೂ ಆಗಾಗ ಮಿನುಗುತ್ತಲೇ ಇತ್ತು.

ನೆಲದ ಮೇಲಿರುವವರಿಗೆ ಎರಡು ಮೂರು ನಿಮಿಷಗಳು ತುಂಬ ಕಡಿಮೆ ಕಾಲಾವಕಾಶದಂತೆ ಕಾಣಬಹುದು. ಆದರೆ ಆಕಾಶದಲ್ಲಿ ಅದು ದೀರ್ಘ ಕಾಲವೇ ಸರಿ. ಆಕಾಶದಲ್ಲಿ ಎರಡು ಮೂರು ನಿಮಿಷದ ಕಾಲಾವಧಿಯಲ್ಲಿ ಎಷ್ಟೊಂದು ವೀಕ್ಷಣೆ ಮಾಡಬಹುದು? ಎಷ್ಟು ಯೋಚನೆ ಲೆಕ್ಕಾಚಾರಗಳನ್ನು ಹಾಕಬಹುದು ಎನ್ನುವುದು ಗಗನದಲ್ಲಿ ಹಾರಿದವರಿಗೇ ಗೊತ್ತು.

ಕೆಲವರು ವೃತ್ತ ಪತ್ರಿಕೆಯವರು , ತಜ್ಞರು ನಾನು ವಿಮಾನದ ಗಾಜಿನ ಪ್ರತಿಫಲನವನ್ನು ಅಥವಾ ಬಿಸಿಲ್ಗುದುರೆಯನ್ನು ನೋಡಿ ಈ ರೀತಿ ಭ್ರಮಿಸಿರಬಹುದೆ? ಎಂದು ಸಲಹೆ ಕೊಟ್ಟರು. ಇದೆಲ್ಲಾ ಶುದ್ಧಾಂಗ ತಪ್ಪು. ಏಕೆಂದರೆ ಕೆಲಕಾಲ ವಿಮಾನದ ಕಿಟಕಿ ಗಾಜಿನ ಮುಖಾಂತರ ನೋಡಿದ ಮೇಲೆ ನಾನು ಉದ್ದೇಶ ಪೂರ್ವಕವಾಗೆ ವಿಮಾನದ ದಿಕ್ಕನ್ನು ಬದಲಿಸಿ ಕಿಟಕಿ

ಗಾಜುಗಳನ್ನು ಇಳಿಸಿ ಅವುಗಳನ್ನು ನೋಡಿದ್ದೆ. ಆಗ ನನ್ನ ದೃಷ್ಟಿಗೆ ನಡುವೆ ಯಾವುದೂ ಅಡ್ಡ ಇರಲಿಲ್ಲ.

ಅನಂತರ ಮತ್ತೆ ಸುಮಾರು ಇಪ್ಪತ್ತು ನಿಮಿಷಗಳ ವರೆಗೆ ಕಳೆದು ಹೋದ ನೌಕಾಪಡೆಯ ವಿಮಾನಕ್ಕೆ ಹುಡುಕಾಟ ನಡೆಸಿದೆ. ಆದರೆ ಮನಸ್ಸಿನೊಳಗೆ ಕೆಲವೇ ನಿಮಿಷಗಳ ಹಿಂದೆ ನಾನು ಕಂಡ ವಿಚಿತ್ರ ದೃಶ್ಯಗಳು ಕಾಡುತ್ತಾ ಇದ್ದುವು. ಆದ್ದರಿಂದ ಟೈಟನ್ ಅಣೆಕಟ್ಟಿನವರೆಗೂ ಹುಡುಕಾಟ ನಡೆಸಿ ಅನಂತರ ಯಕಿಮಾ ಕಡೆಗೆ ವಿಮಾನ ತಿರುಗಿಸಿದೆ.

ನಾನು ನೋಡಿದವು ಯಾವುದೋ ಒಂದು ರೀತಿಯ ವಿಮಾನ ಯಂತ್ರಗಳೇ ಸರಿ ಎಂದು ನನಗೆ ಅನ್ನಿಸಿತ್ತು. ಆದರೆ ಅದಕ್ಕೆ ನಮ್ಮ ಸಾಂಪ್ರದಾಯಕ ಸ್ವರೂಪ ಇರಲಿಲ್ಲ ಅಷ್ಟೇ. ವಿಮಾನ ನಿಲ್ದಾಣದಲ್ಲಿ ಇಳಿದನಂತರ ಈ ನನ್ನ ಅನುಭವಕ್ಕೆ ಯಾರಿಂದಲಾದರೂ ವಿವರಣೆ ದೊರೆಯುತ್ತದೆಂದು ಅಂದುಕೊಂಡೆ.

ಇದನ್ನು ವೃತ್ತ ಪತ್ರಿಕೆಗಳಿಗೆ ನಾನು ವರದಿ ಮಾಡಿದ ಕೂಡಲೆ ಜಗತ್ತಿನ ಅತಿ ದೂರದ ಕಡೆಗಳಿಂದೆಲ್ಲ ಈ ವಿಚಿತ್ರ ಹಾರುವ ಯಂತ್ರಗಳನ್ನು ನೋಡಿದವರು ಕಾಗದ ಬರೆಯತೊಡಗಿದರು. ಇದರಲ್ಲಿ ಬಹಳಷ್ಟು ಜನ ಸ್ವೀಡನ್, ಬರ್ಮುಡಾ, ನಾರ್ವೆ, ಇಟಲಿಯವರು. ಅವತ್ತು ನನ್ನ ಬಳಿ ಒಂದು ಟೆಲಿಫೋಟೋ ಲೆನ್ಸಿನ ಮೂವೀ ಕ್ಯಾಮರ ಇದ್ದಿದ್ದರೆ! ಅದಕ್ಕಾಗಿ ನಾನು ಯಾವುದನ್ನು ಬೇಕಾದರೂ ತ್ಯಾಗ ಮಾಡಲು ಸಿದ್ಧನಿದ್ದೆ. ಇನ್ನು ಮುಂದಂತೂ ಈ ಉಪಕರಣಗಳಿಲ್ಲದೆ ನಾನು ಎಲ್ಲಿಗೂ ಹೋಗುವುದಿಲ್ಲ. ಹಿಂದಿರುಗಿದನಂತರ ನನ್ನ ಬಗ್ಗೆ ಅಪಾರ ನಂಬುಗೆ ವಿಶ್ವಾಸ ಇದ್ದವರೂ ಸಹ ನನ್ನ ಅನುಭವವನ್ನೆಲ್ಲಾ ಕೇಳಿದನಂತರ ಅಪನಂಬುಗೆ ವ್ಯಕ್ತ ಪಡಿಸಿದರು. ಏಕೆಂದರೆ ನಾನೇ ಕಣ್ಣಾರೆ ಕಂಡಿದ್ದಲ್ಲದೆ ನನ್ನ ಬಳಿ ಮತ್ತ್ಯಾವ ಸಾಕ್ಷ್ಯಾಧಾರಗಳೂ ಇರಲಿಲ್ಲ.

ಅನೇಕರು ನಾನು ನೋಡಿದ ಸಂಗತಿಗಳ ಆಧಾರದ ಮೇಲೆ ಏನೇನೋ ವಿಚಿತ್ರ ಊಹೆಗಳನ್ನೆಲ್ಲ ಸಲಹೆ ಮಾಡಿದರು. ಆದರೆ ಈ ವಿದ್ಯಮಾನದಿಂದ ಬರುವ ಊಹೆ ತೀರ್ಮಾನಗಳೆಲ್ಲ ನನಗೆ ಅನವಶ್ಯಕ. ನನಗೆ ನಾನು ಕಂಡಿದ್ದಷ್ಟು ಮಾತ್ರ ಮುಖ್ಯ. ಎಲ್ಲರಿಗೂ ಇದೆಷ್ಟು ರಹಸ್ಯಮಯವಾಗಿ ವಿಚಿತ್ರವಾಗಿ ಕಾಣುತ್ತದೆಯೋ ನನಗೂ ಅಷ್ಟೇ."

-/sd
ಕೆನೆತ್ ಆರ್ನಾಲ್ಡ್
ಬೋಯ್ಸ್ .ಇಡಾಹೋ.
ಯು.ಎಸ್.

ಆರ್ನಾಲ್ಡ್ ತಮ್ಮ ಅನುಭವವನ್ನು ವರದಿ ಮಾಡಿದ ತರುವಾಯ

ಇದು ವೃತ್ತ ಪತ್ರಿಕೆಗಳ ವಲಯದಲ್ಲಿ ಅಸಾಧಾರಣ ಪ್ರಚಾರ ಪಡೆಯಿತು. ಗೂಢಚಾರ ಇಲಾಖೆಯವರೂ ವಾಯುದಳದ ವಿಶ್ಲೇಷಣ ವಿಭಾಗದವರೂ ಇದನ್ನು ಗಂಭೀರವಾಗಿ ಪರಿಗಣಿಸಿ ಆರ್ನಾಲ್ಡ್ ನಡವಳಿಕೆ ನೆರೆಹೊರೆ ಪ್ರತಿಯೊಂದನ್ನು ತನಿಖೆ ಮಾಡಿದರು. ಆಮೇಲೆ ಇದನ್ನು "ಕ್ಲಾಸಿಫೈಡ್ ಇನ್‌ಫರ್‌ಮೇಷನ್" ಎಂದು ವರ್ಗೀಕರಿಸಿ ಈ ಘಟನೆಯನ್ನು ಕುರಿತ ಅವರ ವಿಶ್ಲೇಷಣೆ ಪ್ರತಿಕ್ರಿಯೆಗಳನ್ನೆಲ್ಲಾ ಅತಿಗೋಪ್ಯವೆಂದು ಇಡಲಾಯ್ತು. ಇತ್ತೀಚೆಗೆ ಬಹಿರಂಗ ಮಾಡಲಾದ ಬ್ಲೂ ಬುಕ್ ಫೈಲುಗಳಿಂದ ಇವು ಬಹಿರಂಗವಾದುವು. ಆಗಿನ ಸರ್ಕಾರದ ಧೋರಣೆಗೆ ಇದರ ತೀರ್ಮಾನಗಳು ವ್ಯತಿರಿಕ್ತವಾಗುತ್ತದೆ ಎನ್ನುವ ಕಾರಣದಿಂದಲೇ ಇದನ್ನು ಗೋಪ್ಯ ಎಂದು ವರ್ಗೀಕರಿಸಲಾಯ್ತೆಂದು ಈಗಿನ ಅಧಿಕಾರವರ್ಗದ ಹೇಳಿಕೆ. ಅದರ ವಿಶ್ಲೇಷಣೆ ಸಂಕ್ಷಿಪ್ತವಾಗಿ ಹೀಗಿದೆ.

Case XI (9 113.00)
Incident # 17-MT RAINER
Washington -24th June 1947

ಈ ವಿದ್ಯಮಾನಕ್ಕೆ ಯಾವುದೇ ಖಗೋಲ ಶಾಸ್ತ್ರೀಯ ವಿವರಣೆಯನ್ನೂ ಕೊಡಲು ಸಾಧ್ಯವಿಲ್ಲ. ಆದರೆ ಆರ್ನಾಲ್ಡರ ಚಾರಿತ್ರ್ಯ ಪ್ರಾಮಾಣಿಕತೆಗಳನ್ನು ಗಮನಿಸಿದರೆ ಇದನ್ನು ಸುಳ್ಳು ಸಂಗತಿ ಎಂದು ತಿರಸ್ಕರಿಸಲು ಅಸಾಧ್ಯವಾಗಿದೆ. ಹೀಗಿದ್ದೂ ಆರ್ನಾಲ್ಡ್ ವರದಿ ಮಾಡಿರುವ ಸಂಗತಿಯಲ್ಲಿ ಕೆಲವು ಪ್ರಶ್ನಾರ್ಹ ಅಸಾಂಗತ್ಯ ಇದೆಯೆಂದು ನಮಗನ್ನಿಸಿದೆ.

ಇದೆಂದರೆ ಆರ್ನಾಲ್ಡ್ ಗಮನ ಆ ಚಲಿಸುವ ಆಕಾಶ ವಸ್ತುಗಳಿಂದ ಬಂದ ಮಿಂಚಿನಿಂದ ಅತ್ತ ಹೋಯ್ತೆಂದು ಹೇಳುತ್ತಾರೆ. ಅಂದು ಪ್ರಕಾಶಮಾನ ಸೂರ್ಯನ ಬೆಳಕಿದ್ದುದರಿಂದ ಆ 'ಯು ,ಎಫ್ ,ಒ'ಗಳಿಂದ ಬಂದ ಪ್ರಕಾಶಮಾನವಾದ ಬೆಳಕಾಗಿರುವ ಸಂಭವ ತೀರ ಕಡಿಮೆ. ಆದರೆ ಸೂರ್ಯನ ಬಿಸಿಲೆ ಕನ್ನಡಿಯಿಂದ ಪ್ರತಿಫಲನಗೊಳ್ಳುವಂತೆ ಪ್ರತಿಫಲಿಸಿರುವ ಸಾಧ್ಯತೆ ಉಂಟು. ಆದರೆ ಇಲ್ಲಿ ಕೆಲವು ಮುಖ್ಯಾಂಶಗಳನ್ನು ಗಮನಿಸಿ ನಾವು ವಿಶ್ಲೇಷಿಸಬೇಕು. ಆ ವಸ್ತುಗಳು ಕನ್ನಡಿಯಂತೆ ಹೊಳೆಯುವ ಲೋಹದಿಂದ ಮಾಡಿದ್ದಾದರೂ ಆರ್ನಾಲ್ಡ್ ಹೇಳುವಂತೆ ಆ ವಸ್ತುಗಳು ೨೫ ಮೈಲುಗಳಷ್ಟು ದೂರದಲ್ಲಿದ್ದರೆ ಅದರಿಂದ ಬೆಳಕು ಆರ್ನಾಲ್ಡರ ವಿಮಾನವೆಲ್ಲ ಬೆಳಗುವಷ್ಟು ಜೋರಾಗಿರಬೇಕಾದರೆ ಅದರ ಹೊಳೆಯುವ ಮೈ ಕನ್ನಡಿಯಂತೆ ಅಂಕು ಡೊಂಕಿಲ್ಲದೆ ಸಮಾನಾಂತರ ಮೇಲ್ಮೈಯಿನದಾಗಿರ ಬೇಕು. ಆ ಹಾರುವ ವಸ್ತುಗಳ ಆಕಾರವನ್ನು ಆರ್ನಾಲ್ಡ್ ವರ್ಣಿಸಿರುವ ರೀತಿ ನೋಡಿದರೆ ಅವು ಅಂಕು ಡೊಂಕಿನ ಆಕಾರವುಳ್ಳ ವಸ್ತುವೆಂದು ಗೊತ್ತಾಗುತ್ತದೆ. ಅಂಥ ವಸ್ತುವಿನ ಮೇಲೆ ಬಿಸಿಲು ಬಿದ್ದರೆ ಸೂರ್ಯನ ಕಿರಣಗಳು ಎಲ್ಲ ದಿಕ್ಕುಗಳಿಗೂ ಚೆದುರಿ ಹೋಗುತ್ತದೆಯೇ ವಿನಃ

ಆರ್ನಾಲ್ಡರ ಊಹೆಯಂತೆ ಒಂದೇ ಕಡೆಗೆ ಕೇಂದ್ರೀಕೃತವಾಗುವುದಿಲ್ಲ.

ಹಾಗೂ ಅಂಥ ವಸ್ತು ಬಿಸಿಲನ್ನು ಪೃಥಃಕರಿಸಿತು ಎಂದೆ ತಿಳಿಯುವುದಾದರೆ ಇಲ್ಲವೇ ಆರ್ನಾಲ್ಡ್ ತಮಗೂ ಆ ಹಾರುವ ಆಕಾಶ ಯಂತ್ರಗಳಿಗೂ ಇರುವ ದೂರವನ್ನು ಊಹಿಸಿದ್ದರಲ್ಲೇ ತಪ್ಪಿರಬೇಕು. ಹೆಚ್ಚೆಂದರೆ ನಾಲ್ಕು ಮೈಲಿಗಿಂತ ಅವು ಹತ್ತಿರದಲ್ಲಿದ್ದರೆ ಮಾತ್ರ ಈ ಪ್ರತಿಫಲನ ಸಾಧ್ಯ. ಅಥವಾ ಆ ಆಕಾಶ ಯಂತ್ರಗಳು ಆರ್ನಾಲ್ಡ್ ಊಹೆಗೂ ಮೀರಿದ ಅತಿ ದೊಡ್ಡ ವಸ್ತುಗಳಾಗಿರಬೇಕಾಗುತ್ತದೆ.

ಹಾಗಿದ್ದರೆ ಅವುಗಳ ವೇಗವೂ ಆರ್ನಾಲ್ಡ್ ಊಹೆಯಂತಿಲ್ಲವೆಂದು ಹೇಳಬಹುದು. ಅವರ ಲೆಕ್ಕದಂತೆ ಆ ವಸ್ತುಗಳು ೪೭ ಮೈಲುಗಳನ್ನು ೧೦೨ ಸೆಕೆಂಡುಗಳಲ್ಲಿ ದಾಟಿರಬಹುದೆಂದು ಊಹಿಸುತ್ತಾರೆ. (ಎಂದರೆ ಗಂಟೆಗೆ ೧೭೦೦ ಮೈಲುಗಳ ವೇಗದಲ್ಲಿ ಹೋಗಿರಬೇಕು). ಅವರು ತಿಳಿಸಿರುವ ದೂರದಲ್ಲಿ ಲೆಕ್ಕ ಹಾಕಿದರೆ ಆ ವಸ್ತುಗಳು ಪ್ರತಿಯೊಂದೂ ೧೦೦X೨೦೦೦ ಅಡಿ ಅಗಲ ಉದ್ದದ ವಸ್ತುಗಳಾಗುತ್ತವೆ. ಅವರು ತಿಳಿಸಿರುವ ಉದ್ದಗಲಗಳಾದರೋ ಕೇವಲ ೩X೫೦ ಅಡಿಗಳು.

ಈ ಬಗ್ಗೆ ನಾವೇನಾದರೂ ಅವನ್ನು ೨೦X೪೦೦ ಅಡಿ ವ್ಯಾಸದ ವಸ್ತುಗಳೆಂದು ಭಾವಿಸುವುದಾದರೆ ಅವುಗಳ ವೇಗ ಕೇವಲ ಗಂಟೆಗೆ ನಾನೂರು ಮೈಲುಗಳಾಗುತ್ತದೆ.

ತೀರ್ಮಾನ:- ಆ ವಸ್ತುಗಳಿಂದ ಬೆಳಕು ವಿಮಾನಕ್ಕೆ ಪ್ರತಿ ಫಲಿಸಿರಲು ಸಾಧ್ಯವಿಲ್ಲ. ಎರಡನೆಯದಾಗಿ ಆರ್ನಾಲ್ಡ್ ತಿಳಿಸಿರುವಂತೆ ಅವು ಶಬ್ದಾತೀತ ವೇಗದಲ್ಲಿ ಹಾರುತ್ತಿರಲಿಲ್ಲ.

Air Technical Intelligence center
Air Defence Command. USAF.

# ಕ್ಯಾಪ್ಟನ್ ಮೆಂಟಲ್‌ನ ದುರಂತ

ಇದು ನಡೆದದ್ದು ೧೯೪೮ರಲ್ಲಿ. ಆಗಿನ್ನೂ ಅಮೆರಿಕಾದ ಸರ್ಕಾರ ಮತ್ತು ಜನಸಾಮಾನ್ಯರು ಫ್ಲೈಯಿಂಗ್ ಸಾಸರುಗಳು ನಿಜವೆ? ಅಥವಾ ಭ್ರಮೆಯೆ? ಎಂದು ಯೋಚಿಸುತ್ತಿದ್ದ ಕಾಲ. ಫ್ಲೈಯಿಂಗ್ ಸಾಸರುಗಳು ತಮ್ಮ ವೈರಿಗಳಿರಬಹುದು ಎಂದು ಶಂಕಿಸಲು ಮೆಂಟಲ್‌ನ ದುರಂತ ಘಟನೆ ಇಂಬುಕೊಟ್ಟಿದ್ದರಿಂದ ಸಾಸರುಗಳ ಚರಿತ್ರೆಯಲ್ಲಿ ಈ ಸಂಗತಿ ವಿಶಿಷ್ಟಸ್ಥಾನ ಹೊಂದಿತು. ಅಮೆರಿಕಾದ ವಾಯುದಳ ಮೈ ಕೊಡವಿಕೊಂಡು ಈ ಸಾಸರುಗಳನ್ನು ಗಂಭೀರವಾಗಿ ಪರಿಗಣಿಸಲಾರಂಭಿಸಿದುದಕ್ಕೆ ಈ ಘಟನೆಯೂ ಒಂದು ಕಾರಣ.

೧೯೪೮ ಜನವರಿ ೭ರಂದು ಕೆಂಟುಕಿಯ ಮ್ಯಾಡಿಸನ್ ವಿಲ್ಲಾದಲ್ಲಿನ ಜನಗಳಿಗೆ ಇದ್ದಕ್ಕಿದ್ದಂತೆ ಆಕಾಶದಲ್ಲಿ ಒಂದು ದೊಡ್ಡ ವೃತ್ತಾಕಾರವಾದ ವಿಚಿತ್ರ ಯಂತ್ರ ಕಾಣಿಸಿತು. ಜನರೆಲ್ಲಾ ಆಶ್ಚರ್ಯಚಕಿತರಾದರು. ಆದರೆ ಆ ವೇಳೆಗಾಗಲೇ ಈ ಆಕಾಶವಸ್ತುವನ್ನು ಅಲ್ಲಲ್ಲಿ ಇಡೀ ಕೆಂಟುಕಿಯಾದ್ಯಂತ ಜನ ನೋಡಿದ್ದರು. ಕೆಂಟುಕಿಯ ಪೋಲೀಸ್ ಮುಖ್ಯಸ್ಥರು ಪೋರ್ಟ್‌ನಾಕ್ಸ್ ವಿಮಾನ ನಿಲ್ದಾಣಕ್ಕೆ ಫೋನ್ ಮಾಡಿ, 'ಈ ವಸ್ತು ನಿಮ್ಮ ಕಡೆಗೇ ಹಾರಿಬರುತ್ತಿದೆ. ಈ ವಸ್ತು ಸುಮಾರು ೩೫೦ ಅಡಿಗಳಷ್ಟು ವಿಸ್ತಾರವಾಗಿದೆ' ಎಂದು ಎಚ್ಚರಿಕೆ ಕೊಟ್ಟಿದ್ದರು.

ಇವರು ಎಚ್ಚರಿಕೆ ಕೊಟ್ಟ ಮೂವತ್ತು ನಿಮಿಷಗಳ ತರುವಾಯ ಆ ನಿಗೂಢ ಹಾರುವ ಯಂತ್ರ ಪೋರ್ಟ್‌ನಾಕ್ಸ್ ವಿಮಾನ ನಿಲ್ದಾಣದ ಬಳಿಯ ಗಾಡ್‌ಮ್ಯಾನ್ ವಾಯುದಳದ ನೆಲೆಯ ಮೇಲೆ ಬಂತು. ಅದು ನಿಲ್ದಾಣದ ಮೇಲೆ ನಿಶ್ಚಲವಾಗಿ ನಿಂತು ವೀಕ್ಷಣೆ ನಡೆಸತೊಡಗಿತು. ಅದರಿಂದ ಸರದಿಪ್ರಕಾರ ಕೆಂಪು ಬಿಳುಪು ಬೆಳಕು ನಾಡಿಯ ಮಿಡಿತದಂತೆ ಹೊಮ್ಮತೊಡಗಿತ್ತು.

ಆ ವಿಮಾನ ನೆಲೆಯಲ್ಲಿ ಕ್ಯಾಪ್ಟನ್ ಥಾಮಸ್ ಮೆಂಟಲ್ ಇತರ ಮೂವರಿಗೆ F-51 ವಿಮಾನದಲ್ಲಿ ಕುಳಿತು ತರಬೇತಿ ಕೊಡುತ್ತಾ ಹಾರಾಟ ನಡೆಸುತ್ತಿದ್ದರು. ಒಟ್ಟು ನಾಲ್ಕು F-51 ವಿಮಾನಗಳು ಆಕಾಶದಲ್ಲಿ ಇದ್ದವು.

ಕ್ಯಾಪ್ಟನ್ ಮೆಂಟಲ್ ಮಹಾಯುದ್ಧ ಕಾಲದ ನಿಷ್ಣಾತ ವೈಮಾನಿಕ. ಸಹಸ್ರಾರು ಗಂಟೆ ಹಾರಾಟ ನಡೆಸಿದ ಹಿನ್ನೆಲೆ ಇದ್ದ ಮನುಷ್ಯ. 'ಯು ,ಎಫ್ ,ಒ' ಗಾಡ್ ಮ್ಯಾನ್ ನೆಲೆಯ ಮೇಲೆ ಬಂದ ಕೂಡಲೆ ನೆಲೆಯ ಗೋಪುರದಿಂದ ಕಮಾಂಡಿಗ್ ಅಧಿಕಾರಿ ಕ್ಯಾಪ್ಟನ್ ಮೆಂಟಲ್‌ನನ್ನು ರೇಡಿಯೋ

ಮುಖಾಂತರ ಸಂಪರ್ಕಿಸಿದರು. ನಿಲ್ದಾಣದ ಮೇಲೆ ಪ್ರಭೆ ಬೀರುತ್ತಾ ನಿಂತಿದ್ದ ಗೂಢವಸ್ತುವಿನ ವಿಷಯ ತಿಳಿಸಿ, ಕೂಡಲೆ ಅದೇನೆಂದು ವೀಕ್ಷಿಸಲು ತಿಳಿಸಲಾಯ್ತು.

ಕ್ಯಾಪ್ಟನ್ ಮೆಂಟಲ್ ಮತ್ತಿತರ F-51 ವಿಮಾನಗಳು ನೆಲೆಯ ಮೇಲೆ ಕವಿದಿದ್ದ ತೆಳುಮೋಡದ ತೆರೆಯನ್ನು ಭೇದಿಸಿಕೊಂಡು ಆಕಾಶದತ್ತ ನುಗ್ಗಿದವು.

894.814 3D1 TCJ N93

ಕೆಲವು ಕ್ಷಣಗಳ ತರುವಾಯ ಕ್ಯಾಪ್ಟನ್ ಮೆಂಟಲ್ ಧ್ವನಿ ಗೋಪುರದ ಕಮಾಂಡಿಂಗ್ ಆಫೀಸರಿಗೆ ರೇಡಿಯೋದಲ್ಲಿ ಕೇಳಿತು.

'ನನಗೆ ಆ ವಿಚಿತ್ರ ವಸ್ತು ಕಾಣತೊಡಗಿದೆ....... ಯಾವುದೋ ಲೋಹದಿಂದ ಮಾಡಿದ ವಸ್ತುವಿನಂತೆ ಕಾಣುತ್ತಿದೆ...... ಇದರ ಅಳತೆ ಅಗಾಧವಾಗಿದೆ..... ಓಹ್! ಈಗ ಇದು ಮೇಲೇರಲಾರಂಭಿಸಿತು......'

ಕೆಲವು ಕ್ಷಣಗಳು ಮೌನವಾಗಿ ಕಳೆದವು. ಅನಂತರ ಮತ್ತೆ ಮೆಂಟಲ್ ಧ್ವನಿ ರೇಡಿಯೋದಲ್ಲಿ ಕೇಳಿಸಿತು.

'ಅದು ಇನ್ನೂ ನನಗಿಂತ ಎತ್ತರದಲ್ಲೇ ಇದೆ..... ಬಹುಶಃ ನನ್ನ ವಿಮಾನದ ವೇಗದಲ್ಲೇ ಮೇಲೇರುತ್ತಾ ಇರಬಹುದು....... ನಾನೀಗ ಸುಮಾರು ೨೦,೦೦೦ ಅಡಿ ಎತ್ತರದಲ್ಲಿ ಮೇಲೇರುತ್ತಾ ಇದ್ದೇನೆ.......ಅದಕ್ಕೆ ಸಮೀಪವಾಗಲು ಯತ್ನಿಸುತ್ತೇನೆ......ಅದು ಇನ್ನೂ ಮೇಲೆ ಹೋದರೆ ನಾನು ಹಿಂದಿರುಗ ಬೇಕಾಗುತ್ತದೆ. ......'

ಮೆಂಟಲ್ ಧ್ವನಿ ನಿಂತಿತು. ಮತ್ತೆ ಕೆಲವುಕ್ಷಣಗಳು ಕಳೆದವು. ಕಮಾಂಡಿಂಗ್ ಆಫೀಸರ್ ಗೋಪುರದಿಂದ ಮೆಂಟಲ್‌ನನ್ನು ಸಂಪರ್ಕಿಸಲು ಮತ್ತೆ ಯತ್ನಿಸಿದರು. ಆದರೆ ಮೆಂಟಲ್ ಸುಳಿವೇ ಸಿಗಲಿಲ್ಲ. ಮೆಂಟಲ್‌ನೊಡನೆ ಹಾರಾಡುತ್ತಿದ್ದ ಮಿಕ್ಕ ಮೂರು ವಿಮಾನಗಳು ಹಿಂದಿರುಗಿದವು. ಆದರೆ ಮೆಂಟಲ್ ಮಾತ್ರ ಹಿಂದಿರುಗಲೇ ಇಲ್ಲ.

ಅದೇದಿನ ಸಂಜೆಹೊತ್ತಿಗೆ ಗಾಡ್‌ಮ್ಯಾನ್ ನಿಲ್ದಾಣದಿಂದ ಸುಮಾರು ನೂರು ಮೈಲುಗಳ ದೂರದಲ್ಲಿ ಮೆಂಟಲ್‌ನ ದೇಹ ವಿಮಾನಗಳ ಅವಶೇಷದೊಂದಿಗೆ ಪತ್ತೆಯಾಯ್ತು. ಆತನಿಗೆ ಯಾವುದೇ ರೀತಿಯ ಗಾಯವೂ ಆಗಿದ್ದಂತೆ ತೋರಲಿಲ್ಲ. ಆತನ ವಿಮಾನ ಆಕಾಶದಲ್ಲೇ ಕಳಚಿ ಛಿದ್ರವಾದಂತೆ ತೋರುತ್ತಿತ್ತು. ಆದರೆ ಸುಟ್ಟ ಗುರುತಾಗಲೀ, ಬೆಂಕಿಬಿದ್ದ ಗುರುತಾಗಲೀ ಕಾಣಲಿಲ್ಲ. ಆಕಾಶದ ಶೂನ್ಯದಲ್ಲಿ ಆತನ ವಿಮಾನ ಬಿಡಿಬಿಡಿಯಾಗಿ ಕಳಚಿಹೋದಂತಿತ್ತು.

ಮಾರನೆಯ ದಿನವೇ ಈ ವಾರ್ತೆ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಯ್ತು. ವಾಯುದಳ ಈ ಆಘಾತಕ್ಕೆ ಸಂಬಂಧಿಸಿದಂತೆ ವಿಮಾನದ

ಅವಶೇಷಗಳ ಚಿತ್ರವನ್ನಾಗಲೀ, ಮೆಂಟಲ್‌ನ ಪಾರ್ಥೀವ ಶರೀರದ ಚಿತ್ರಗಳನ್ನಾಗಲೀ ಕೊಡಲಿಲ್ಲ. ಇದರಿಂದ ಪತ್ರಿಕೆಗಳು ಯಥಾಪ್ರಕಾರ ಊಹಾಪೋಹಗಳನ್ನೇ ಅವಲಂಬಿಸಿದವು. ಕ್ಯಾಪ್ಟನ್ ಮೆಂಟಲ್ 'ಫ್ಲೈಯಿಂಗ್ ಸಾಸರ್' ನಿಂದ ಹೊಮ್ಮಿದ ಮೃತ್ಯು ಕಿರಣಗಳಿಂದ ನಾಶವಾದನೆಂದು ಒಂದು ವದಂತಿಯಾದರೆ, ಅಪರಿಚಿತ ಆಕಾಶಯಂತ್ರದ ಜನರು ಮೆಂಟಲ್‌ನನ್ನು ಅಪಹರಿಸಿಕೊಂಡು ತೆಗೆದುಕೊಂಡು ಹೋದರು ಎಂದು ಇನ್ನೊಂದು ಕತೆ. ವಾಯುದಳ ಈ ಬಗ್ಗೆ ಅಧಿಕೃತ ಹೇಳಿಕೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಆಘಾತಕ್ಕೆ ಕಾರಣಗಳೇನೆಂದು ಹೇಳುವುದು ಅಷ್ಟೊಂದು ಸುಲಭವಾಗಿರಲಿಲ್ಲ.

ಈ ಘಟನೆಯ ಅನಂತರ ಸರದಿ ಪ್ರಕಾರ ಮೂರುನಾಲ್ಕು ಘಟನೆಗಳು ನಡೆದವು. ಅವು ಯಾವುವೂ ದುರಂತದಲ್ಲಿ ಮುಕ್ತಾಯವಾಗದಿದ್ದರೂ ಜನಗಳಲ್ಲಿ ಭೀತಿ ಗಾಬರಿಗಳನ್ನುಂಟುಮಾಡಲು ಸಾಕಷ್ಟು ಸಮರ್ಥವಾಗಿದ್ದವು.

ಕ್ಯಾಪ್ಟನ್ ಸಿ.ಎಸ್.ಚಿಲ್ಲೀಸ್ ಎನ್ನುವ ವೈಮಾನಿಕ ಸಾರಿಗೆ ವಿಮಾನ ಒಂದನ್ನು ನಡೆಸುತ್ತಿರಬೇಕಾದರೆ ಮಧ್ಯಾಹ್ನ ೨.೪೫ರ ಸಮಯದಲ್ಲಿ, ಮಾಂಟಗೋಮರಿ ಬಳಿ ಒಂದು ತುಂಬ ಅಗಾಧ ಗಾತ್ರದ ಸಿಗಾರ್ ಮಾದರಿಯ 'ಫ್ಲೈಯಿಂಗ್ ಸಾಸರ್' ಕಂಡ.

'ಅದು ದಕ್ಷಿಣಾಭಿಮುಖವಾಗಿ ಹೋಗುತ್ತಿದ್ದುದು ನಮ್ಮನ್ನು ಕಂಡಕೂಡಲೆ ದಿಕ್ಕು ಬದಲಿಸಿ ಅಸಾಧ್ಯ ವೇಗದಲ್ಲಿ ನಮ್ಮತ್ತ ತಿರುಗಿತು. ನಮ್ಮ ವಿಮಾನಕ್ಕೆ ಕೇವಲ ೭೦೦ ಅಡಿಗಳ ದೂರದಲ್ಲಿ ಅದು ಸಾಗಿಹೋದುದನ್ನು ನಾನೂ ನನ್ನ ಸಹ ವೈಮಾನಿಕನೂ ನೋಡಿದೆವು. ವಿಮಾನಕ್ಕೆ ತೀರಾ ಸಮೀಪದಲ್ಲಿ ಅದು ಹಾರಿಹೋದ ರಭಸಕ್ಕೆ ಬಿರುಗಾಳಿಗೆ ಸಿಕ್ಕಂತೆ ವಿಮಾನ ಹತೋಟಿ ತಪ್ಪಿ ಅದುರಿತು' ಎಂದ ಕ್ಯಾಪ್ಟನ್ ಚಿಲ್ಲೀಸ್ ವರದಿ ಮಾಡಿದ. ಇಬ್ಬರು ವೈಮಾನಿಕರೂ ಆ 'ಫ್ಲೈಯಿಂಗ್ ಸಾಸರ್'ಗೆ ಸಾಲಾಗಿ ಕಿಟಕಿಗಳಿದ್ದುದನ್ನೂ ಒಳಗಡೆ ನೀಲಿಯ ಪ್ರಕಾಶಮಾನವಾದ ಬೆಳಕು ಇದ್ದುದನ್ನೂ ಕಂಡೆವೆಂದು ಹೇಳಿದರು.

ಈ ವಿಚಿತ್ರ 'ಫ್ಲೈಯಿಂಗ್ ಸಾಸರ್' ರಾಬಿನ್ಸ್‌ಫೀಲ್ಡ ಬಳಿಯೂ ಅನೇಕರು ನೋಡಿದ್ದರು. ಅದಕ್ಕಿದ್ದ ಕಿಟಕಿಗಳನ್ನು ಬಿಟ್ಟು ಮಿಕ್ಕೆಲ್ಲ ವಿವರಣೆಗಳೂ ಕ್ಯಾಪ್ಟನ್ ಚಿಲ್ಲೀಸ್ ಹೇಳಿದ ವಿವರಣೆಗೆ ತದ್ವತ್ತಾಗಿತ್ತು. 'ಫ್ಲೈಯಿಂಗ್ ಸಾಸರ್'ಗಳು ಅಪಾಯಕಾರಿಗಳೆಂಬ ಅನುಮಾನದಿಂದ ತಲ್ಲಣಗೊಂಡವರಿಗೆ ಸಮಾಧಾನಪಡಿಸಲು ವಾಯುದಳ ಒಂದು ಪತ್ರಿಕಾಗೋಷ್ಠಿ ಕರೆಯಿತು. ಮೇಜರ್ ಜೇ ರೇ ಬೋಗೇಸ್ ಈ ಗೋಷ್ಠಿಯಲ್ಲಿ ವರದಿಗಾರರಿಗೆ ಉತ್ತರಿಸಲು ಕುಳಿತಿದ್ದರು. ವಾಯುದಳಕ್ಕೆ ನಿಜವಾಗಿಯೂ ಯಾವ ರೀತಿ ಸಮಾಧಾನ ಹೇಳಬೇಕೆಂದು ಗೊತ್ತಿರಲಿಲ್ಲ. ಅವರೂ ಸಹ ಇತರರಂತೆ ದಿಗ್ಭ್ರಾಂತ

ಸ್ಥಿತಿಯಲ್ಲಿದ್ದುದು ವರದಿಗಾರರಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು.

ಬೋಗೇಸ್ ಪತ್ರಿಕಾಗೋಷ್ಠಿಯಲ್ಲಿ ಮೆಂಟಲ್ ದುರಂತದ ಬಗ್ಗೆ ಹೇಳುತ್ತಾ ಕ್ಯಾಪ್ಟನ್ ಮೆಂಟಲ್ ಶುಕ್ರಗ್ರಹವನ್ನು 'ಫ್ಲೈಯಿಂಗ್ ಸಾಸರ್' ಎಂದು ಭ್ರಮಿಸಿ ತೀರಾ ಎತ್ತರಕ್ಕೆ ವಿಮಾನವನ್ನು ಕೊಂಡೊಯ್ದುರೆಂದೂ ಆಮ್ಲಜನಕದ ಕೊರತೆಯಿಂದ ದುರ್ಮರಣಕ್ಕೆ ತುತ್ತಾದರೆಂದು ಹೇಳಿದರು. ಆದರೆ ಬೋಗೇಸ್ ವಿವರಣೆಯಿಂದ ಯಾರಿಗೂ ಸಮಾಧಾನವಾಗಲಿಲ್ಲ. ಏಕೆಂದರೆ ಕ್ಯಾಪ್ಟನ್ ಮೆಂಟಲ್ ಗಾಡ್‌ಮ್ಯಾನ್ಸ್ ಗೋಪುರದ ಕಮಾಂಡರ್ ಜೊತೆ ಮಾತಾಡಿದ್ದು ಈ ವಿವರಣೆಗಳಿಗೆ ತೀರಾ ವ್ಯತಿರಿಕ್ತವಾಗಿ ಕಾಣುತ್ತಿತ್ತು. ಆ 'ಫ್ಲೈಯಿಂಗ್ ಸಾಸರ್' ನ ಗಾತ್ರ ವೇಗಗಳನ್ನೆಲ್ಲಾ ಮೆಂಟಲ್ ತಿಳಿಸಿದ್ದರಿಂದ ಆತ ಶುಕ್ರಗ್ರಹವನ್ನು 'ಫ್ಲೈಯಿಂಗ್ ಸಾಸರ್' ಎಂದು ಭ್ರಮಿಸಲು ಸಾಧ್ಯವೇ ಇರಲಿಲ್ಲ.

ಡೊನಾಲ್ಡ್ ಕೀ ಹೋ ಬೋಗೇಸ್‌ರವರನ್ನು ಅನಂತರ ಪ್ರಶ್ನಿಸಿದರು. ಅವರ ಸಂಭಾಷಣೆಯ ಈ ತುಣುಕಿನಿಂದ ವಾಯುದಳ ಎಂಥ ಇಕ್ಕಟ್ಟಿಗೆ ಸಿಕ್ಕಿತ್ತು ಎಂಬುದು ನಮಗೆ ಅರಿವಾಗುತ್ತದೆ.

"ಮೇಜರ್ ಬೋಗೇಸ್ , ನೀವು ಮೆಂಟಲ್ ಶುಕ್ರಗ್ರಹವನ್ನೇ 'ಫ್ಲೈಯಿಂಗ್ ಸಾಸರ್' ಎಂದು ತಿಳಿದು ಬೆನ್ನಟ್ಟಿದರು ಎಂದು ವರದಿಗಾರರಿಗೆ ಹೇಳಿದ್ದೀರಿ , ಅಲ್ಲವೆ?" ಡೊನಾಲ್ಡ್ ಕೀ ಹೋ ಕೇಳಿದರು.

"ಹೌದು ನಾನು ಹೇಳಿದ್ದು ನಿಜ. ಆತ ಶುಕ್ರಗ್ರಹವನ್ನೆ 'ಫ್ಲೈಯಿಂಗ್ ಸಾಸರ್' ಎಂದು ಭ್ರಮಿಸಿರಬೇಕೆಂಬುದು ವಾಯುದಳದ ವಿಶ್ಲೇಷಣೆ".

"ಆದರೆ ವಾಸ್ತವವಾಗಿ ಆ ದಿನ ಬೆಳಗಿನ ಆ ಹೊತ್ತಿನಲ್ಲಿ ಆ ಭಾಗದ ಆಕಾಶದಲ್ಲಿ ಶುಕ್ರಗ್ರಹ ಕಾಣಿಸಿಕೊಳ್ಳುವ ಸಾಧ್ಯತೆ ಇರಲಿಲ್ಲ. ಸರಕಾರ ಇದನ್ನು ವಿಶ್ಲೇಷಿಸಲು ನಿಯಮಿಸಿದ ತಂತ್ರಜ್ಞರ ಸಮಿತಿಯ ವರದಿಯನ್ನು ನೋಡಿದ್ದೀರ? ಆ 'ಫ್ಲೈಯಿಂಗ್ ಸಾಸರ್' ಏನೆಂದು ಹೇಳಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆಂಬುದು ಗೊತ್ತೆ? ಒಮ್ಮೊಮ್ಮೆ ಬಿಸಿಲಿನ ಕಿರಣಗಳು ವಿಮಾನದ ಗಾಜಿನಮೇಲೆ ನೇರವಾಗಿ ಬೀಳುವ ಸಂದರ್ಭದಲ್ಲಿ ಶುಕ್ರಗ್ರಹ ವೈಮಾನಿಕರಿಗೆ ಪ್ರಕಾಶಮಾನವಾದ ಬಿಂದುವಿನಂತೆ ಕಾಣುವ ಸಾಧ್ಯತೆ ಇದೆ. ಆದರೆ ಅಷ್ಟೊಂದು ಜನಕ್ಕೆ ಏಕಕಾಲದಲ್ಲಿ ಶುಕ್ರಗ್ರಹ ಪ್ರಕಾಶಮಾನವಾದ ಆಕಾಶಯಂತ್ರದಂತೆ ಬೇರೆ ಬೇರೆ ಕೋನಗಳಿಂದ ಕಂಡಿತು ಎಂದು ಹೇಳುವುದು ಉತ್ಪ್ರೇಕ್ಷೆಯಾಗುತ್ತದೆ ಎಂದು ಸಮಿತಿಯ ಅಭಿಪ್ರಾಯ."

"ಆ ಸಮಿತಿ ಅನಂತರ ತನ್ನ ಅಭಿಪ್ರಾಯವನ್ನು ಮತ್ತೆ ಪುನರ್ವಿಮರ್ಶಿಸಿತು" ಬೋಗೇಸ್ ಹೇಳಿದರು.

"ಪುನರ್ವಿಮರ್ಶಿಸುವ ಅಗತ್ಯ ಏಕೆ ಬಂತು?"

"ಡೊನಾಲ್ಡ್! , ಇದಕ್ಕೆ ಇನ್ಯಾವ ಸಮರ್ಪಕ ವಿವರಣೆಯನ್ನೂ

ಕೊಡಲಸಾಧ್ಯವಾಗಿದೆ. ಅದಕ್ಕಾಗಿಯೇ ಮೆಂಟಲ್ ಶುಕ್ರಗ್ರಹವನ್ನೆ 'ಫ್ಲೈಯಿಂಗ್ ಸಾಸರ್' ಎಂದು ತಪ್ಪಾಗಿ ಪರಿಭಾವಿಸಿರಬೇಕೆಂದು ಹೇಳಬೇಕಾಗಿದೆ."


ಡೊನಾಲ್ಡ್ ಕೀ ಹೋ "ನಿಮ್ಮ ಉತ್ತರ ತೃಪ್ತಿಕರವಾಗಿಲ್ಲ" ಎಂದು ಎಷ್ಟು ಹೇಳಿದರೂ ಬೋಗೇಸ್ ತಮ್ಮ ವಾದವನ್ನೇ ಪತ್ರಿಕಾಗೋಷ್ಠಿಯಲ್ಲಿ ಬಲವಾಗಿ ಪ್ರತಿಪಾದಿಸತೊಡಗಿದರು. ಈ ವಿವಾದಾತ್ಮಕ ದುರಂತ ಘಟನೆಯಿಂದ ಹೇಗೋ ಒಟ್ಟಿನಲ್ಲಿ ಕೈತೊಳೆದುಕೊಳ್ಳಬೇಕೆಂದು ವಾಯುದಳ ನಿರ್ಧರಿಸಿದಂತಿತ್ತು.

ಶುಕ್ರಗ್ರಹದ ವಿವರಣೆಯ ಅನಂತರ ವಾಯುದಳ 'ಫ್ಲೈಯಿಂಗ್ ಸಾಸರ್' ಹವಾಮಾನ ಸಂಶೋಧನೆಗೆಂದು ಹಾರಿಬಿಟ್ಟ ಕಾಸ್ಮಿಕ್ ಬೆಲೂನು ಇರಬೇಕೆಂದು ಹೇಳತೊಡಗಿತು. ಆದರೆ ಬೆಲೂನಿಗೆ ವಿಮಾನ ಢಿಕ್ಕಿ ಹೊಡೆದರೆ ಅದು ಆಕಾಶದಲ್ಲೇ ಬಿಡಿಬಿಡಿಯಾಗಿ ಕಳಚಿಹೋಗುತ್ತದೆಯೆ ಎಂಬ ಸಂದೇಹಕ್ಕೆ ಅವರಲ್ಲಿ ಉತ್ತರವಿರಲಿಲ್ಲ.

ಒಟ್ಟಿನಲ್ಲಿ ಈ ದುರಂತ ಏಕೆ ಸಂಭವಿಸಿತು ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಮೊದಲು ಆ ವಿಚಿತ್ರ ಆಕಾಶವಸ್ತು ಏನೆಂದು ತಿಳಿಯಲೂ ಸಾಧ್ಯವಾಗಲಿಲ್ಲ. ಆ 'ಫ್ಲೈಯಿಂಗ್ ಸಾಸರ್' ಉದ್ದೇಶಪೂರ್ವಕವಾಗಿ ಮೆಂಟಲ್ ವಿಮಾನದ ಮೇಲೆ ಆಕ್ರಮಣ ಎಸಗಿತು ಎಂದು ಹೇಳಲೂ ತಕ್ಕ ಸಾಕ್ಷಾಧಾರಗಳು ಇರಲಿಲ್ಲ. ಹೆಚ್ಚೆಂದರೆ ಆಕಾಶದಲ್ಲಿ 'ಫ್ಲೈಯಿಂಗ್ ಸಾಸರ್'ಗಳ ತೀರಾ ಸಾಮೀಪ್ಯ ವಿಮಾನಗಳಿಗೆ ಅಪಾಯಕಾರಿಯಾಗಬಹುದು ಎಂದ ಹೇಳಬಹುದು. 'ಫ್ಲೈಯಿಂಗ್ ಸಾಸರ್'ಗಳು ವಿಮಾನಗಳನ್ನು ಸಮೀಪಿಸಿದಾಗ ಆಗಲೀ ಅಥವಾ ವಿಮಾನಗಳೇ 'ಫ್ಲೈಯಿಂಗ್ ಸಾಸರ್' ಗಳನ್ನು ಬೆನ್ನಟ್ಟಿದಾಗಾಗಲಿ 'ಫ್ಲೈಯಿಂಗ್ ಸಾಸರ್' ಗಳು ವಿಮಾನಕ್ಕೂ ತಮಗೂ ಸಾಕಷ್ಟು ದೂರವನ್ನು ಉಳಿಸಿಕೊಳ್ಳುವುದಕ್ಕೆ ಇದೇ ಕಾರಣವಿರಬಹುದೆ? ಎನ್ನುವ ಪ್ರಶ್ನೆಯನ್ನು ಮುಂದೆ ಪರಿಶೀಲಿಸೋಣ.

# ಮೊದಲ ವರ್ಗದ ಮುಖಾಮುಖಿ

(Close encounter of the first kind)



'ಫ್ಲೈಯಿಂಗ್ ಸಾಸರ್'ಗಳು ರೇಡಿಯೋ ಟೆಲಿಸ್ಕೋಪ್ ಪರದೆಯ ಮೇಲೆ ಮೂಡಿರುವ ಚಿತ್ರ. ಇಡೀ ತಾರಾ ಮಂಡಲವನ್ನು ನಿರ್ದೇಶಿಸುವ ರೇಡಿಯೋ ಟೆಲಿಸ್ಕೋಪ್ ಪರದೆಯ ಎರಡು ಅವಳಿ ಚಿತ್ರವನ್ನು ಇಲ್ಲಿ ಕೊಡಲಾಗಿದೆ. ಈ ಪರದೆಯ ಮೇಲೆ ಚಲಿಸುವ ನಕ್ಷತ್ರಗಳಂತೆ ಕಾಣಿಸಿಕೊಳ್ಳುವ 'ಫ್ಲೈಯಿಂಗ್ ಸಾಸರ್'ಗಳು ಒಂದೇಒಂದು ಇಂಚು ಚಲಿಸಿದರೂ ಅದು ಆಕಾಶದ ಮಾನದಂಡದಲ್ಲಿ ಲಕ್ಷಾಂತರ ಮೈಲುಗಳಾಗುತ್ತವೆ.

ಮೆಂಟಲ್‌ನ ದುರಂತ ಒಂದನ್ನು ಬಿಟ್ಟರೆ 'ಫ್ಲೈಯಿಂಗ್ ಸಾಸರ್' ಆಕ್ರಮಣಶೀಲ ಎಂದು ಹೇಳುವಂಥ ಅಥವಾ ಸಂದೇಹಿಸುವಂಥ ಪ್ರಧಾನ ಸಾಕ್ಷ್ಯಗಳು ನಮಗೆ 'ಫ್ಲೈಯಿಂಗ್ ಸಾಸರ್' ದಾಖಲೆಗಳಲ್ಲಿ ಹೆಚ್ಚಾಗಿ ಸಿಗುವುದಿಲ್ಲ. 'ಫ್ಲೈಯಿಂಗ್ ಸಾಸರ್' ಗಳ ಬಗ್ಗೆ ಸರ್ಕಾರಗಳ ಧೋರಣೆಗಳಲ್ಲಿ ನಮಗೆ ಮುಖ್ಯವಾಗಿ ಕಂಡುಬರುವುದು. ಅವುಗಳು ಆಕ್ರಮಣಶೀಲವೆ? ಅವುಗಳಿಂದ ನಮ್ಮ ದೇಶಕ್ಕೆ ಏನಾದರೂ ಆಪತ್ತು ಇದೆಯೆ? ಎಂಬ ಪರಿಶೀಲನೆ ಮಾತ್ರ. ಸರ್ಕಾರಗಳ ಮತ್ತು ಮಿಲಿಟರಿಯವರ ಸಂಶೋಧನೆಗಳು ಈ ರೀತಿ ಪೂರ್ವಾಗ್ರಹಪೀಡಿತವಾಗಿದ್ದರೂ ಸಹ ನಾವು ಅವುಗಳನ್ನು ಮತ್ತು ಅವರ ಅಭಿಪ್ರಾಯಗಳನ್ನು ಏಕೆ ಲಕ್ಷಿಸುತ್ತೇವೆಂದರೆ ಅವು ವ್ಯಕ್ತಿಗತ ತೀರ್ಮಾನಗಳಿಗಿಂತ ಹೆಚ್ಚು ಜವಾಬ್ದಾರಿಯುತವಾಗಿರುತ್ತವೆ ಎಂಬ ಅಂಶದಿಂದ.

ನಂಬಲರ್ಹವಾದ ವ್ಯಕ್ತಿಗಳಿಂದ ವರದಿಯಾದ ನಂಬಲಸಾಧ್ಯವಾದ

ಘಟನೆಗಳನ್ನು, ರೇಡಾರ್, ಥಿಯೋಡೋಲೈಟ್ ಸ್ಕೋಪ್, ಸ್ಟೀರಿಯೋ ಸ್ಕೋಪಿಕ್ ಗ್ರಿಡ್ ಕ್ಯಾಮರಾಗಳು ತೋರಿಸಿದ ಮಾಹಿತಿಗಳನ್ನು ಸರ್ಕಾರದ ಮತ್ತು ಮಿಲಿಟರಿಯ ವಿಶ್ಲೇಷಣಕಾರರು ನಂಬಲಿಲ್ಲ. ಅವುಗಳನ್ನು ಪರಿಚಿತ ವಸ್ತುಗಳೆಂದು ಅರ್ಥೈಸಲು, ಸುಳ್ಳುಗಳೆಂದು ತೀರ್ಮಾನಿಸಲು ತಮ್ಮ ಕೈಲಾದುದನ್ನೆಲ್ಲ ಮಾಡಿದ್ದಾರೆ. ಇಷ್ಟಾಗಿಯೂ ಉಳಿದ ಗಟ್ಟಿ ಘಟನೆಗಳನ್ನು ನಾನಿಲ್ಲಿ ನಿಮಗೆ ತಿಳಿಸಿದ್ದೇನೆ. ಏಕೆಂದರೆ ಅತಿ ತೀವ್ರ ವಿಮರ್ಶೆಯ ಅಗ್ನಿಪರೀಕ್ಷೆಯಲ್ಲೂ ಇವು ಉಳಿದವು ಎಂದು.

ಅನೇಕರು 'ಫ್ಲೈಯಿಂಗ್ ಸಾಸರ್'ಗಳ ಲೇಖನ ಓದಿದವರು ನನ್ನನ್ನ ಕೇಳುತ್ತಾರೆ, ಹಾಗಾದರೆ ನಮಗೇಕೆ ಒಂದೂ 'ಫ್ಲೈಯಿಂಗ್ ಸಾಸರ್' ಅನುಭವ ಆಗಿಲ್ಲ. ನಮ್ಮ ದೇಶಕ್ಕೆ 'ಫ್ಲೈಯಿಂಗ್ ಸಾಸರ್' ಗಳು ಬರುವುದೇ ಇಲ್ಲವೆ? ಇತ್ಯಾದಿ.

'ಫ್ಲೈಯಿಂಗ್ ಸಾಸರ್'ಗಳ ವಿದ್ಯಮಾನಗಳನ್ನೆಲ್ಲಾ ಅಭ್ಯಾಸ ಮಾಡಿದವರಿಗೆ ಒಂದು ವಿಷಯ ಚೆನ್ನಾಗಿ ಗೊತ್ತಾಗುತ್ತದೆ. 'ಫ್ಲೈಯಿಂಗ್ ಸಾಸರ್' ಗಳು ಈವರೆಗೂ ಬಂದ, ಭೂಮಿಗಿಳಿದ, ಘಟನೆಗಳೆಲ್ಲಾ ಬಹುಪಾಲು ನಡೆದಿರುವುದು ಜನ ನಿಬಿಡತೆ ಕಡಿಮೆ ಇರುವ ಅಥವಾ ನಿರ್ಜನ ಪ್ರದೇಶಗಳಲ್ಲಿ. ಜನಬಾಹುಳ್ಯದಿಂದ ಬೀಗುತ್ತಿರುವ ಭಾರತದಲ್ಲಿ 'ಫ್ಲೈಯಿಂಗ್ ಸಾಸರ್'ಗಳು ಇಳಿಯಲು ಜಾಗ ತುಂಬ ಕಡಿಮೆ ಎಂದೇ ಹೇಳಬಹುದು. ಎರಡನೆಯದಾಗಿ ರಕ್ಷಣಾ ಸ್ಥಾವರಗಳು ಅಣು ಸಂಶೋಧನ ಕೇಂದ್ರಗಳು ನಮ್ಮಲ್ಲಿ ಮುಂದುವರಿದ ರಾಷ್ಟ್ರಗಳಷ್ಟು ಇಲ್ಲ. ಹಾಗಾಗಿ 'ಫ್ಲೈಯಿಂಗ್ ಸಾಸರ್' ಗಳಿಗೆ ವೀಕ್ಷಣೆಗೆ ಹಿಂದುಳಿದ ದೇಶಗಳು ಅಷ್ಟು ಪ್ರಮುಖವಾಗಿ ಕಾಣದಿರಬಹುದು.

ಇಷ್ಟಾಗಿಯೂ ನಮ್ಮ ದೇಶದ ಪತ್ರಿಕೆಗಳಲ್ಲೂ ಆಗಾಗ 'ಫ್ಲೈಯಿಂಗ್ ಸಾಸರ್' ಘಟನೆಗಳ ವರದಿಗಳು ಬರುತ್ತಲೇ ಇದೆ ಎನ್ನುವುದನ್ನು ನಾವು ಮರೆಯಬಾರದು. ಈಗ್ಗೆ ಕೆಲವೇ ದಿನಗಳ ಹಿಂದೆ ಉತ್ತರಕರ್ನಾಟಕದಲ್ಲಿ, ದೆಹಲಿ ಬಳಿ, ಕಲ್ಕತ್ತಾದ ಬಳಿ 'ಫ್ಲೈಯಿಂಗ್ ಸಾಸರ್'ಗಳು ಕಾಣಿಸಿಕೊಂಡ ವರದಿಗಳೂ, ಅವು ಭೂಮಿಗೆ ತೀರ ಸಮೀಪದಲ್ಲಿ ಹಾರಿದಾಗ ಬೆಂಕಿ ಮಳೆಯಾಯ್ತೆಂಬ ವರದಿಗಳೂ ಬಂದಿರುವುದನ್ನು ಓದುಗರು ಜ್ಞಾಪಿಸಿಕೊಳ್ಳಬೇಕು. ಆದರೆ ಅಕ್ಷರಸ್ಥರ ಸಂಖ್ಯೆಯೇ ತೀರಾಕಡಿಮೆ ಇರುವುದರಿಂದ ರಾಜಕಾರಣಿಗಳ ಹೆಲಿಕ್ಯಾಪ್ಟರಿಗೂ 'ಫ್ಲೈಯಿಂಗ್ ಸಾಸರ್'ಗೂ ವ್ಯತ್ಯಾಸ ತಿಳಿಯದಷ್ಟು ಜನ ಮುಗ್ಧರಿರುವುದರಿಂದ ಬಹುಪಾಲು 'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳು ವರದಿಯಾಗುವುದೇ ಇಲ್ಲ. ವರದಿಯಾದ 'ಫ್ಲೈಯಿಂಗ್ ಸಾಸರ್' ಸಂಗತಿಗಳನ್ನೂ ಕೂಲಂಕಶವಾದ ತನಿಖೆಗೆ ಒಳಪಡಿಸಿ ದಾಖಲು ಮಾಡುವ ಸರಕಾರಿ ಅಥವಾ

ಸ್ವತಂತ್ರ ಸಂಸ್ಥೆಗಳೂ ಯಾವುದೂ ನಮ್ಮಲ್ಲಿಲ್ಲ. ಹೀಗಾಗಿ ನಮ್ಮ ದೇಶದಲ್ಲಿ 'ಫ್ಲೈಯಿಂಗ್ ಸಾಸರ್' ಅಧ್ಯಯನ ಅಭ್ಯಾಸ ಇತ್ಯಾದಿಗಳು ಕಡಿಮೆಯಾಗಿದೆ.

'ಫ್ಲೈಯಿಂಗ್ ಸಾಸರ್' ವರದಿಗಳನ್ನು ಒಂದೆಡೆ ಕಲೆಹಾಕಿ ಪರೀಕ್ಷಿಸುವ, ವಿಶ್ಲೇಷಣೆ ಮಾಡುವ ಸಂಸ್ಥೆಯೊಂದು ಹಿಂದುಳಿದ ದೇಶಗಳಲ್ಲಿ ಇಲ್ಲದಿರುವುದರಿಂದ ಇಲ್ಲಿ 'ಫ್ಲೈಯಿಂಗ್ ಸಾಸರ್' ವರದಿಗಳೇ ಕಡಿಮೆ ಎನ್ನುವಂತೆ ನಮಗೆ ಭಾಸವಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲೂ ಎಲ್ಲರೂ ಯಾವಾಗಲೂ 'ಫ್ಲೈಯಿಂಗ್ ಸಾಸರ್'ಗಳನ್ನು ನೋಡುತ್ತಿದ್ದಾರೆಂದು ನಾವು ಭ್ರಮಿಸಬಾರದು. ಆದರೆ ಯಾರೊ ಒಬ್ಬರು ಯಾವಾಗಲೋ ಒಮ್ಮೆ ನೋಡಿದ 'ಫ್ಲೈಯಿಂಗ್ ಸಾಸರ್' ವರದಿಗಳನ್ನೇ ಒಂದುಕಡೆ ಕಲೆಹಾಕತೊಡಗಿದೊಡನೆ ಅವರಿಗೆ ಗೊತ್ತಾದ ಅಂಶವೇನೆಂದರೆ 'ಫ್ಲೈಯಿಂಗ್ ಸಾಸರ್' ಗಳನ್ನು ಪ್ರತಿದಿನ ಒಂದಿಲ್ಲೊಂದು ಕಡೆ ಒಬ್ಬರಲ್ಲೊಬ್ಬರು ನೋಡುತ್ತಲೇ ಇದ್ದಾರೆ ಎನ್ನುವ ಆಶ್ಚರ್ಯಕಾರಕ ಸಂಗತಿ.

೧೯೬೭ರ ಏಪ್ರಿಲ್ ಒಂದು ತಿಂಗಳಿನ ವರದಿಯನ್ನು ಸಾಸರ್ ರಿವ್ಯೂನಲ್ಲಿ ನೋಡಿದರೂ ಸಾಕು. ಒಂದೊಂದು ದಿನವಂತೂ ಪ್ರಪಂಚದ ನಾಲ್ಕಾರು ಭಾಗಗಳಲ್ಲಿ ಜನಗಳು ನೋಡಿದ ವರದಿಗಳಿವೆ. ಅಲಾಸ್ಕಾ, ವಿಸ್ಕಾನ್‌ಸಿನ್, ಬ್ರೆಸಿಲ್, ಬೋರ್ನಿಯೋ, ನ್ಯೂಗಿನಿಯಾ ಹೀಗೆ ಸಹಸ್ರಾರು ಮೈಲು ದೂರದ ದೇಶಗಳಲ್ಲೆಲ್ಲ ಏಕಕಾಲದಲ್ಲಿ ಒಂದೇ ದಿನದಲ್ಲಿ ಜನ ನೋಡಿದ ವರದಿಗಳಿವೆ. ಎಂದರೆ ಯಾರೋ ಒಬ್ಬರು ಅವರ ಜೀವಿತ ಕಾಲದಲ್ಲಿ ಎಲ್ಲೋ ಒಮ್ಮೆ ನೋಡಿದ ವರದಿಗಳಿದ್ದರೂ ಅವನ್ನೆಲ್ಲ ಒಂದೇಕಡೆ ಕಲೆಹಾಕಿ ವಿಶ್ಲೇಷಿಸುವ ಸೌಲಭ್ಯ ಇದ್ದರೆ ಮಾತ್ರ ನಮಗೆ ನಮ್ಮ ದೇಶದಲ್ಲಿ 'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳು ನಡೆಯುತ್ತಿವೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಬಡತನ ನಿರುದ್ಯೋಗ ಮುಂತಾದ ತಕ್ಷಣದ ಸಮಸ್ಯೆಗಳಿಗೇ ಗಮನ ಕೊಡಬೇಕಾಗಿರುವುದರಿಂದ ನಾವು ದೂರದ ತಾರಾ ಮಂಡಲದ ಅಪರಿಚಿತ ಯಂತ್ರಗಳತ್ತ ಸರಿಯಾಗಿ ಗಮನ ಹರಿಸಲಾಗುತ್ತಿಲ್ಲ.

ಈವರೆಗೆ ನಾನು ಬರೆದ ಸಂಗತಿಗಳು ಡಾ.ಅಲೆನ್ ಜೆ ಹೈನೆಕ್ ಹೇಳುವಂತೆ 'ಫ್ಲೈಯಿಂಗ್ ಸಾಸರ್'ಘಟನೆಗಳು ಮಾತ್ರ. ಇವು ಕೇವಲ 'ಫ್ಲೈಯಿಂಗ್ ಸಾಸರ್' ವರದಿಗಳು. ಇವು ಯಾವುವೂ Close Encounter ಅಥವಾ ಹತ್ತಿರದ ಮುಖಾಮುಖಿಗಳಲ್ಲ. ಎಲ್ಲರೂ ನೋಡಿದ, ರೇಡಾರ್‌ನಲ್ಲಿ ಕಂಡ, ಅಥವಾ ಮಿಂಚಿ ಮಾಯವಾದ ಕತ್ತಲಿನಲ್ಲಿ ಚಲಿಸುವ ಬೆಳಕುಗಳು ಮತ್ತು ಬೆಳಕಿನಲ್ಲಿ ಹಾರುವ ಸಾಸರುಗಳು.

ಇದರನಂತರದ ಘಟನೆಗಳನ್ನು ಮೊದಲನೆ ದರ್ಜೆ ಮುಖಾಮುಖಿ ಎಂದು ಆತ ಕರೆಯುತ್ತಾನೆ. (Close encounter of the first kind) ಇವು

'ಫ್ಲೈಯಿಂಗ್ ಸಾಸರ್'ಗಳನ್ನು ಮನುಷ್ಯ ಅಥವಾ ಮನುಷ್ಯರು ಹತ್ತಿರದಿಂದ ನೋಡಿದಂಥವು. ಆತನ ಜೀವನಾದ್ಯಂತ ಮರೆಯಲಾಗದ ನೆನಪಿನ ಮುದ್ರೆಯನ್ನು ಒತ್ತಿದಂಥವು. ಅದೊಂದು ಮನುಷ್ಯನಿಗೆ ಬೆರಗಾಗುವಂಥ ಅಪ್ರತಿಭನಾಗುವಂಥ ಘಟನೆ. ಆದರೆ ಅದು ಮರುಕ್ಷಣ ಕೇವಲ ನೆನಪಾಗಿಬಿಡುತ್ತದೆ. ಆ ಅನುಭವದ ಯಾವುದೇ ಭೌತ ಚಿಹ್ನೆಗಳೂ ಇರುವುದಿಲ್ಲ. ಇಂಥ ಘಟನೆಗಳನ್ನೇ ಮೊದಲ ದರ್ಜೆ ಮುಖಾಮುಖಿ ಎಂದು ಹೈನೆಕ್ ಕರೆಯುತ್ತಾನೆ.

ಅನೇಕರು ಈ ಮುಖಾಮುಖಿಯಲ್ಲಿ ಯಾವ ರೀತಿ ಬೆರಗಾಗಿ ದಿಗ್‌ಭ್ರಾಂತರಾಗಿ ಮೂಕವಿಸ್ಮಿತರಾಗುತ್ತಾರೆಂದರೆ ತಮ್ಮ ಕೈಯಲ್ಲೇ ಇರುವ ಕ್ಯಾಮರ ಉಪಯೋಗಿಸಿ ತಾವು ಕಾಣುತ್ತಿರುವುದರ ಛಾಯಚಿತ್ರವನ್ನು ತೆಗೆಯಲೂ ಅವರಿಗೆ ತಿಳಿಯುವುದಿಲ್ಲ. ಈ ರೀತಿಯ ಘಟನೆಗಳಲ್ಲಿ ಅನಂತರ ಬ್ಲೂಬುಕ್ ಯೋಜನೆಯ ವಿಜ್ಞಾನಿಗಳು ತನಿಖೆ ನಡೆಸಿದಾಗ ಅನೇಕರು ತಮ್ಮ ಕೈಯಲ್ಲೋ ಅಥವಾ ಸಮೀಪದ ಕಾರಿನಲ್ಲೋ ಕ್ಯಾಮರ ಇದ್ದರೂ ತಮಗೆ ಛಾಯಾಚಿತ್ರ ತೆಗೆಯಬೇಕೆಂದು ತೋಚಲೇ ಇಲ್ಲವೆಂದು ಹೇಳಿದ್ದಾರೆ.

ಈ ರೀತಿ ಮೊದಲ ವರ್ಗದ ಮುಖಾಮುಖಿಗೆ ಬ್ಲೂ ಬುಕ್ ತನಿಖೆಗಳಿಂದ ಆಯ್ದು ಕೊಡಬಹುದಾದ ಒಂದು ಒಳ್ಳೆಯ ಉದಾಹರಣೆ ಎಂದರೆ ಮಾರ್ಚ್ ೧೩, ೧೯೫೭ರ ಉದಾಹರಣೆ. ಈ ಸಂಗತಿಗೆ ಸಂಬಂಧಿಸಿದ ಊರಿನ ಮತ್ತು ವ್ಯಕ್ತಿಗಳ ಹೆಸರುಗಳನ್ನು ಅವರ ಮನವಿ ಮೇರೆಗೆ ಬ್ಲೂಬುಕ್ ತೆಗೆದುಹಾಕಿದೆ.

.......ಮಾನ್ಯರೆ ,

ಈ ಕೆಳಕಂಡ ಅಪರಿಚಿತ ಹಾರುವ ವಸ್ತುವಿಗೆ ಸಂಬಂಧಿಸಿದ ನನ್ನ ಹೆಂಡತಿಯ ಅನುಭವ ಒಂದನ್ನು ತಿಳಿಸಲು ತಮ್ಮ ಆಫೀಸೇ ಸಮರ್ಪಕವಾದ ಸ್ಥಳ ಎಂದು ತಿಳಿದಿದ್ದರಿಂದ ಈ ಕಾಗದದೊಡನೆ ಅದನ್ನು ಕಳುಹಿಸುತ್ತಿದ್ದೇನೆ. ನನ್ನ ಹೆಂಡತಿಯ ಈ ಅನುಭವಕ್ಕೆ ಸದೃಶವಾದ ಅನುಭವ ಅದೇ ಸಮಯದಲ್ಲಿ ಬೇರಾರಿಗಾದರೂ ಆಯಿತೆ? ಎಂದು ತಿಳಿಯಲು ನಾವು ತುಂಬಾ ಕುತೂಹಲಿಗಳಾಗಿದ್ದೇವೆ.

ದಯವಿಟ್ಟು ನಮ್ಮ ಹೆಸರು , ಸ್ಥಳಗಳನ್ನು ಪ್ರಕಟಿಸಬಾರದೆಂದು ಕೋರುತ್ತೇನೆ.

ಗಂಡನ ಸಹಿ

.......ಮಾನ್ಯರೆ

- ನನ್ನನ್ನು ಹುಚ್ಚಿಯೆಂದಾಗಲೀ ಮತಿವಿಕಲೆ ಎಂದಾಗಲೀ ಪರಿಗಣಿಸಿದರೂ ಸರಿ , ಅಮೆರಿಕಾದ ಸ್ತ್ರೀಯರ ಮೇಲೆ ಹಾಗೂ ಮನುಷ್ಯ ಜನಾಂಗದ ಮೇಲೆ ಆಣೆಯಿಟ್ಟು ಈ ಕೆಳಕಂಡ ಘಟನೆಯನ್ನು ಪ್ರಾಮಾಣಿಕವಾಗಿ

ನಿಮಗೆ ತಿಳಿಸಬಯಸುತ್ತೇನೆ.

ನಾನು ಆ ದಿನ ಕಂಡ ಹಾರುವ ಯಂತ್ರ ಈ ವರೆಗೆ ಮನುಷ್ಯ ಮಾಡಿದ ವಿಮಾನ, ಹೆಲಿಕಾಪ್ಟರು, ಬೆಲೂನು, ಅಥವಾ ಇನ್ನಾವುದೇ ಪರಿಚಿತ ಆಕಾಶ ಯಂತ್ರವಾಗಿರಲಿಲ್ಲ.

ನಾನಾಗ ಸಂಪೂರ್ಣ ನನ್ನ ಬುದ್ಧಿಯ ಸ್ಥಿಮಿತದಲ್ಲಿದ್ದೆ. ಅಷ್ಟೇ ಅಲ್ಲ, ಆ ಅನುಭವದಾದ್ಯಂತವೂ ನಾನು ಸಂಪೂರ್ಣವಾಗಿ ಬುದ್ಧಿ ಪೂರ್ವಕವಾಗಿಯೂ ಪ್ರಜ್ಞಾವಂತಳಾಗಿಯೂ ಇದ್ದೆ.

ನಾನು ಆ ಯಂತ್ರವನ್ನು ಬುಧವಾರ ಸಾಯಂಕಾಲ ೨ ಗಂಟೆ ಸಮಯದಲ್ಲಿ ಸರಿಯಾಗಿ ನೋಡಿದೆ. ಮೊದಲು ಮನೆಯ ಹಿಂಭಾಗದ ಕಿಟಕಿಯಿಂದ ಅನಂತರ ಮನೆಯ ಹಿಂಬಾಗಿಲಿನಿಂದ ಹೊರಬಂದು ಅದನ್ನು ನೋಡಿದೆ. ನಮ್ಮ ಮನೆ ನ್ಯೂ ಜರ್ಸಿಯ ಗ್ರೇಟ್ ಮೆಡೋಸ್ ಹೆದ್ದಾರಿಯ ಪಕ್ಕದಲ್ಲಿದೆ. ಆಗ ಆಕಾಶ ಶುಭ್ರವಾಗಿತ್ತು. ನಮ್ಮ ಮನೆಯ ಹಿಂಭಾಗದಲ್ಲಿರುವ ಇಳಿಜಾರಿನಲ್ಲಿ ಆ ಆಕಾಶಯಂತ್ರ ಆಕಾಶದಲ್ಲಿ ನಿಶ್ಚಲವಾಗಿ ನಿಂತಿತ್ತು. ನಾನು ಆ ವಿಚಿತ್ರ ಯಂತ್ರದಿಂದ ಕೇವಲ ೧೫೦ ಅಡಿಗಳಷ್ಟು ದೂರದಲ್ಲಿದ್ದೆ. ನಾನು ಆ ಘಟನೆಯ ಪ್ರತಿಯೊಂದು ವಿವರಗಳನ್ನೂ ಹೇಳುವಷ್ಟು ಏಕಾಗ್ರತೆಯಿಂದ ಆ ವಸ್ತುವನ್ನು ನೋಡಿದೆ, ಅಷ್ಟೇ ಅಲ್ಲದೆ ಅದರ ಸದ್ದನ್ನೂ ಕಿವಿಯಿಂದ ಕೇಳಿದೆ.

ನನಗೆ ಈ ವಸ್ತುವಿನ ಕಡೆಗೆ ಗಮನ ಹರಿದಿದ್ದು ಕಟ್ಟಿಹಾಕಿದ್ದ ನಮ್ಮ ನಾಯಿಗಳು ಬೊಗಳತೊಡಗಿದ್ದರಿಂದ. ಅವು ಆಕಾಶದ ಕಡೆಗೆ ಮುಖಮಾಡಿಕೊಂಡು ಆ 'ಫ್ಲೈಯಿಂಗ್ ಸಾಸರ್' ಕಡೆಗೆ ನೋಡುತ್ತಾ ಬೊಗಳುತ್ತಿದ್ದವು. ಏತಕ್ಕೆ ಬೊಗಳುತ್ತಿವೆ ಎಂದು ನಾನೂ ಆಕಾಶದ ಕಡೆಗೆ ನೋಡಿದಾಗ ನನಗೆ ತೀರಾ ಸಮೀಪದಲ್ಲೇ ಆಕಾಶದಲ್ಲಿ ನಿಶ್ಚಲವಾಗಿ ನಿಂತಿದ್ದ 'ಫ್ಲೈಯಿಂಗ್ ಸಾಸರ್' ಕಾಣಿಸಿತು. ನಾಯಿಗಳು 'ಫ್ಲೈಯಿಂಗ್ ಸಾಸರ್' ಅಲ್ಲಿಂದ ಹೋಗುವವರೆಗೂ ಬೊಗಳಿ ಗಲಾಟೆ ಮಾಡುತ್ತಲೇ ಇದ್ದವು.

ಆ ಮೆಷೀನಿನ ಆಕಾರ ಒಂದು ಹ್ಯಾಟಿನ ಹಾಗೆ ಇತ್ತು. ಆ ವಸ್ತುವಿನ ಉದ್ದ ಸುಮಾರು ೫೦ ಅಡಿ ಇದ್ದು ಮಧ್ಯಭಾಗದಲ್ಲಿ ೩೦ ಅಡಿ ಎತ್ತರದ ಗಂಟೆಯಾಕಾರದ ಗುಮ್ಮಟವಿತ್ತು. ಅದರ ಕೆಳಭಾಗ ಸಮಾನಾಂತರವಾಗಿ ಮುಚ್ಚಿದಂತಿದ್ದು ಯಾವುದೇ ಕಿಟಕಿಯಾಗಲೀ ಕಿಂಡಿಯಾಗಲೀ ನನಗೆ ಕಾಣಲಿಲ್ಲ. ಇಡೀ ಯಂತ್ರದಲ್ಲೇ ಮೇಲೆಲ್ಲೂ ಕೂಡ ನನಗೆ ಕಿಟಕಿಗಳಾಗಲೀ ಕಿಂಡಿಯಾಗಲೀ ಕಾಣಲಿಲ್ಲ. ಅದಕ್ಕೆ ಯಾವುದೇ ಬಗೆಯ ಬಾಗಿಲುಗಳೂ ಇಲ್ಲದುದರಿಂದ ಅದರೊಳಗಿನ ಮನುಷ್ಯನಾಗಲೀ, ಅಥವಾ ಇನ್ನಾವುದೇ ಜೀವಿಯನ್ನಾಗಲೀ ಅದರೊಳಗಿನ ಪ್ರಯಾಣಿಕರು ಅಥವಾ ಚಾಲಕರಾಗಲೀ ನನಗೆ ಕಾಣಲಿಲ.

ಆ ಯಂತ್ರವು ಬಿಳಿಯ ಬಣ್ಣದ್ದಾಗಿತ್ತು ಮತ್ತು ಅದರ ಮೇಲೆ ಯಾವ ಬಗೆಯ ಅಲಂಕಾರಿಕ ಬಣ್ಣದ ಗೆರುಗಳು, ಬರವಣಿಗೆಗಳು, ಗುರುತುಗಳು ಯಾವುವನ್ನೂ ನಾನು ಕಾಣಲಿಲ್ಲ. ಆ ವಸ್ತು ಲೋಹದ ವಸ್ತುವಿನಂತೆ ಕಾಣುವುದಕ್ಕಿಂತ ಹೆಚ್ಚಾಗಿ ಪಿಂಗಾಣಿ ವಸ್ತುವಿನಂತೆ ಕಾಣುತ್ತಿತ್ತು. ಆ 'ಫ್ಲೈಯಿಂಗ್ ಸಾಸರ್' ನನ್ನ ಮನೆಯ ಹಿಂಭಾಗದಲ್ಲಿ ನಿಶ್ಚಲವಾಗಿ ನಿಂತಿದ್ದಂತೆ ಕಂಡರೂ ಕೂಡ ದಡದಲ್ಲಿ ನಿಂತ ದೋಣಿಗಳು ಅಲೆಗೆ ಮೆಲ್ಲನೆ ಏರಿಳಿದಂತೆ ಅದೂ ಏರಿಳಿಯುತ್ತಿತ್ತು. ಆ ಯಂತ್ರದಿಂದ ಚಿಕ್ಕ ವಿದ್ಯುತ್ ಮೋಟರಿನಿಂದ ಬರುವಂಥ ಕ್ಷೀಣ ಧ್ವನಿ ಕೇಳುತ್ತಿತ್ತು. ಆ ಯಂತ್ರ ಆ ರೀತಿ ನಿಂತಿರಬೇಕಾದರೆ ಅದರ ಕೆಳಭಾಗದಿಂದ ಚಿನ್ನದ ರೇಖೆಗಳಂತೆ ಕಿಡಿಗಳು ಪ್ರಕಾಶಮಾನವಾಗಿ ಕೆಳಗೆ ಹೊಮ್ಮುತ್ತಿದ್ದುದನ್ನು ಕಂಡೆ.

ಅದು ಮಾಡುತ್ತಿದ್ದ ಸದ್ದಿನಲ್ಲಿ ಯಾವ ಬದಲಾವಣೆಯೂ ಆಗದೆ ಆ ವಸ್ತು ಇದ್ದಕ್ಕಿದ್ದಂತೆ ಸುಮಾರು ಮುನ್ನೂರು ಅಡಿ ಮೇಲೇರಿ ಅನಂತರ ಭಯಂಕರ ವೇಗದಲ್ಲಿ ಕಣ್ಮರೆಯಾಯ್ತು. ನನ್ನ ಪತಿ ಕೆಲಕಾಲದ ಅನಂತರ ನ್ಯೂಯಾರ್ಕಿನಿಂದ ಫೋನ್ ಮಾಡಿದರು. ಕೂಡಲೇ ಅವರಿಗೆ ನಡೆದುದೆಲ್ಲವನ್ನೂ ಫೋನಿನಲ್ಲಿ ತಿಳಿಸಿದೆ. ಮನೆಗೆ ಬಂದನಂತರವೂ ಮತ್ತೆ ವರದಿ ಮಾಡಿದೆ. ಅಂದಿನ ಸಂಜೆಯೇ ನನ್ನ ಜ್ಞಾಪಕಶಕ್ತಿ ಹೊಚ್ಚ ಹೊಸದಾಗಿರುವಾಗಲೇ ದಾಖಲು ಮಾಡೋಣವೆಂದು ನನ್ನ ಪತಿ ಕೇಳುತ್ತಿದ್ದ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನಡೆದ ಘಟನೆಯ ವಿವರಗಳನ್ನು ಬರೆಸಿದೆ. ಆಗ ನನ್ನೊಡನೆ ನಮ್ಮ ಮನೆಯ ಸಮೀಪದ ಕೆಲವು ಜವಾಬ್ದಾರಿಯುತ ಗೃಹಸ್ಥರೂ ಇದ್ದರು. ಆದರೆ ಯಾವುದೇ ಸಂಸ್ಥೆಗಾಗಲೀ ಅಧಿಕಾರಿಗಳಿಗಾಗಲೀ ಇದನ್ನು ವರದಿ ಮಾಡಲಿಲ್ಲ. ಇದನ್ನು ಬಹಿರಂಗಗೊಳಿಸಿದರೆ ಸಾರ್ವಜನಿಕ ಅಪಹಾಸ್ಯಕ್ಕೀಡಾಗಬಹುದೆಂಬ ಒಂದೇ ಕಾರಣದಿಂದ ಸರ್ಕಾರಕ್ಕೆ ಇದನ್ನು ವರದಿ ಮಾಡಲಿಲ್ಲ.

ಹೆಂಡತಿಯ ಸಹಿ

ಇದೇ ರೀತಿ ಕ್ಯಾಲಿಫೋರ್ನಿಯಾದ ರೆಡ್‌ಬ್ಲಫ್ ಊರಿನ ಇಬ್ಬರು ಗಸ್ತಿನ ಪೋಲೀಸರು ರಾತ್ರಿ ಕಂಡ 'ಫ್ಲೈಯಿಂಗ್ ಸಾಸರ್' ಘಟನೆಯನ್ನು ಏರಿಯಾ ಕಮ್ಯಾಂಡರ್‌ಗೆ ವರದಿ ಮಾಡಿದ ಘಟನೆಯನ್ನೂ ಮೊದಲನೆಯ ದರ್ಜೆ ಮುಖಾಮುಖಿಗೆ ಸೇರಿಸಬಹುದಾಗಿದೆ.

-ಸರ್ ನಾನು ಮತ್ತು ಆಫೀಸರ್ ಸ್ಕಾಟ್ ಇಬ್ಬರೂ ಹಾಗ್ ರಸ್ತೆಯಲ್ಲಿ ಹುಚ್ಚಾಪಟ್ಟೆ ವೇಗದಲ್ಲಿ ಮೋಟರುಸೈಕಲ್ ನಡೆಸುತ್ತಿದ್ದವನೊಬ್ಬನನ್ನು ಹಿಡಿಯಲು ಪೆಟ್ರೋಲ್ ಕಾರಿನಲ್ಲಿ ಹೋಗುತ್ತಿದ್ದೆವು.

ನಮಗೆ ಇದ್ದಕ್ಕಿದ್ದಂತೆ ಆಕಾಶದಿಂದ ಯಾವುದೋ ಒಂದು ವಸ್ತು ನಮ್ಮ ಕಾರಿನ ಮುಂದುಗಡೆಯೇ ಬೀಳತ್ತಿದ್ದುದು ಕಂಡಿತು. ದೊಡ್ಡ ವಿಮಾನ

ಬಂದು ಹಾರುತ್ತಿರುವಾಗಲೇ ಕೆಟ್ಟು ನೆಲಕ್ಕೆ ಅಪ್ಪಳಿಸುತ್ತಿದೆ ಎಂದು ತಿಳಿದು ನಾವಿಬ್ಬರೂ ಕಾರನ್ನು ಕೂಡಲೇ ನಿಲ್ಲಿಸಿ ಕಾರಿನಿಂದ ನೆಗೆದು ಸಮೀಪದ ಮರೆಗೆ ಓಡಿದೆವು. ವಿಮಾನ ನೆಲಕ್ಕೆ ಅಪ್ಪಳಿಸಿದರೆ ಆಸ್ಫೋಟನೆಯಾಗುತ್ತದೆಂಬ ಭಾವನೆಯಿಂದ ಹೀಗೆ ಮಾಡಿದೆವು. ಆ ವಸ್ತುವಿನಿಂದ ವಿಮಾನದ ಎಂಜಿನಿನ ಸದ್ದೇನೂ ಬರುತ್ತಿರಲಿಲ್ಲ. ಆದರೂ ಅದು ಯಂತ್ರಗಳೆಲ್ಲ ಸ್ಥಬ್ದಗೊಂಡ ಯಾವುದೋ ದೊಡ್ಡ ಸಾರಿಗೆ ವಿಮಾನವೇ ಇರಬೇಕೆಂದು ನಾವು ಬಗೆದೆವು.

ಆ ವಸ್ತು ನೆಲಕ್ಕೆ ಬೀಳುತ್ತಿದ್ದುದು ನೆಲಕ್ಕೆ ಸುಮಾರು ನೂರು ಅಡಿ ಇರಬೇಕಾದರೆ ತಟಕ್ಕನೆ ನಿಂತು ಮತ್ತೆ ವಿರುದ್ಧ ದಿಕ್ಕಿನಲ್ಲಿ ಅದೇ ವೇಗದಲ್ಲಿ ಸುಮಾರು ೫೦೦ ಅಡಿಗಳಷ್ಟು ಮೇಲೇರಿತು. ಈ ಸಮಯದಲ್ಲಿ ಆ 'ಫ್ಲೈಯಿಂಗ್ ಸಾಸರ್' ನಮಗೆ ಚೆನ್ನಾಗಿ ಕಂಡಿತು. ಅದು ಮನುಷ್ಯರು ಮಾಡಿದ ಯಾವುದೇ ಆಕಾಶಯಂತ್ರವನ್ನೂ ಹೋಲುತ್ತಿರಲಿಲ್ಲವಾದ್ದರಿಂದ ಅದು ಬೀಳುತ್ತಿರುವ ಸಾರಿಗೆ ವಿಮಾನವಲ್ಲೆಂದು ನಮಗೆ ಸ್ಪಷ್ಟವಾಯ್ತು. ಅದರ ವೃತ್ತಾಕಾರದ ಆಕೃತಿಯ ಸುತ್ತಲೂ ಒಂದು ಬಗೆಯ ಪ್ರಭೆ ಇದ್ದುದರಿಂದ ರಾತ್ರಿ ೧೨ ಗಂಟೆ ಸಮಯದಲ್ಲೂ ಅದರ ಆಕೃತಿ ನಮಗೆ ಚೆನ್ನಾಗಿ ಕಾಣುತ್ತಿತ್ತು. ಅದರ ಅಂಚುಗಳಲ್ಲಿ ಎರಡು ಕೆಂಪು ದೀಪಗಳೂ, ಅದರ ನಡುವೆ ಐದು ಪ್ರಕಾಶಮಾನವಾದ ಬಿಳಿಯ ದೀಪಗಳೂ ಇದ್ದವು.

ನಾವು ಕೂಡಲೆ ತೆಹಾಮಾ ಕೌಂಟಿ ಪೋಲೀಸ್ ಸ್ಟೇಷನಿಗೆ ವೈರ್‌ಲೆಸ್ ಮೂಲಕ ಮಾತನಾಡಿ ಸ್ಥಳೀಯ ರೇಡಾರ್ ಸ್ಟೇಷನ್ನಿಗೆ ಇದನ್ನು ರೇಡಾರಿನಲ್ಲೂ ಗುರುತಿಸಿದ್ದಾರೆಯೆ ಎಂದು ಕೇಳಲು ಹೇಳಿದೆವು. ಸ್ಕಾಟ್ ಮತ್ತು ನಾನು ಆ 'ಫ್ಲೈಯಿಂಗ್ ಸಾಸರ್' ನಡವಳಿಕೆಗಳನ್ನು ವೀಕ್ಷಿಸಲಾರಂಭಿಸಿದೆವು. ರೇಡಾರ್ ಸ್ಟೇಷನ್ನಿನಿಂದ ನಮಗೆ ಅದು ಅಪರಿಚಿತ ಆಕಾಶಯಂತ್ರವೆಂದು ಸಂದೇಶ ಬಂತು. ಮೂರು ಸಾರಿ ಆ ವಸ್ತು ನೇರವಾಗಿ ನಮ್ಮ ಗಸ್ತಿನ ವಾಹನದ ಮೇಲೆ ಬಂತು. ಹಾಗೆ ಬಂದಾಗಲೆಲ್ಲ ಆ ವಸ್ತುವಿನ ಯಾವುದೋ ಭಾಗದಿಂದ ಪ್ರಜ್ವಲಿಸುವ ಕೆಂಪು ಬೆಳಕು ಬಂದು ಆ ಭಾಗವೆಲ್ಲಾ ದೇದೀಪ್ಯಮಾನವಾಗುತ್ತಿತ್ತು.

ಈ ನಡುವೆ ಆಫೀಸರ್ ಸ್ಕಾಟ್ ನಮ್ಮ ಕಾರಿನ ಪ್ರವಾಹ ದೀಪವನ್ನು ಹತ್ತಿಸಿ ಅದರ ಕಡೆಗೆ ಬಿಟ್ಟ. ಕೂಡಲೆ ಆ ವಸ್ತು ನಮ್ಮಿಂದ ದೂರಸರಿಯಿತು.

ಆ ವಸ್ತು ನಿಧಾನವಾಗಿ ಪೂರ್ವಾಭಿಮುಖವಾಗಿ ಚಲಿಸತೊಡಗಿತು. ನಾವು ಅದನ್ನು ಹಿಂಬಾಲಿಸತೊಡಗಿದೆವು. ವಿನ್ನಾಫ್ಲೇನ್ಸ್‌ನಲ್ಲಿಯ ಅಗ್ನಿಶಾಮಕ ದಳದ ಆಫೀಸಿನವರೆಗೂ ಅದನ್ನು ಹಿಂಬಾಲಿಸಿದೆವು.

ಅಷ್ಟರಲ್ಲಿ ಅದೇರೀತಿಯ ಇನ್ನೊಂದು 'ಫ್ಲೈಯಿಂಗ್ ಸಾಸರ್'

ದಕ್ಷಿಣದಿಂದ ಸದ್ದಿಲ್ಲದೆ ಬಂತು. ಎರಡೂ ಒಟ್ಟಿಗೆ ಕೆಲವು ಕಾಲದವರೆಗೆ ನಿಂತಿದ್ದವು. ಅನಂತರ ಇದ್ದಕ್ಕಿದ್ದಂತೆ ಎರಡೂ ಭಯಂಕರ ವೇಗದಲ್ಲಿ ಪೂರ್ವದಿಕ್ಕಿನ ದಿಗಂತದಲ್ಲಿ ಮಾಯವಾದವು. ನಾವು ರಾತ್ರಿ ೧೧.೩೦ರಿಂದ ಸುಮಾರು ಎರಡೂವರೆ ಗಂಟೆಗಳವರೆಗೂ ಆ ವಸ್ತುಗಳನ್ನು ವೀಕ್ಷಿಸುತ್ತಾ ಕಾಲ ಕಳೆದೆವು.


ನಾವು ಶರೀಫ್ ಕಛೇರಿಗೆ ಹಿಂದಿರುಗಿದೆವು. ನಮ್ಮ ಮೇಲಧಿಕಾರಿಗಳಿಬ್ಬರೂ ಆ ಎರಡೂ 'ಫ್ಲೈಯಿಂಗ್ ಸಾಸರ್'ಗಳನ್ನು ನೋಡಿದ್ದರು. ಅವರ ವಿವರಣೆಗಳೆಲ್ಲಾ ನಮ್ಮ ಅನುಭವಕ್ಕೆ ತದ್ವತ್ತಾಗಿತ್ತು. ಅಷ್ಟಲ್ಲದೆ ರೇಡಾರ್ ತಂತ್ರಜ್ಞರೂ ಕೂಡ ರೇಡಾರ್ ಮೂಲಕ ಮತ್ತು ಬರಿಗಣ್ಣಿನಿಂದ ಇದನ್ನು ನೋಡಿದ್ದರು.

ಆಫೀಸರ್ ಸಹಿ X

ಬ್ಲೂಬುಕ್ ಸಂಶೋಧನೆಯ ದಾಖಲೆಗಳಲ್ಲಿ ಮೊದಲ ದರ್ಜೆಯ ಮುಖಾಮುಖಿಗಳೆಲ್ಲಾ ಬಹುಪಾಲು ರಾತ್ರಿಯವು. ಇದರಲ್ಲಿ ಎಕ್ಸ್ಟರ್ ಬಳಿ ನಡೆದ ಘಟನೆ 'ಫ್ಲೈಯಿಂಗ್ ಸಾಸರ್' ಉತ್ಸಾಹಿಗಳಿಗೆ ತುಂಬಾ ಕುತೂಹಲಕರವಾದುದು.

# ಎಕ್ಸ್‌ಟರ್ ಊರಿನಲ್ಲಿ ನಡೆದದ್ದೇನು?

(The Incident At Exter by John Pouler)



ಇದೊಂದು 'ಮೌಂಟ್ ಪಾಲೋಮಾರ್ ವೀಕ್ಷಣಾಲಯದ ಬಳಿ ತೆಗೆದ ಚಿತ್ರ. ಚಂದ್ರನಿಗೂ ಭೂಮಿಗೂ ನಡುವೆ ಭೂಮಿಗೆ ಹತ್ತಿರದಲ್ಲಿ 'ಫ್ಲೈಯಿಂಗ್ ಸಾಸರ್' ಹಾರುತ್ತಾ ಇರುವುದು. ಟೆಲಿಸ್ಕೋಪ್ ದೂರದರ್ಶಕಗಳಲ್ಲಿ ಮಾತ್ರ ಈ ಬಗೆಯ ಚಿತ್ರ ಲಭಿಸುತ್ತದೆ. ರೇಡಿಯೋಟೆಲಿಸ್ಕೋಪ್ ಚಿತ್ರಗಳು ಗ್ರಾಫ್ ನಕ್ಷೆಗಳಂತಿರುವುದರಿಂದ ಛಾಯಾ ಚಿತ್ರಗಳಂತೆ ನೋಡಲಾಗದು.

ಕಮಾಂಡರ್

USAF:-ಇವರಿಗೆ

ಈ ಕಛೇರಿ ಈವರೆಗೂ ತಾನು ತನಿಖೆ ಮತ್ತು ವರದಿ ಮಾಡಿದ ಯಾವುದೇ ಘಟನೆಯ ಬಗ್ಗೆಯೂ ತನ್ನ ಅಭಿಪ್ರಾಯವನ್ನು ಪ್ರಕಟಿಸಿಲ್ಲ. ಅಲ್ಲದೆ ಈ ತನಿಖೆಗಳನ್ನು ಮುಂದಿನ ವಿಶ್ಲೇಷಣೆಗಾಗಿ USAFಗೆ ಕಳಿಸಲಾಗಿದೆ ಎಂದು ಹೇಳಿದ್ದೇವೆ. (USAF ಎಂದರೆ United States Air Force) ಅಮೆರಿಕಾ ವಾಯುದಳವೇ ಈ ಬಗ್ಗೆ ಮುಂದಿನ ತೀರ್ಮಾನ ಪ್ರಕಟಿಸುತ್ತದೆಂದು ಹೇಳಿದ್ದೇವೆ. ಈ ಘಟನೆಗಳ ಬಗ್ಗೆ ತಾವು ತಮ್ಮ ಪ್ರತಿಕ್ರಿಯೆಯನ್ನು ತಿಳಿಸದೆ ಮೌನವಾಗಿರುವುದರಿಂದ ಜನಗಳಲ್ಲಿ ಸಂಶಯ ಮೂಡತೊಡಗಿದೆ. ವಾಯುದಳ ಇದರ ಬಗ್ಗೆ ನಿಜ ಸಂಗತಿಯನ್ನು ತಿಳಿಸಿದರೆ ಜನಗಳಲ್ಲಿ ಭಯ ಭೀತಿ ಉಂಟಾಗಬಹುದೆಂದು ಮೌನವಾಗಿದೆ ಎಂದು ಜನ ಊಹಿಸಿದ್ದಾರೆ. ನಾವು

ಪ್ರತಿಯೊಂದು ಸಂದರ್ಭದಲ್ಲೂ USAF ಈ ಬಗ್ಗೆ ಆಸ್ಥೆವಹಿಸಿದೆ, ತನ್ನ ವಿಶ್ಲೇಷಣೆಗಳನ್ನು ಹೇಳುತ್ತದೆ ಎಂದು ಸ್ಪಷ್ಟೀಕರಣ ಕೊಟ್ಟಿದ್ದೇವೆ. ಆದರೂ ಇದರಿಂದ ಜನಗಳಿಗೆ ಸಮಾಧಾನವಾಗಿಲ್ಲ.

ಈ ಕಾಗದದೊಂದಿಗೆ ಎಕ್ಸ್‌ಟರ್‌ನಲ್ಲಿ ನಡೆದ ಘಟನೆಯ ವ್ಯಾಪಕ ತನಿಖೆಯನ್ನು ಕಳಿಸಿದ್ದೇವೆ. ತಾವು ವಿಶ್ಲೇಷಣೆಗಳ ಫಲಿತಾಂಶಗಳನ್ನು ಪತ್ರಿಕಾಗೋಷ್ಠಿಯಲ್ಲಿ ವ್ಯಕ್ತಪಡಿಸಿದರೆ ನಾವು ಇಕ್ಕಟ್ಟಿನಿಂದ ಹೊರ ಬರಬಹುದು. ಈವರೆಗೂ ನಾವು ಕಳಿಸಿದ ವರದಿಗಳು ಅಧ್ಯಯನ ಮಾಡಲ್ಪಟ್ಟಿವೆಯೆ? ಎಂಬುದನ್ನು ತಿಳಿಸಿದರೆ ತುಂಬಾ ಕೃತಜ್ಞರಾಗಿರುತ್ತೇವೆ.

ABB ,ILT ,USAF

ನಿರ್ದೇಶಕರು

ವಾಯುದಳ ತನಿಖಾವಿಭಾಗ

ಇದು ವಾಯುದಳದ ತನಿಖಾ ವಿಭಾಗದ ನಿರ್ದೇಶಕರು USAF ಕಮಾಂಡರಿಗೆ ಬರೆದಕಾಗದ. ನಿರ್ದೇಶಕರ ಈ ಕಾಗದ 'ಯು ,ಎಫ್ ,ಒ'ಗಳು ಯಾವರೀತಿ ಸರ್ಕಾರಕ್ಕೆ ಇರಿಸುಮುರಿಸನ್ನು ಉಂಟುಮಾಡಿದ್ದವೆಂದು ತೋರಿಸುತ್ತದೆ. ಈ ಕಾಗದದ ಅನಂತರ ಸರ್ಕಾರ ಜಾನ್ ಫೌಲರ್ ಎಂಬಾತನನ್ನು ಎಕ್ಸ್‌ಟರ್‌ನ ಘಟನೆಯ ವ್ಯಾಪಕ ತನಿಖೆಗೆ ನಿಯಮಿಸಿತು. ಈ ಲೇಖನದಲ್ಲಿ ಕೊಟ್ಟಿರುವ ವಿವರಣೆಗಳಲ್ಲಿ ಬಹುಪಾಲನ್ನು ಫೌಲರ್ ತನ್ನ ವರದಿ ವೀಕ್ಷಣೆ ವಿಶ್ಲೇಷಣೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ The Incident at Exeter ಎಂಬ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.

ಎಕ್ಸ್‌ಟರ್ ಘಟನೆಯ ಪ್ರಥಮ ಅಂಕ ಆರಂಭವಾಗುವುದು ನಾರ್ಮನ್ ಮಾಸ್ಕರೆಲ್ಲೋ ಎನ್ನುವ ಯುವಕನ ವರದಿಯಿಂದ. ಮಾಸ್ಕರೆಲ್ಲೋ ಎಕ್ಸ್‌ಟರ್ ಬಳಿಯ ೧೫೦ನೇ ನಂಬರ್ ಹೆದ್ದಾರಿಯಲ್ಲಿ ನಡೆದು ಪ್ರಯಾಣ ಮಾಡುತ್ತಿದ್ದ. ಡ್ಯೆನರ್ ಫೀಲ್ಡ್ ಎನ್ನುವ ಒಂದು ವಿಸ್ತಾರವಾದ ನಿರ್ಜನ ಬಯಲಿನ ಬಳಿಗೆ ಆತ ಬರುವಾಗ ಇದ್ದಕ್ಕಿದ್ದಂತೆ ಹಿಂದಿನಿಂದ ಬೆಳಕೊಂದು ಅವನನ್ನು ಹಿಂಬಾಲಿಸುತ್ತಿರುವಂತೆ ಭಾಸವಾಯ್ತು. ಹಿಂದಿನಿಂದ ಬರುತ್ತಿರುವ ಯಾವುದೋ ಕಾರಿನ ಬೆಳಕಿರಬಹುದೆಂದು ಮೊದಲು ಆತ ಗಮನಿಸಲಿಲ್ಲ. ಆದರೆ ಆ ಬೆಳಕು ಮುಂದೆ ಹೋಗದಿದ್ದುದನ್ನು ಕಂಡು ಅವನಿಗೆ ಅನುಮಾನ ಬಂದು ತಿರುಗಿ ನೋಡಿದಾಗ ಆ ಬೆಳಕು ರಸ್ತೆಯಿಂದ ಬರದೆ ಆಕಾಶದ ಯಾವುದೋ ಅಪರಿಚಿತ ಯಂತ್ರದಿಂದ ಬರುತ್ತಿರುವುದು ಅವನಿಗೆ ಅರಿವಾಯ್ತು.

ಎರಡು ತುದಿಗಳಲ್ಲೂ ಉಜ್ವಲವಾದ ಎರಡು ಕೆಂಪು ದೀಪಗಳಿದ್ದು ಅವೆರಡರ ನಡುವೆ ಐದು ಬಿಳಿಯ ದೀಪಗಳಿದ್ದವು. ಆ ದೀಪಗಳು ಎಷ್ಟೊಂದು ಪ್ರಖರವಾಗಿದ್ದುವೆಂದರೆ ಸುತ್ತಲಿನ ಪ್ರದೇಶವೆಲ್ಲಾ ಬಿಸಿಲು ಬಿದ್ದಂತೆ ಕಾಣುತ್ತಿತ್ತು.

ಕಣ್ಣು ಕುಕ್ಕುವಂತಿದ್ದ ಅದರ ಬೆಳಕಿನಲ್ಲಿ ಮಾಸ್ಕರೆಲ್ಲೋಗೆ ಆ ಯಂತ್ರದ ಯಾವುದೇ ವಿವರಗಳೂ ಗೊತ್ತಾಗಲಿಲ್ಲ. ಆ ದೀಪಗಳು ಮಾಸ್ಕರೆಲ್ಲೋಗಿಂತ ನೂರುಅಡಿ ದೂರದಲ್ಲಿ ಮತ್ತು ನೂರುಅಡಿ ಎತ್ತರದಲ್ಲಿ ಇದ್ದವು.

ಆ ಬೆಳಕುಗಳು ನಾಡಿಯ ಮಿಡಿತದಂತೆ ಒಂದಾದ ಮೇಲೊಂದರಂತೆ ಸರದಿಪ್ರಕಾರ ಹತ್ತುತ್ತಾ ಆರುತ್ತಾ ಇದ್ದವು. ಅಲೆಗಳ ಮೇಲಿನ ದೋಣಿಯಂತೆ ಆ 'ಫ್ಲೈಯಿಂಗ್ ಸಾಸರ್' ನಿಧಾನವಾಗಿ ಏರಿಳಿಯುತ್ತಿತ್ತು. ಅವು ಮಾಸ್ಕರೆಲ್ಲೋ ತಲೆಯ ಮೇಲಿಂದ ಪಕ್ಕದ ಮೈದಾನದ ಕಡೆಗೆ ನಿಧಾನವಾಗಿ ತೇಲಿಹೋದವು. ಆ ಯಂತ್ರ ಒಮ್ಮೊಮ್ಮೆ ಮರಗಳ ಹಿಂದೆ ಮಾಯವಾಗಿ ಮತ್ತೆ ಮೇಲೇರುತ್ತಿತ್ತು. ಸುಮಾರು ಕಾಲುಗಂಟೆಯವರೆಗೆ ಮುಂದೇನು ಮಾಡಬೇಕೆಂದು ತಿಳಿಯದೆ ಮಾಸ್ಕರೆಲ್ಲೋ ಅದನ್ನೇ ನೋಡುತ್ತಿದ್ದ. ಒಮ್ಮೊಮ್ಮೆ ಬೆಳಕು ಅವನ ಮೇಲೆ ಬೀಳುವಂತೆ ವೇಗವಾಗಿ ಬರುತ್ತಿತ್ತು. ಒಮ್ಮೆಯಂತೂ ಮಾಸ್ಕರೆಲ್ಲೋ ತನಗೆ ಢಿಕ್ಕಿ ಹೊಡೆದೇಬಿಡುತ್ತದೆಂದು ತಿಳಿದು ಪಕ್ಕದಲ್ಲಿದ್ದ ಗುಂಡಿಯೊಂದರೊಳಗೆ ನೆಗೆದು ಹುದುಗಿ ಕುಳಿತಿದ್ದ. ಕೆಲಕಾಲದ ಅನಂತರ ಆ ಯಂತ್ರದ ದೀಪಗಳು ನಿಧಾನವಾಗಿ ದೂರಾದವು.

ಮಾಸ್ಕರೆಲ್ಲೋ ದಾರಿಯಲ್ಲಿ ಹೋಗುತ್ತಿದ್ದ ಕಾರೊಂದನ್ನು ನಿಲ್ಲಿಸಿ ಪೋಲೀಸ್ ಸ್ಟೇಷನ್ನಿನವರೆಗೆ ಕರೆದೊಯ್ಯಲು ಕೇಳಿಕೊಂಡ. ಪೋಲೀಸ್ ಸ್ಟೇಷನ್ನಿಗೆ ಮಾಸ್ಕರೆಲ್ಲೋ ಹೋದಾಗ ಅಲ್ಲಿ ಡೆಸ್ಕ್ ಆಫೀಸರ್ ಇದ್ದ. ಆತನ ಹೇಳಿಕೆಯ ಪ್ರಕಾರ ಮಾಸ್ಕರೆಲ್ಲೋ ಸ್ಟೇಷನ್ನಿಗೆ ಬಂದಾಗ ಹೆದರಿ ಬಿಳಿಚಿಕೊಂಡಿದ್ದ. ಡೆಸ್ಕ್ ಆಫೀಸರ್ ಟೋಲ್ಯಾಂಡ್ ಬೀಟ್ ಮೇಲಿದ್ದ ಪೋಲೀಸ್ ಆಫೀಸರ್ ಬರ್ಟ್ರಾಂಡ್‌ನನ್ನು ರೇಡಿಯೋ ಮುಖಾಂತರ ಸಂಪರ್ಕಿಸಿ ಕೊಂಚ ಪೋಲೀಸ್ ಸ್ಟೇಷನ್ನಿಗೆ ಬರಲು ಕೇಳಿಕೊಂಡ.

ಯುಜೀನ್ ಎಫ್ ಬರ್ಟ್ರಾಂಡ್ ೧೯೬೭ ಸೆಪ್ಟೆಂಬರ್ ಮೂರನೇ ತಾರೀಖು 108 ನಂಬರ್ ಬೈಪಾಸ್ ರಸ್ತೆಯಲ್ಲಿ ದೈನಂದಿನ ಗಸ್ತು ತಿರುಗುತ್ತಾ ಬರುತ್ತಿದ್ದ. ಅಲ್ಲೊಂದು ಕಡೆ ರಸ್ತೆಪಕ್ಕದಲ್ಲಿ ನಿರ್ಜನ ಪ್ರದೇಶದಲ್ಲಿ ಒಂದು ಕಾರು ನಿಂತಿತ್ತು. ಅದರಲ್ಲಿ ಓರ್ವ ಏಕಾಂಗಿ ಹೆಂಗಸು ಚಿಂತಾಕ್ರಾಂತಳಾಗಿ ಕುಳಿತಿದ್ದಳು. ಬರ್ಟ್ರಾಂಡ್ ತನಿಖೆ ನಡೆಸಲು ಕಾರು ನಿಲ್ಲಿಸಿ ಇಲ್ಲಿ ಏಕೆ ನಿಂತಿದ್ದೀರೆಂದು ಆಕೆಯನ್ನು ಕೇಳಿದ. ಆಕೆ ತಾನು ಕಾರನ್ನು ಮುಂದಕ್ಕೆ ಬಿಡಲಾರದಷ್ಟು ಗಾಬರಿ ಕಳವಳ ಆದುದರಿಂದ ಕಾರನ್ನು ನಿಲ್ಲಿಸಿದೆ ಎಂದು ಹೇಳಿದಳು.

ಆಕೆ ಕಾರಿನಲ್ಲಿ ಬರುತ್ತಿರಬೇಕಾದರೆ ಒಂದು ಪ್ರಕಾಶಮಾನವಾದ ಬೆಳಕು ಕಾರನ್ನು ಹಿಂಬಾಲಿಸಿಕೊಂಡು ಬರತೊಡಗಿತೆಂದೂ , ಕೊನೆಗೆ ಕಾರಿನ ಮೇಲೇ ಬರತೊಡಗಿತೆಂದೂ , ಭೀತಿಯಿಂದ ತಾನು ಕಾರು ನಿಲ್ಲಿಸಿ ನಿಂತಿದ್ದೇ

ನೆಂದೂ ಹೇಳಿದಳು. ಆದರೆ ಬಟ್ರಾಂಡ್ ಸುತ್ತಮುತ್ತ ನೋಡಿದಾಗ ಯಾವ ಬೆಳಕೂ ಕಾಣಿಸಲಿಲ್ಲ. ಸುಮಾರು ಕಾಲುಗಂಟೆ ಅಲ್ಲೇ ನಿಂತಿದ್ದ ಬಟ್ರಾಂಡ್ ಅನಂತರ ಆಕೆಗೆ ಇನ್ನು ನೀವು ಮುಂದುವರಿಯಬಹುದೆಂದು ಧೈರ್ಯ ಹೇಳಿದ. ಆಕೆ ಹೇಳಿದ್ದೆಲ್ಲ ಅವಳ ಕಲ್ಪನೆಯೆಂದು ಬಟ್ರಾಂಡ್ ತಿಳಿದ. ಅಷ್ಟರಲ್ಲಿ ಬಟ್ರಾಂಡ್‌ಗೆ ಡೆಸ್ಕ ಆಫೀಸರ್ ಟೋಲ್ಯಾಂಡ್‌ನಿಂದ ಕರೆಬಂತು.

ಬಟ್ರಾಂಡ್ ಸ್ಟೇಷನ್ನಿಗೆ ಬಂದಾಗ ಮಾಸ್ಕರೆಲ್ಲೋ ಮತ್ತೊಮ್ಮೆ ತನ್ನ ಅನುಭವವನ್ನು ಬಟ್ರಾಂಡ್‌ಗೆ ಹೇಳಿದ. ಬಟ್ರಾಂಡ್ ದಾರಿಯಲ್ಲಿ ಕಂಡ ಮಹಿಳೆ ಹೇಳಿದ್ದಕ್ಕೂ , ಮಾಸ್ಕರೆಲ್ಲೋ ವರದಿಗೂ ಇರುವ ಸಾಮ್ಯವನ್ನು ಕಂಡು ಚಕಿತನಾದ. ಡೆಸ್ಕ್ ಆಫೀಸರ್ ಟೋಲ್ಯಾಂಡ್ ಬಟ್ರಾಂಡ್‌ಗೆ ಆ ಹುಡುಗನನ್ನು ಕರೆದುಕೊಂಡು ಹೋಗಿ ಅದೇನು ಬೆಳಕೆಂದು ಪರೀಕ್ಷಿಸು ಎಂದು ಹೇಳಿದ.

ಬಟ್ರಾಂಡ್ ಮತ್ತು ಮಾಸ್ಕರೆಲ್ಲೋ ಪೋಲೀಸ್ ಕಾರಿನಲ್ಲಿ ಕುಳಿತು ಮಾಸ್ಕರೆಲ್ಲೋ ಬೆಳಕನ್ನು ಕಂಡ ಡೈನರ್ಸ್‌ಪೀಲ್ಡ್ ಕಡೆಗೆ ಹೊರಟರು.

ಬಟ್ರಾಂಡ್ ಡೈನರ್ಸ್‌ಫೀಲ್ಡ್ ಬಳಿ ಬಂದಾಗ ಇಡೀ ಬಯಲು ನಿರ್ಜನವಾಗಿತ್ತು. ಮಾಸ್ಕರೆಲ್ಲೋ ಹೇಳಿದ ಯಾವ ಬೆಳಕೂ ಅಲ್ಲಿರಲಿಲ್ಲ. ನಿರುಪಾಯನಾದ ಬಟ್ರಾಂಡ್ ಡೆಸ್ಕ್ ಆಫೀಸರ್‌ಗೆ ಅಲ್ಲಿಂದಲೇ ರೇಡಿಯೋದಲ್ಲಿ ಹೇಳಿದ "ಇಲ್ಲಿ ಯಾವುದೇ ಬೆಳಕಾಗಲೀ ಆಕಾಶ ಯಂತ್ರವಾಗಲೀ ಕಾಣುತ್ತಿಲ್ಲ. ಬಹುಶಃ ಈ ನಿರ್ಜನ ಪ್ರದೇಶದಲ್ಲಿ ಹೆದರಿದ ಹುಡುಗನ ಕಲ್ಪನೆ ಇರಬೇಕು ಇದೆಲ್ಲ" ಎಂದು. ಟೋಲ್ಯಾಂಡ್ "ಆ ಬಯಲನ್ನು ಒಮ್ಮೆ ವಿವರವಾಗಿ ಪರೀಕ್ಷಿಸಿ ಅನಂತರವೇ ಹಿಂದಿರುಗು" ಎಂದು ಹೇಳಿದ.

ಬಟ್ರಾಂಡ್ ಮತ್ತು ಮಾಸ್ಕರೆಲ್ಲೋ ಇಬ್ಬರೂ ಕಾರಿನಿಂದ ಇಳಿದು ಟಾರ್ಚಿನಿಂದ ಅಲ್ಲಿದ್ದ ಗಿಡಮರ ಪೊದೆಗಳನ್ನೆಲ್ಲಾ ಪರೀಕ್ಷಿಸುತ್ತಾ ಬಯಲಿನಲ್ಲಿ ಓಡಾಡಿದರು.

ಕೆಲವು ಹೊತ್ತಾದನಂತರ ಮಾಸ್ಕರೆಲ್ಲೋನ ಕಣ್ಣಿಗೆ ಕೊಂಚ ದೂರದ ಮರಗಳ ಮರೆಯಿಂದ ಕರಿಯದೊಂದು ಆಕೃತಿ ನೆಲದಿಂದ ಮೇಲೇರುತ್ತಾ ಇರುವುದು ಕಂಡಿತು. "ಅದಕ್ಕೆ ಗುಂಡುಹೊಡಿ" ಎಂದು ಅದರತ್ತ ಕೈತೋರುತ್ತಾ ಮಾಸ್ಕರೆಲ್ಲೋ ಕೂಗಿದ. ಬಟ್ರಾಂಡ್ ರಿವಾಲ್ವರ್ ತೆಗೆದವನು ಹಾಗೇ ತಡೆದ. ಅಷ್ಟು ಹೊತ್ತಿಗೆ ಆ ಆಕೃತಿಯ ದೀಪಗಳು ಕಣ್ಣುಕೋರೈಸುವಂತೆ ಹತ್ತಿಕೊಂಡವು. ಇಬ್ಬರಿಗೂ ಆ ಆಕಾಶಯಂತ್ರದ ಆಕಾರ ರೂಪಗಳು ದೀಪಗಳ ಪ್ರಭೆಯಲ್ಲಿ ಕಾಣದೆಹೋದವು. ದೀಪಗಳು ಮುಂದುವರಿಯುತ್ತಾ ವೇಗವಾಗಿ ಇವರ ಕಡೆಗೆ ಬಂತು. ಬಟ್ರಾಂಡ್ ಮಾಸ್ಕರೆಲ್ಲೋಗೆ ನೆಲದ ಮೇಲೆ ಬಿದ್ದುಕೊಳ್ಳುವಂತೆ ಹೇಳಿ ತಾನೂ ನೆಲದ ಮೇಲೆ ಬಿದ್ದ. ಆದರೆ ಬೆಳಕು ಸುಮಾರು ನೂರು ಅಡಿಯವರೆಗೆ ಬಂದು ಮತ್ತೆ ಹಿಂದಕ್ಕೆ ಹೋಯ್ತು. ಆ

'ಫ್ಲೈಯಿಂಗ್ ಸಾಸರ್'ನಿಂದ ಬರಿಯ ಬೆಳಕು ಹೊರತು ಇನ್ನೇನೂ ಬರುತ್ತಿರಲಿಲ್ಲ. ದೂರದ ಫಾರಂ ಒಂದರಿಂದ ನಾಯಿಗಳೂ ದನಕರುಗಳೂ ಗಾಬರಿಯಾಗಿ ಗಲಭೆ ಮಾಡತೊಡಗಿದವು.


ಹಿಂದಕ್ಕೆ ಹೋದ ದೀಪಗಳು ಮತ್ತೆ ಇವರ ಕಡೆಗೆ ವೇಗವಾಗಿ ಬರಲಾರಂಭಿಸಿತು. ಈ ಬಾರಿ ಬಟ್ರಾಂಡ್ ಮತ್ತು ಮಾಸ್ಕರೆಲ್ಲೋ ವೇಗವಾಗಿ ಪೆಟ್ರೋಲ್ ಕಾರಿನ ಕಡೆಗೆ ಓಡಿದರು. ಬಟ್ರಾಂಡ್ ಕಾರಿನಿಂದಲೇ ಬೇರೆಡೆ ಗಸ್ತು ತಿರುಗುತ್ತಿದ್ದ ಆಫೀಸರ್ ಡೇವಿಡ್‌ಹಂಟ್‌ಗೆ ಸಂಪರ್ಕಿಸಿ ನಡೆಯುತ್ತಿರುವುದನ್ನೆಲ್ಲ ವಿವರಿಸಿ ಈ ಕಡೆ ಬರುವಂತೆ ಕೇಳಿಕೊಂಡ. ಕೆಲವೇ ನಿಮಿಷಗಳಲ್ಲಿ ಡೇವಿಡ್ ಹಂಟ್ ಕಾರಿನಲ್ಲಿ ಬಂದ.

ಡೇವಿಡ್ ಹಂಟ್ ಬಂದಾಗ 'ಫ್ಲೈಯಿಂಗ್ ಸಾಸರ್' ಇನ್ನೂ ಬಯಲಿನಲ್ಲಿ ಪ್ರಕಾಶಬೀರುತ್ತಾ ಇತ್ತು. ಡೇವಿಡ್ ಹಂಟ್ ಸಹ 'ಯು ,ಎಫ್ ,ಒ'ವನ್ನು ನೋಡಿದ. ಅದರಿಂದ ಯಾವರೀತಿಯ ಯಂತ್ರದ ಸದ್ದೂ ಬರುತ್ತಿರಲಿಲ್ಲ. 'ಯು ,ಎಫ್ ,ಒ' ಮೆಲ್ಲಗೆ ಮೇಲೆ ಕೆಳಗೆ ತೂಗುವಂತೆ ದೀಪದ ಚಲನೆ ಕಂಡಿತು. ಅನಂತರ ಅದು ಅದೇ ಎತ್ತರದಲ್ಲಿ ದೂರಸರಿಯುತ್ತಾ ಕಣ್ಮರೆಯಾಯ್ತು.

ಜವಾಬ್ದಾರಿಯುತವಾದ ಇಬ್ಬರು ಪೋಲೀಸ್ ಆಫೀಸರುಗಳೂ ಒಬ್ಬ ಯುವಕನೂ ಸಾಕ್ಷಿಯಾಗಿದ್ದ ಈ ಘಟನೆ ಎಲ್ಲ ಪತ್ರಿಕೆಗಳಲ್ಲೂ ಕಾಣಿಸಿಕೊಂಡಿತು. ಬ್ಲೂಬುಕ್ ಯೋಜನೆಯ ಸಂಶೋಧಕರು ಈ ಘಟನೆಗೆ ಸಂಬಂಧಿಸಿದ ಎಲ್ಲರನ್ನೂ ಪ್ರಶ್ನಿಸಿ ತನಿಖೆ ಮಾಡಿ ಹೇಳಿಕೆ ತೆಗೆದುಕೊಂಡರು.

ಎರಡು ಶಾಖೆಗಳ ಇಬ್ಬರು ತನಿಖಾಧಿಕಾರಿಗಳು ಏಕಕಾಲದಲ್ಲಿ ಈ ಘಟನೆಯನ್ನು ತನಿಖೆ ಮಾಡಿದರು. ವಾಯುದಳ ಮತ್ತು ಫೌಲರ್. ವಾಯುದಳ ಇದನ್ನು ತನಿಖೆ ಮಾಡುವಾಗ ಈ 'ಫ್ಲೈಯಿಂಗ್ ಸಾಸರ್' ಎಂದು ಯಾವುದೋ ಆಕಾಶ ವಿಮಾನವನ್ನು ತಪ್ಪಾಗಿ ಇಬ್ಬರು ಪೋಲೀಸ್ ಅಧಿಕಾರಿಗಳೂ ತಿಳಿದರೆಂದು ವ್ಯಾಖ್ಯಾನಿಸಲು ಕೈಲಾದ ಪ್ರಯತ್ನ ಮಾಡಿತು. ಕೊನೆಗೆ ಈ ಬಗ್ಗೆ ಪೆಂಟಗಾನಿಂದ ಒಂದು ಹೇಳಿಕೆ ಹೊರಬಿತ್ತು. "ಅಮೆರಿಕಾ ವಾಯುರಕ್ಷಣಾ ದಳದವರು ಆಕಾಶದಲ್ಲಿ ನಡೆಸುತ್ತಿದ್ದ ವಿಮಾನ ಪರೀಕ್ಷಾರ್ಥ ಹಾರಾಟವಾದ "ಆಪರೇಷನ್ ಬಿಗ್ ಬ್ಲಾಸ್ಟ್"ನ ಯಾವುದೋ ಒಂದು ವಿಮಾನವನ್ನು ಈ ಅಧಿಕಾರಿಗಳು 'ಯು ,ಎಫ್ ,ಒ'ಎಂದು ತಪ್ಪಾಗಿ ವರದಿ ಮಾಡಿದ್ದಾರೆ" ಎಂದು. ವ್ಯಾಪಕ ಪ್ರಚಾರ ಪಡೆದಿದ್ದ ಈ ಘಟನೆಗೆ ಪೆಂಟಗಾನ್ ಈ ರೀತಿ ಪ್ರತಿಕ್ರಿಯೆ ನೀಡಿದ್ದರಿಂದ ಇದಕ್ಕೆ ಸಂಬಂಧಿಸಿದ ಪೋಲೀಸ್ ಅಧಿಕಾರಿಗಳಿಗೆ ತೀವ್ರವಾದ ಇರಿಸುಮುರಿಸು ಉಂಟಾಗಿ ಅಪಹಾಸ್ಯಕ್ಕೆ ಗುರಿಯಾದರು.

# ಎಡ್ಗರ್ ಮತ್ತು ಸೋರ್ಗ್ಸಸ್ ಅನುಭವಗಳು



ಹವ್ಯಾಸಿ ಛಾಯಾಚಿತ್ರಗ್ರಾಹಕರ ಮತ್ತು ದೂರ ದರ್ಶಕಗಳ ಮುಖಾಂತರ ತೆಗೆದ ಅನೇಕ ಅಸ್ಪಷ್ಟ ಮತ್ತು ಅರೆಸ್ಪಷ್ಟ ಛಾಯಾ ಚಿತ್ರಗಳನ್ನು ವಿಶ್ಲೇಷಕರೂ ವಿಜ್ಞಾನಿಗಳೂ ತೆಗೆದುಕೊಂಡು ಅವುಗಳಿಂದ ಸ್ಪಷ್ಟ ರೇಖಾಚಿತ್ರಗಳನ್ನು ರೂಪಿಸುತ್ತಿದ್ದ ಕ್ರಮಕ್ಕೆ ನಿದರ್ಶನವಾಗಿ ಇದನ್ನು ಕೊಡಲಾಗಿದೆ.

ಎಕ್ಸಟರ್ ಘಟನೆಯಲ್ಲಿ ಮೊದಲ ದರ್ಜೆಯ ಮುಖಾಮುಖಿಯಲ್ಲಿ ಉಂಟಾಗುವ ತೊಂದರೆಗಳನ್ನು ಗಮನಿಸಿದೆವು. ಮೂರು ಜನ ಈ ಅನುಭವ ಪಡೆದವರಿಗೆ 'ಯು ,ಎಫ್ ,ಒ' ಸತ್ಯಸ್ಯಸತ್ಯ. ಆದರೆ ಇತರರಿಗೆ ಅದು ಬೇರೇನೋ ಆಗಿರಬಹುದೆ! ಎಂಬ ಗುಮಾನಿ. ಹೀಗಾಗಿ ಈಘಟನೆಯನ್ನು ವರದಿ ಮಾಡಿದವರು ಇತರರ ಸಂಶಯ ಟೀಕೆ ಅಪಹಾಸ್ಯಗಳಿಗೆ ಗುರಿಯಾಗ ಬೇಕಾಯ್ತು.

ಇದೇರೀತಿಯ ಇನ್ನೊಂದು ಘಟನೆ ಎಂದರೆ ಕ್ಯಾಲಿಫೋರ್ನಿಯಾದ ವಿಕ್ಟರ್ ವಿಲ್ಲಾದ ಒಬ್ಬ ಯುವಕನ ಅನುಭವ. ಈ ಯುವಕನ ಹೆಸರು ಎಡ್ಗರ್ ಅಥವಾ ಎಡ್ಡಿ. ಈ ಘಟನೆಯ ಸಮಗ್ರ ತನಿಖೆ ಮಾಡಿದ ಬ್ಲೂಬುಕ್ ತನಿಖಾಧಿಕಾರಿ ಈ ಯುವಕನನ್ನು ಸಂಪೂರ್ಣ ನಂಬಲರ್ಹವಾದ ಪ್ರಾಮಾಣಿಕ ಹುಡುಗ ಎಂದು ವರ್ಣಿಸುತ್ತಾನೆ.

ಎಡ್ಗರ್ ರಾತ್ರಿ ಮನೆಯಲ್ಲಿ ತನ್ನ ಚಿಕ್ಕ ತಮ್ಮನೊಡನೆ ಇದ್ದ. ತಂದೆತಾಯಿಗಳು ರಾತ್ರಿ ಕಾಲೇಜಿಗೆ ಪಾಠ ಹೇಳಲು ಹೋಗಿದ್ದರಿಂದ ಆತನೇ ತಮ್ಮನನ್ನು ನೋಡಿಕೊಳ್ಳಬೇಕಾಗಿತ್ತು. ಎಡ್ಡಿ ಅವನ ಮಲಗುವ ಕೋಣೆಗೆ ಕಿಟಕಿ

ಯಿಂದ ಪ್ರಕಾಶಮಾನವಾದ ಬೆಳಕು ಬಂದೇಸಮ ಬಿಸಿಲಿನಂತೆ ಬೀಳತೊಡಗಿದ್ದರಿಂದ ಅತ್ತ ಗಮನ ಹರಿಸಬೇಕಾಯ್ತು. ಎಡ್ಡಿ ಕಾರು ಅಥವಾ ಇತರ ವಾಹನಗಳ ದೀಪಕ್ಕಿಂತ ಬಹುಪಾಲು ಪ್ರಕಾಶಮಾನವಾಗಿದ್ದ ಈ ಬೆಳಕನ್ನು ಗಮನಿಸಿ ಚಕಿತನಾದ. ಹಾಸಿಗೆಯಿಂದೆದ್ದು ಬಟ್ಟೆ ಹಾಕಿಕೊಂಡು ಹೊರಬಂದ. ಅಷ್ಟರೊಳಗೆ ಅವನ ನಾಯಿಗಳೆಲ್ಲಾ ಭಯಭ್ರಾಂತವಾಗಿ ಬೊಗಳುತ್ತಾ ಮನೆ ಸುತ್ತ ಓಡಾಡತೊಡಗಿದ್ದವು. ಅವುಗಳನ್ನು ಮನೆಯೊಳಕ್ಕೆ ಕರೆಯಲು ಆತ ಬಾಗಿಲು ತೆಗೆದು ಹೊರಬಂದ.

ಅವನು ಹೊರಬಂದಾಗ ಒಂದು ವಿಚಿತ್ರ ಆಕಾಶಯಂತ್ರ ಅವನ ಕಣ್ಣಿಗೆ ಬಿತ್ತು. ನೆಲದಿಂದ ಸುಮಾರು ೨೫ ಅಡಿ ಎತ್ತರದಲ್ಲಿ ಅವನ ಮನೆಗೆ ಆಗ್ನೇಯ ದಿಕ್ಕಿನಲ್ಲಿ ಅದು ಇತ್ತು. ಸುಮಾರು ೧೫೬ ಅಡಿ ಅಗಲಕ್ಕೂ ಮಧ್ಯಭಾಗದಲ್ಲಿ ಅದರ ಅರ್ಧದಷ್ಟು ದಪ್ಪಗೂ ಇದ್ದ ಈ ಯಂತ್ರ ಬೋರಲು ಹಾಕಿದ ಹ್ಯಾಟಿನಂತೆ ಅವನಿಗೆ ಕಂಡಿತು. ಅದರಿಂದಲೇ ಈ ಪ್ರಕಾಶಮಾನವಾದ ಪ್ರವಾಹ ದೀಪದ ಬೆಳಕು ಎಡ್ಡಿಯ ಮಲಗುವ ಕೋಣೆಗೆ ಬರುತ್ತಿದ್ದುದು. ಆ ಯಂತ್ರದಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನಿಂದ ಬರುವಂಥ ತಾರಸ್ವರದ ಗುಯ್ಗುಡುವ ಶಬ್ದ ಕೇಳಿಬರುತ್ತಿತ್ತು. ಚಾಟಿಯನ್ನು ಗಾಳಿಯಲ್ಲಿ ಬೀಸಿದರೆ ಬರುವಂಥ ಶಬ್ದ ಎಂದು ಎಡ್ಗರ್ ವಿವರಿಸುತ್ತಾನೆ.

ಆ ಸಾಸರು ನೇರವಾಗಿ ಎಡ್ಗರ್ ಕಡೆಗೇ ಬರತೊಡಗಿ ಸುಮಾರು ಹತ್ತು ಅಡಿಗಳ ಎತ್ತರದಲ್ಲಿ ಅವನ ತಲೆಯ ಮೇಲೇ ಹೋಯ್ತು. ಅನಂತರ ಅವನ ಮನೆಯ ಹಿಂಭಾಗದಲ್ಲಿ ಕಣ್ಣಿಗೆ ಕಾಣದಾಯ್ತು. ಆದರೆ ಅದು ಈತನ ಬಳಿ ಸಾರಿದಾಗ ಎಡ್ಗರ್‌ಗೆ ಯಾವ ಶಬ್ದವೂ ಕೇಳಲಿಲ್ಲ. ಎಡ್ಗರ್ ಆ ಯಂತ್ರ ಮನೆಯ ಮೇಲೆ ಧಾವಿಸಿ ಹಿಂದೆ ಹೋದನಂತರ ಮನೆಯೊಳಕ್ಕೆ ನಾಯಿಗಳನ್ನೂ ಗಾಬರಿಯಾದ ಚಿಕ್ಕ ತಮ್ಮನನ್ನೂ ಸಮಾಧಾನಪಡಿಸಲು ಹೋದ. ಮತ್ತೆ ಆತ ಮನೆಯ ಹೊರಕ್ಕೆ ಬಂದಾಗ ಆ 'ಯು ,ಎಫ್ ,ಒ' ಮೊದಲು ಎಲ್ಲಿತ್ತೋ ಅಲ್ಲೇ ಇರುವುದು ಕಂಡಿತು.

ಈತ ಹೊರಬಂದೊಡನೆ ಆ ಯಂತ್ರ ಮೊದಲಿನಂತೆ ಈತನ ಕಡೆಗೆ ವೇಗವಾಗಿ ಬರತೊಡಗಿತು. ಈ ಸಾರಿ ಅದು ತನಗೆ ಇನ್ನೂ ಹತ್ತಿರದಲ್ಲಿ ಬರಬಹುದೆಂದೆನ್ನಿಸಿತು. ಹೆದರಿದ ಎಡ್ಗರ್ ಬೇಗಬೇಗ ಮನೆಯೊಳಗೆ ಬಂದು ಮನೆಯಲ್ಲಿದ್ದ ಬಂದೂಕನ್ನು ಕೈಗೆತ್ತಿಕೊಂಡ. ಬಂದೂಕಿನೊಡನೆ ಎಡ್ಗರ್ ಹೊರಬಂದಾಗ ಆ 'ಯು ,ಎಫ್ ,ಒ' ಮನೆಯನ್ನು ದಾಟಿ ಮುಂದೆ ಹೋಗಿದ್ದರಿಂದ ಎಡ್ಗರ್‌ಗೆ ಬಂದೂಕು ಹಾರಿಸುವ ಪ್ರಮೇಯ ಬರಲಿಲ್ಲ. ಮಲಗುವ ಮನೆಯ ಕಿಟಕಿಯಿಂದ ನೋಡುತ್ತಿದ್ದ ಅವನ ತಮ್ಮನಿಗೂ 'ಯು ,ಎಫ್ ,ಒ' ಆಗ ಕಾಣಿಸಿತು.

ಸುಮಾರು ಐದು ನಿಮಿಷಗಳ ತರುವಾಯ ಎಡ್ಡಿ ಮತ್ತೆ ಮನೆಯಾಚೆ ಹೋದ. ಮತ್ತೆ ಆತನಿಗೆ 'ಯು ,ಎಫ್ ,ಒ' ಕಾಣಿಸಿತು. ಮತ್ತೆ ಎಡ್ಗರ್ ಕಡೆಗೆ ಬರತೊಡಗಿತ್ತು. ಆದರೆ ಈ ಸಾರಿ ತುಂಬಾ ವೇಗವಾಗಿ ಚಲಿಸುತ್ತಿತ್ತು. ಎಡ್ಗರ್ ಮನೆಯೊಳಕ್ಕೆ ಓಡಿದ. ಈ ರೀತಿ ಮೂರು ಸಾರಿ ಆ ಅಪರಿಚಿತ ಯಂತ್ರ ಮನೆಯ ಮೇಲೆ ಅಡ್ಡಾಡಿದ ಅನಂತರ ಅಸಾಧ್ಯ ವೇಗದಲ್ಲಿ ಮಿಂಚಿನಂತೆ ಆಕಾಶದಲ್ಲಿ ಮಾಯವಾಯ್ತು.

'ಯು ,ಎಫ್ ,ಒ' ಕೊನೆಯ ಬಾರಿಗೆ ಮನೆಯ ಮೇಲೆ ಹೋದಾಗ ಅದರಿಂದ ಉಂಟಾದ ಕಂಪನಗಳಿಂದ ಮನೆ ಸಹ ಮೆಲ್ಲಗೆ ಅದುರಿತು. ಅದು ಮನೆಯ ಮೇಲೆ ಹಾರಿದಾಗ ಆ 'ಯು ,ಎಫ್ ,ಒ' ಯಿಂದ ವಿದ್ಯುತ್ ಕಿಡಿಗಳು ಹಾರುವಾಗ ಉಂಟಾಗುವ ಶಬ್ದದಂಥ ಶಬ್ದ ಬರುತ್ತಿತ್ತು. ಇದರ ಜೊತೆಗೆ ಮನೆಯೊಳಗೆ ಇದ್ದ ರೇಡಿಯೋ ಸಹ ಗರಗರಗರ ಶಬ್ದ ಮಾಡುತ್ತಿತ್ತು. ಬ್ಲೂಬುಕ್ ತನಿಖೆ ನಡೆಸಿದಾಗ ವಿಕ್ಟರ್‌ವಿಲ್ಲಾದ ಎಲ್ಲ ಮನೆಗಳ ರೇಡಿಯೋಗಳೂ ಆ ಸಮಯದಲ್ಲಿ ತುಂಬ ಗಲಾಟೆ ಮಾಡಿದವೆಂದು ತಿಳಿದುಬಂತು.

ಈ ಘಟನೆಯಲ್ಲಿ ವರದಿ ಮಾಡಿರುವಂತೆ 'ಯು ,ಎಫ್ ,ಒ' ಗಳ ಸಾನ್ನಿಧ್ಯವನ್ನು ಮನುಷ್ಯರಿಗಿಂತ ಬೇಗ ಪ್ರಾಣಿಗಳು ಕಂಡುಕೊಂಡಿರುವುದು ತಿಳಿದುಬರುತ್ತದೆ. ಎಡ್ಡಿಯ ನಾಯಿಗಳು ಗಲಾಟೆ ಮಾಡಿದಂತೆಯೇ ನಯಾಗರಾ ಮುನಿಸಿಪಲ್ ವಿಮಾನ ನಿಲ್ದಾಣದಲ್ಲಿ ಒಮ್ಮೆ ಕಟ್ಟಿಹಾಕಿದ್ದ ಗೂಳಿಯೊಂದು ದೆವ್ವ ಹಿಡಿದಂತೆ ಕುಣಿದಾಡಿ ಕಟ್ಟಿದ್ದ ಗೂಟವನ್ನು ಕಿತ್ತುಕೊಂಡು ಓಡಿಹೋಯ್ತು. ಕೊಟ್ಟಿಗೆಯಲ್ಲಿ ಕಟ್ಟಿದ್ದ ದನಗಳೆಲ್ಲಾ ಓಡಿದವು. ಇದಕ್ಕೆ ಕಾರಣವೇನೆಂದು ಅವುಗಳ ಮಾಲೀಕರು ಪರಿಶೀಲಿಸುತ್ತಿರಬೇಕಾದರೆ ಹಠಾತ್ತಾಗಿ ಅವರಿಗೆ ಆಕಾಶದಲ್ಲಿ ನಿಶ್ಚಲವಾಗಿ ನಿಂತಿದ್ದ 'ಯು ,ಎಫ್ ,ಒ' ಕಾಣಿಸಿತು. ಲಂಡನ್ನಿನ ಟ್ರಫಾಲ್ಗರ್ ಚೌಕದಲ್ಲಿ ಸದಾ ಇರುವ ಪಾರಿವಾಳಗಳು ಒಮ್ಮೆ ಯಾವ ಕಾರಣವೂ ಇಲ್ಲದೆ ದಿಕ್ಕಾಪಾಲಾಗಿ ಚಲ್ಲಾಪಿಲ್ಲಿಯಾಗಿ ಹಾರಿಹೋದವು. ಆಗಲೂ ಚಕಿತರಾದ ಪ್ರವಾಸಿಗಳು ಕಾರಣವೇನೆಂದು ನೋಡುತ್ತಿರಬೇಕಾದರೆ ಆಕಾಶದಲ್ಲಿ ನಿಶ್ಚಲವಾಗಿ ನಿಂತಿದ್ದ 'ಯು ,ಎಫ್ ,ಒ' ಕಾಣಿಸಿತು.

ಹಾಗಿದ್ದರೆ 'ಫ್ಲೈಯಿಂಗ್‌ಸಾಸರ್'ಗಳಿಂದ ಹೊಮ್ಮುವ ಬೇರಾವುದೋ ಸೂಕ್ಷ್ಮ ಕಂಪನಗಳನ್ನು ಗ್ರಹಿಸುವ ಸಾಮರ್ಥ್ಯ ಪ್ರಾಣಿಗಳಿಗಿದೆಯೆ?

'ಫ್ಲೈಯಿಂಗ್ ಸಾಸರ್'ಗಳ ಪರಿಣಾಮದ ಇನ್ನೊಂದು ಅಂಶ ಏನೆಂದರೆ 'ಫ್ಲೈಯಿಂಗ್ ಸಾಸರ್' ವಿದ್ಯುದುಪಕರಣಗಳನ್ನು ನಿಷ್ಕ್ರಿಯಗೊಳಿಸುವುದು. ಇದಕ್ಕೆ ಬಹಳ ಒಳ್ಳೆಯ ಉದಾಹರಣೆ ಎಂದರೆ ವಾಯುದಳದ ಅಧಿಕಾರಿ ಸೋರ್ವಸ್ ಎನ್ನುವವರ ಅನುಭವ.

೧೯೫೭ ನವೆಂಬರ್ ೨೩ ರಂದು ಸೋರ್ವಸ್ ತಮ್ಮ ಕಾರಿನಲ್ಲಿ

ನೆವಾಡದಿಂದ ಲಾಸ್‌ವೇಗಾಸ್ ಕಡೆಗೆ ಕಾರ್ಯನಿಮಿತ್ತ ಹೋಗುತ್ತಿದ್ದರು. ಸುಮಾರು ೮೦ ಮೈಲಿ ವೇಗದಲ್ಲಿ ಹೆದ್ದಾರಿಯಲ್ಲಿ ಹೋಗುತ್ತಿರಬೇಕಾದರೆ ಅವರ ಕಾರು ಇದ್ದಕ್ಕಿದ್ದಂತೆ ನಿಂತುಹೋಯ್ತು. ಮತ್ತೆ ಸ್ಟಾರ್ಟ್ ಮಾಡಲು ಎಷ್ಟು ಪ್ರಯತ್ನಿಸಿದರೂ ಕಾರು ಸ್ಟಾರ್ಟಾಗಲೇ ಇಲ್ಲ. ಬ್ಯಾಟರಿಯ ಸಂಪರ್ಕ ಕಡಿದುಹೋಗಿರಬಹುದೆಂದು ಊಹಿಸಿ ಅದನ್ನು ಸರಿಮಾಡಲು ಅವರು ಕಾರಿನಿಂದ ಇಳಿದರು.

ಅವರು ಕಾರಿನಿಂದ ಇಳಿದಕೂಡಲೇ ಟ್ರಾನ್ಸ್‌ಫಾರ್ಮರ್‌ನಿಂದ ಬರುವಂಥ ಸಣ್ಣ ತಾರಸ್ವರದ ಸಿಳ್ಳಿನಂಥ ಸದ್ದು ಕೇಳಿತು. ಸೋರ್ವಸ್ ಆಶ್ಚರ್ಯದಿಂದ ಎಲ್ಲಿಂದ ಸಿಳ್ಳು ಬರುತ್ತಿದೆ ಎಂದು ನೋಡಿದಾಗ ರಸ್ತೆಯಿಂದ ಸುಮಾರು ಮುನ್ನೂರು ಅಡಿಗಳ ದೂರದಲ್ಲಿ ನಾಲ್ಕು ತಟ್ಟೆಯಾಕಾರದ ವಿಚಿತ್ರ ಯಂತ್ರಗಳು ನಿಂತಿದ್ದವು. ಅವುಗಳ ಮೇಲೆ ಅರೆ ಪಾರದರ್ಶಕ ಗೋಲಗಳಿದ್ದು ಬೆಳಗಿನ ಹೊತ್ತಿನಲ್ಲೂ ಅವು ಜಾಜ್ವಲ್ಯಮಾನವಾಗಿ ಕಾಣುತ್ತಿದ್ದವು. ವಾಯುದಳದಲ್ಲಿ ಅಧಿಕಾರಿಯಾಗಿದ್ದ ಸೋರ್ವಸ್ ಈವರೆಗೂ ಅಂಥ ಯಂತ್ರಗಳನ್ನು ನೋಡಿಯೇ ಇರಲಿಲ್ಲ.

ಇದೇನೆಂದು ಸರಿಯಾಗಿ ನೋಡಲು ಸೋರ್ವಸ್ ಅವುಗಳ ಬಳಿಗೆ ನಡೆದುಹೋದರು. ಆ ವಿಚಿತ್ರ ಯಂತ್ರಗಳು ಸೋರ್ವಸ್‌ನಿಂದ ಕೇವಲ ೫೦ ಅಡಿ ದೂರ ಇದ್ದುವು. ಆ ನಾಲ್ಕೂ ಯಂತ್ರಗಳೂ ಒಂದರ ತದ್ರೂಪ ಇನ್ನೊಂದು ಎನ್ನುವಂತಿದ್ದವು. ಇಡೀ ಯಂತ್ರವೇ ದೇದೀಪ್ಯಮಾನವಾಗಿ ಬೆಳಗುತ್ತಿದ್ದವು. ಅವು ಭೂಮಿಯ ಮೇಲೆ ನಿಲ್ಲುವುದಕ್ಕೆ ಗೋಲಾಕಾರವಾದ ಮೂರು ಲ್ಯಾಂಡಿಂಗ್ ಗೇರ್‌ಗಳಿದ್ದವು. ಒಂದೊಂದು ಲ್ಯಾಂಡಿಂಗ್ ಗೇರ್ ಸಹ ಅರ್ಧ ಗೋಲಾಕಾರವಾಗಿ ಎರಡು ಅಡಿಗಳಷ್ಟು ದಪ್ಪ ಇದ್ದವು. 'ಫ್ಲೈಯಿಂಗ್ ಸಾಸರ್' ಗಳು ನೆಲಮಟ್ಟದಿಂದ ೧೫ ಅಡಿಗಳಷ್ಟು ಎತ್ತರವಾಗಿದ್ದವು. ಪ್ರತಿ ಯಂತ್ರದ ಸುತ್ತ ಒಂದು ಉಂಗುರದಂಥ ವಸ್ತು ಮೆಲ್ಲಗೆ ಸುತ್ತುತ್ತಾ ಇತ್ತು. ಸೋರ್ವಸ್ ೫೦ ಅಡಿಗಳಷ್ಟು ಹತ್ತಿರದಿಂದ ಈ ಯಂತ್ರಗಳ ವಿವರಗಳನ್ನು ಪರೀಕ್ಷಿಸುತ್ತಿರಬೇಕಾದರೆ ಆವರೆಗೂ ಒಂದೇ ರೀತಿ ಇದ್ದ ಅವುಗಳ ಸಿಳ್ಳಿನ ದನಿ ಇದ್ದಕ್ಕಿದ್ದಂತೆ ನಿಧಾನವಾಗಿ ಜೋರಾಗತೊಡಗಿತು.

ಸೋರ್ವಸ್ ನೋಡುತ್ತಿದ್ದಂತೆಯೇ ಆ ನಾಲ್ಕೂ ಯಂತ್ರಗಳೂ ನಿಧಾನವಾಗಿ ನೆಲ ಬಿಟ್ಟು ಮೇಲೇರಲಾರಂಭಿಸಿದವು. ಅವು ನೆಲ ಬಿಡುತ್ತಿದ್ದಂತೆಯೇ ಅವುಗಳ ಗೋಲಾಕಾರದ ಲ್ಯಾಂಡಿಂಗ್ ಗೇರ್ ಒಳಗೆಹೋಯ್ತು. ಆ ನಾಲ್ಕು ಯಂತ್ರಗಳೂ ಕೂಡ ನೆಲದಿಂದ ೫೦ ಅಡಿಗಳಷ್ಟು ಮೇಲೇರಿ ಸೋರ್ವಸ್‌ನ ತಲೆಯ ಮೇಲೇ ಚಲಿಸತೊಡಗಿದವು. ಸುಮಾರು ಗಂಟೆಗೆ ಹತ್ತು ಮೈಲಿಯಷ್ಟು ನಿಧಾನವಾಗಿ ಅವು ಗಾಳಿಯಲ್ಲಿ ತೇಲುತ್ತಾ

ದೂರದ ಗುಡ್ಡ ಒಂದರ ಹಿಂದೆ ಕಣ್ಮರೆಯಾದವು.

ಮೊದಲು ಆ ಯಂತ್ರಗಳನ್ನು ಕಂಡುದಕ್ಕೂ, ಅವು ಕೊನೆಗೆ ಕಣ್ಮರೆಯಾದುದಕ್ಕೂ ನಡುವೆ ಸೋರ್ರ್ವಸ್‌ಗೆ ಅವುಗಳನ್ನು ವೀಕ್ಷಣೆ ಮಾಡಲು ಅರ್ಧಗಂಟೆ ಕಾಲಾವಕಾಶ ಸಿಕ್ಕಿತ್ತು. ಸೋರ್ರ್ವಸ್ ಅವುಗಳು ಹಾರಿ ಕಣ್ಮರೆಯಾದನಂತರ ಅವುಗಳು ನಿಂತಿದ್ದ ಜಾಗಕ್ಕೆ ಹೋಗಿ ಯಾವುದೇ ರೀತಿಯ ಗುರುತುಗಳಿವೆಯೆ? ಎಂದು ಪರೀಕ್ಷಿಸಿದರು. ಆ ಯಂತ್ರಗಳ ಲ್ಯಾಂಡಿಂಗ್ ಗೇರ್ ನೆಲದ ಮೇಲೆ ನಿಂತಿದ್ದ ಜಾಗದಲ್ಲಿ ಸಣ್ಣಗೆ ಹಳ್ಳ ಬಿದ್ದಿದ್ದುದನ್ನು ಬಿಟ್ಟರೆ ಇನ್ಯಾವುದೇ ರೀತಿಯ ಗುರುತುಗಳು ಕಾಣಬರಲಿಲ್ಲ.

ಈ ಎಲ್ಲ ಪರೀಕ್ಷೆ ಮುಗಿಸಿ ತಾನು ಕಂಡುದು ನಿಜವೋ ಸುಳ್ಳೋ ಎಂದು ಸಂದೇಹಿಸುತ್ತ ಸೋರ್ರ್ವಸ್ ಬಂದು ಕಾರ್ ಸ್ಟಾರ್ಟ್ ಮಾಡಿದರು. ಯಾವ ತೊಂದರೆಯೂ ಇಲ್ಲದಂತೆ ಕಾರು ಮೊದಲಿನಂತೆ ಸ್ಟಾರ್ಟಾಯಿತು. ಅನಂತರ ಆ ಕಾರು ಸೋರ್ರ್ವಸ್ ಬಳಿ ಇರುವವರೆಗೆ ಯಾವತ್ತೂ ಆ ರೀತಿ ತೊಂದರೆಕೊಡಲಿಲ್ಲ.

ಸೋರ್ರ್ವಸ್ ಯಾವುದೇ ಮತ್ತುಬರಿಸುವ ಔಷಧವನ್ನಾಗಲೀ ಮದ್ಯಪಾನವನ್ನಾಗಲೀ ಮಾಡಿರಲಿಲ್ಲ. ಅವರ ಆರೋಗ್ಯವೂ ಚೆನ್ನಾಗಿಯೇ ಇತ್ತು. ಅಲ್ಲಿಂದ ಮುಂದೆ ಸೋರ್ರ್ಸ್ ನೆವಾಡದ ಇಂಡಿಯನ್ ಸ್ಪ್ರಿಂಗ್ ವಿಮಾನ ನೆಲೆಗೆ ಹೋಗಿ ಅಲ್ಲಿನ ಕಮಾಂಡರಿಗೆ ನಡೆದುದನ್ನು ವರದಿ ಮಾಡಿದರು. ಸೋರ್ರ್ವಸ್ ಅನುಭವಕ್ಕೆ ಬೇರಾರೂ ಸಾಕ್ಷಿಗಳಿರಲಿಲ್ಲ. ಆದರೆ ಸೋರ್ರ್ಸ್ ಕಂಡುದನ್ನು ಯಾವ ರೀತಿಯಿಂದಲೂ ವಿಶ್ಲೇಷಿಸಲಾರದೆ ಬ್ಲೂಬುಕ್ ಅದನ್ನು ನೆವಾಡ ವಿಶ್ವ ವಿದ್ಯಾಲಯದ ಮನಃಶಾಸ್ತ್ರಜ್ಞರಿಗೆ ಕಳಿಸಿ ವಿಶ್ಲೇಷಿಸುವಂತೆ ಕೇಳಿಕೊಂಡಿತು.

ಸೋರ್ರ್ವಸ್ ವಾಯುದಳದಲ್ಲಿ ಉನ್ನತಾಧಿಕಾರಿಯಾದ್ದರಿಂದ ಇದನ್ನು ಸುಳ್ಳೆಂದಾಗಲೀ, ಭ್ರಾಂತಿ ಎಂದಾಗಲೀ ಅಥವಾ ತಪ್ಪು ವೀಕ್ಷಣೆ ಎಂದಾಗಲೀ ತಿರಸ್ಕರಿಸುವುದು ವಾಯುದಳಕ್ಕೂ ಬ್ಲೂಬುಕ್ ಸಂಶೋಧಕರಿಗೂ ತುಂಬಾ ಕಷ್ಟವಾಗಿತ್ತು. ಅದಕ್ಕಾಗೇ ಇದನ್ನು ನೆವಾಡ ವಿಶ್ವವಿದ್ಯಾಲಯದ ಮನಃಶಾಸ್ತ್ರಜ್ಞರ ತಲೆಗೆ ಕಟ್ಟಿದರು.

ಆ ಮನಃಶಾಸ್ತ್ರಜ್ಞ 'ಈ ವರದಿಯು ಬೇಕೆಂದೇ ಸುಳ್ಳು ಸುಳ್ಳೇ ಹೇಳಿರುವ ಕಟ್ಟುಕತೆಯ ಎಲ್ಲ ಲಕ್ಷಣಗಳನ್ನು ಹೊಂದಿದ್ದರೂ ಈ ಸಂಗತಿಯನ್ನು ವರದಿ ಮಾಡಿರುವಾತ ವಾಯುದಳದ ಉನ್ನತಾಧಿಕಾರಿಯಾದ್ದರಿಂದ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆದರೆ ವಾಯುದಳದ ಉನ್ನತಾಧಿಕಾರ ವರ್ಗದಲ್ಲೂ ಸುಳ್ಳರು ಇರಬಾರದೆಂದೇನೂ ಇಲ್ಲ. ಆದ್ದರಿಂದ ಈ ವರದಿಯನ್ನು ಮಾಡಿರುವಾತನ ಸಾಮಾಜಿಕ ಪರಿಸರ ನೆರೆಹೊರೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಈತ ಎಂಥ ಮನುಷ್ಯನೆಂದು ದೃಢಪಡಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತೇನೆ.

ಎರಡನೆಯದಾಗಿ ಇದೊಂದು ರಸ್ತೆಮೋಡಿಯ ಉದಾಹರಣೆ ಇರಬಹುದು. ದೂರ ಪ್ರಯಾಣದ ದಣಿವಿಗೆ ಒಳಗಾದ ಚಾಲಕರು ಈ ರೀತಿ ಇದ್ದಕ್ಕಿದ್ದಂತೆ ರಸ್ತೆಗೆ ಅಡ್ಡಲಾಗಿ ಇಲ್ಲದೆ ಇರುವ ಮನೆಗಳನ್ನೋ ವಾಹನಗಳನ್ನೋ ನಿಜವಾಗಿ ಕಂಡೆವೆಂದು ಭ್ರಮಿಸುವ ಸಾಧ್ಯತೆ ಇದೆ. ಈತ ಸುಳ್ಳನಲ್ಲದೆ ಪ್ರಾಮಾಣಿಕ ಮನುಷ್ಯನೇ ಆಗಿದ್ದಲ್ಲಿ ದೂರಪ್ರಯಾಣದ ದಣಿವಿನಿಂದ ರಸ್ತೆಮೋಡಿಗೆ ಒಳಗಾಗಿರಬಹುದೆಂದು ನನ್ನ ಅಭಿಪ್ರಾಯ '(Road hypnosis)' ಎಂದು ವಿಶ್ಲೇಷಿಸಿ ಆ ಮನಃಶಾಸ್ತ್ರಜ್ಞ ಕೈ ತೊಳೆದುಕೊಂಡ.

ಸೋರ್‍ವಸ್ ವರದಿಯಾದ್ಯಂತ ಆತನಿಗೆ ರಸ್ತೆ ಮೋಡಿ ಸಂಭವಿಸಿರಲೇ ಇಲ್ಲವೆನ್ನುವುದಕ್ಕೆ ಜ್ವಲಂತ ಸಾಕ್ಷಿಗಳಿದ್ದವು. ಮೊದಲನೆಯದಾಗಿ ರಸ್ತೆ ಮೋಡಿಯು ಚಾಲಕರಿಗೆ ಸಂಭವಿಸಿದರೆ ಅದು ಕೆಲವೇ ಕ್ಷಣಗಳಷ್ಟೇ ಹೊರತು ಅರ್ಧಗಂಟೆ ಅದಕ್ಕೆ ಒಳಗಾಗಿರುವುದಿಲ್ಲ. ಜೊತೆಗೆ ಸೋರ್‍ವಸ್ ಕಾರಿನಿಂದ ಇಳಿದು ಸಾವಧಾನವಾಗಿ ಆ 'ಫ್ಲೈಯಿಂಗ್ ಸಾಸರ್'ಗಳ ಬಳಿಗೆ ಹೋಗಿ ಅವನ್ನು ಸಾದ್ಯಂತವಾಗಿ ಕೇವಲ ೫೦ ಅಡಿಗಳ ದೂರದಿಂದ ಪರೀಕ್ಷಿಸಿದ್ದರು. ಅನಂತರ ತಮ್ಮ ವಿಮಾನ ನೆಲೆಗೆ ಹೋಗಿ ಅಲ್ಲಿನ ಕಮಾಂಡಿಂಗ್ ಅಧಿಕಾರಿಗೆ ತಮಗೆ ಸಂಭವಿಸಿದುದರ ಕೂಲಂಕಷ ವರದಿ ಮಾಡಿದ್ದರು. ಇವುಗಳೆಲ್ಲಾ ಈ ಮನೋವಿಜ್ಞಾನಿಯ ತೀರ್ಮಾನಗಳನ್ನು ಅಲ್ಲಗಳೆಯಬಹುದಾದ ದಾಖಲೆಗಳಾಗಿದ್ದವು.

ಈ ವರದಿಯನ್ನು ಇಲ್ಲಿ ಉಲ್ಲೇಖಿಸಿದ್ದಕ್ಕೆ ಮುಖ್ಯ ಕಾರಣ ಎಂದರೆ 'ಫ್ಲೈಯಿಂಗ್ ಸಾಸರ್'ಗಳು ವಿದ್ಯುತ್ ಜಾಲದ ಮೇಲೆ ಬೀರುವ ಪರಿಣಾಮಕ್ಕಾಗಿ. ಕಾರುಗಳು, ಟ್ರಾನ್ಸ್‌ಫಾರ್ಮರ್‌ಗಳು ಇತರ ವಿದ್ಯುದುಪಕರಣಗಳು 'ಫ್ಲೈಯಿಂಗ್ ಸಾಸರ್' ಗಳಿಗೆ ಸಮೀಪಗತವಾದೊಡನೆ ನಿಷ್ಕ್ರಿಯಗೊಂಡಿರುವ ಅನೇಕ ಘಟನೆಗಳು ಬ್ಲೂಬುಕ್ ಫೈಲುಗಳಲ್ಲಿ ಪದೇ ಪದೇ ತಲೆದೋರಿವೆ. ಇದರಲ್ಲಿ ಸೋರ್‍ವಸ್ ಘಟನೆ ಒಂದು. ಕ್ಯಾಪ್ಟನ್ ಮೆಂಟಲ್‌ನ ದುರಂತಕ್ಕೆ ಇದೂ ಕಾರಣವಿರಬಹುದಾದ ಸಾಧ್ಯತೆ ಇದೆಯಲ್ಲವೆ?

# ವಾಸವ ಅವಾಸವಗಳ ಅಂಚಿನಿಂದ..



ಗಾಳಿಯಲ್ಲಿ ತೂರಿದಂತೆ ಸಾಗುತ್ತಿರುವ 'ಫ್ಲೈಯಿಂಗ್ ಸಾಸರ್' ಒಂದರ ಅಸ್ಪಷ್ಟ ಚಿತ್ರ. 'ಫ್ಲೈಯಿಂಗ್ ಸಾಸರ್'ಗಳ ಚಿತ್ರದಲ್ಲಿ ಬಹುಪಾಲು ಈ ರೀತಿಯ ಅಸ್ಪಷ್ಟತೆ ಇರುವುದಕ್ಕೆ ಮುಖ್ಯ ಕಾರಣ ಅವು ಹಠಾತ್ತಾಗಿ ಕಾಣಿಸಿಕೊಂಡು ಮಿಂಚಿ ಮಾಯವಾಗುವುದು. ಅವುಗಳ ದರ್ಶನದಿಂದ ನೋಡಿದವರಿಗೆ ಉಂಟಾಗುವ ದಿಗ್ಭ್ರಾಂತಿ ಗಡಿಬಿಡಿಗಳಲ್ಲಿ ಎಷ್ಟೋ ಜನ ತಮ್ಮ ಬಳಿಯಿದ್ದ ಕ್ಯಾಮರಾದಿಂದ ಚಿತ್ರ ತೆಗೆಯ ಬೇಕೆಂದೂ ಹೊಳೆಯದೆ ನಿಟ್ಟಿಸುತ್ತ ನಿಂತಿದ್ದಾರೆ.

ಎಡ್ಗರ್ ಮತ್ತು ಸೋರ್ನ್ಸ್‌ರ ಅನುಭವಗಳಲ್ಲಿ ನಾವು ಗಮನಿಸಬಹುದಾದ ಅಂಶವೆಂದರೆ 'ಫ್ಲೈಯಿಂಗ್ ಸಾಸರ್' ಗಳು ತಮ್ಮ ಸಾನ್ನಿಧ್ಯದಿಂದ ಉಂಟುಮಾಡಿರುವ ಭೌತಿಕ ಪರಿಣಾಮಗಳು. ಅವುಗಳು ನೆಲದ ಮೇಲೆ ಇಳಿದಾಗ ಅವುಗಳ ಲ್ಯಾಂಡಿಂಗ್ ಗೇರ್ ನೆಲದಮೇಲೆ ಮಾಡಿರುವ ಗುರುತುಗಳು. ಅವುಗಳ ಪ್ರಭಾವದಿಂದ ರೇಡಿಯೋಗಳ ಪ್ರಸಾರದಲ್ಲಿ ಉಂಟಾಗಿರುವ ತೊಂದರೆಗಳು. ಅವುಗಳ ಸಾನ್ನಿಧ್ಯದಲ್ಲಿ ಕಾರು ಮುಂತಾದ ವಾಹನಗಳ ವಿದ್ಯುದುಪಕರಣಗಳು ನಿಷ್ಕ್ರಿಯಗೊಂಡಿರುವುದು. ಅವುಗಳಿಂದ ಹೊಮ್ಮಿರುವ ಸಿಳ್ಳಿನಂಥ ಸದ್ದು ಕೇಳಿರುವುದು ಮುಂತಾದವುಗಳನ್ನು ಭೌತಿಕಪರಿಣಾಮಗಳೆಂದು ಕರೆಯಬಹುದು. ಈ ಬಗೆಯ ಭೌತಿಕ ಪರಿಣಾಮಗಳನ್ನು ಡಾ॥ ಹೈನೆಕ್ ದ್ವಿತೀಯ ದರ್ಜೆಯ ಮುಖಾಮುಖಿ ಎಂದು ಕರೆಯುತ್ತಾರೆ.

ಇನ್ನೊಂದು ಈ ಬಗೆಯ ದ್ವಿತೀಯ ದರ್ಜೆಯ ಮುಖಾಮುಖಿಗೆ

ಒಳ್ಳೆಯ ಪ್ರಾತಿನಿಧಿಕ ಉದಾಹರಣೆ ಎಂದರೆ ಟೆಕ್ಸಾಸ್ ನೆದರ್‌ಲ್ಯಾಂಡಿನ ಲುಡ್‌ವಿಗ್‌ರವರ ಅನುಭವ. ರಾತ್ರಿ ಶೌಚ ಕೊಠಡಿಗೆ ತೆರಳಲೆಂದು ಲುಡ್‌ವಿಗ್‌ರವರು ಎದ್ದು ದೀಪ ಹಾಕಿದಾಗ ಹತ್ತಿಕೊಂಡ ದೀಪ ಇದ್ದಕ್ಕಿದ್ದಂತೆ ಆರಿಹೋಯ್ತು. ಲುಡ್‌ವಿಗ್ ಕಿಟಕಿಯಿಂದ ಹೊರಗೆ ನೋಡಿದಾಗ ಬೀದಿಯ ದೀಪಗಳೂ ಅಕ್ಕಪಕ್ಕದ ದೀಪಗಳೂ ಆರಿಹೋಗಿದ್ದು ಕಂಡು ಸಾರ್ವತ್ರಿಕವಾಗಿ ವಿದ್ಯುತ್ ಸಂಪರ್ಕ ಕಡಿದುಹೋಗಿದೆ ಎಂದು ತೀರ್ಮಾನಿಸಿದರು.

ಅಷ್ಟರಲ್ಲಿ ಕಿಟಕಿಯಿಂದ ಅವರಿಗೆ ಪ್ರಕಾಶಮಾನವಾದ ಬೆಳಕು ಕಂಡಿತು. ವಿದ್ಯುತ್ ಸಂಪರ್ಕ ಕಡಿದು ಹೋಗಿರಬೇಕಾದರೆ ಇದೆಲ್ಲಿಂದ ಬೆಳಕು ಬರುತ್ತಿದೆ ಎಂದು ಕುತೂಹಲದಿಂದ ಲುಡ್‌ವಿಗ್ ಹೊರಗೆ ಇಣುಕಿದಾಗ ತಮ್ಮ ಮನೆಯ ಮುಂದಿನ ಹೂದೋಟ , ಅಕ್ಕಪಕ್ಕದ ಮನೆಗಳು , ರಸ್ತೆ , ಸಾಲ್ಮರಗಳು ಎಲ್ಲದರ ಮೇಲೂ ಪ್ರಕಾಶಮಾನವಾದ ತುಡಿಯುವ ಬೆಳಕು ಬಿದ್ದಿರುವುದು ಅವರಿಗೆ ಕಂಡಿತು. ಕೊಂಚ ಹೊತ್ತಿನ ಅನಂತರ ಅವರಿಗೆ ಆಕಾಶದಲ್ಲಿ ಸುಮಾರು ೫೦೦ ಅಡಿಗಳ ಎತ್ತರದಲ್ಲಿ ಒಂದು ವಿಚಿತ್ರವಾದ ತಟ್ಟೆಯಂಥ ಆಕಾಶಯಂತ್ರ ಕಂಡಿತು. ದೇದೀಪ್ಯಮಾನವಾದ ಈ ಯಂತ್ರದಿಂದಲೇ ಲಯಬದ್ಧವಾಗಿ ಮಿನುಗುತ್ತಿದ್ದ ಆ ಬೆಳಕು ಬರುತ್ತಿರುವುದೆಂದು ಲುಡ್‌ವಿಗ್ ತಿಳಿದರು. ಆ ಯಂತ್ರ ನಿಧಾನವಾಗಿ ಅಲೆಗಳ ಮೇಲೆ ತೇಲಾಡುವ ದೋಣಿಯಂತೆ ತುಯ್ಯುತ್ತಾ ಮುಂದುವರಿಯುತ್ತಿತ್ತು. ಅದಕ್ಕೆ ಕಣ್ಣು ಕೋರೈಸುವಂಥ ಆರು ದೀಪಗಳಿದ್ದುದನ್ನು ಲುಡ್‌ವಿಗ್ ಎಣಿಸಿದರು.

ಆ ಯಂತ್ರದಿಂದ ತಾರಸ್ವರದ ಸಿಳ್ಳಿನ ದನಿ ಬರುತ್ತಿತ್ತೆಂದು ಲುಡ್‌ವಿಗ್ ಮತ್ತು ಅವರ ಹೆಂಡತಿ ಹೇಳಿದ್ದಾರೆ. ಆ ಯಂತ್ರ ಜೆಫರ್‌ಸನ್ ವಿಮಾನನಿಲ್ದಾಣದ ಕಡೆಗೆ ಹೋಗುತ್ತಾ ಇತ್ತು. ಅದೇ ಸಮಯಕ್ಕೆ ಸರಿಯಾಗಿ ಜೆಫರ್‌ಸನ್ ವಿಮಾನ ನಿಲ್ದಾಣದಿಂದ ಒಂದು ಸಾರಿಗೆ ವಿಮಾನ ಹೊರಟು 'ಫ್ಲೈಯಿಂಗ್ ಸಾಸರ್' ಕಡೆಗೇ . ಬರುತ್ತಿತ್ತು. ವಿಮಾನವು ನಿಲ್ದಾಣದಿಂದ ಮೇಲೇರಿದ ಕೂಡಲೆ 'ಫ್ಲೈಯಿಂಗ್ ಸಾಸರ್'ದ ಆರು ದೀಪಗಳೂ ಆರಿಹೋದವು. ವಿಮಾನ ತನ್ನ ದಾರಿ ಹಿಡಿದು ಹಾರಿಹೋದನಂತರ ಮತ್ತೆ 'ಫ್ಲೈಯಿಂಗ್ ಸಾಸರ್' ದಿಂದ ದೀಪದ ಬೆಳಕು ಬರಲಾರಂಭಿಸಿತು.

ಅಕ್ಕಪಕ್ಕದವರ ಅಪಹಾಸ್ಯಕ್ಕೆ ಈಡಾಗಬಹುದೆಂಬ ಭಯದಿಂದ ಲುಡ್‌ವಿಗ್ ಈ ಸಮಾಚಾರವನ್ನು ಯಾರಲ್ಲಿಯೂ ಹೇಳಲಿಲ್ಲ. ಆದರೆ ವಿದ್ಯುತ್ ಇಲಾಖೆಯವರನ್ನು ಕಂಡು ಹಿಂದಿನ ದಿನದ ರಾತ್ರಿ ವಿದ್ಯುತ್ ಸಂಪರ್ಕ ಕಡಿದು ಹೋದುದಕ್ಕೆ ಕಾರಣಗಳೇನೆಂದು ಮಾತ್ರ ಕೇಳಿಕೊಂಡರು. ಲುಡ್‌ವಿಗ್ ವಾಸಿಸುತ್ತಿದ್ದ ಬಡಾವಣೆಯ ಹಲವಾರು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದುದೇ ಕಾರಣವೆಂದೂ , ಅವು ಸುಟ್ಟುದಕ್ಕೆ ಏನು ಕಾರಣವೆಂದು ತಮಗೆ

ಗೊತ್ತಿಲ್ಲವೆಂದೂ ವಿದ್ಯುತ್ ಇಲಾಖೆಯಿಂದ ಉತ್ತರ ಬಂತು. ಟ್ರಾನ್ಸ್ ಫಾರ್ಮರ್‌ಗಳು 'ಫ್ಲೈಯಿಂಗ್ ಸಾಸರ್' ಹಾರಿದ ದಾರಿಯುದ್ದಕ್ಕೂ ಅದಕ್ಕನುಗುಣವಾಗಿ ಸುಟ್ಟು ಹೋಗಿದ್ದು ಕಂಡುಬಂತು.

'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳಿಂದ ಸಾಧಾರಣವಾಗಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ನಿಷ್ಕ್ರಿಯಗೊಂಡಿರುವುದು ಕಂಡುಬರುತ್ತದೆ. ಸಿಡಿಲು ಗುಡುಗಿನ ಮಳೆಯ ಸಂದರ್ಭಗಳಲ್ಲಿ ವಿದ್ಯುತ್ ಮತ್ತು ಫೋನ್ ಸಂಪರ್ಕಗಳಿಗೆ ಯಾವ ಯಾವ ತೊಂದರೆಗಳು ಸಂಭವಿಸುತ್ತವೋ ಅಂಥದೇ ತೊಂದರೆಗಳು ಸಂಭವಿಸಿವೆ. "ದಿ ಗ್ರೇಟ್ ಬ್ಲಾಕ್ ಔಟ್" ಎಂದು ಅಮೆರಿಕದಲ್ಲಿ ಹೆಸರುವಾಸಿಯಾಗಿರುವ ೧೯೬೫ರ ವಿದ್ಯುತ್ ಕುಸಿತ ಅಮೆರಿಕದ ಅರ್ಧಭಾಗವನ್ನೇ ಕತ್ತಲಾವರಿಸುವಂತೆ ಮಾಡಿತ್ತು. ಇದಕ್ಕೂ ಆ ರಾತ್ರಿ ಸಂಭವಿಸಿದ 'ಫ್ಲೈಯಿಂಗ್ ಸಾಸರ್' ಚಟುವಟಿಕೆಯೇ ಕಾರಣ ಎಂದು ತಂತ್ರಜ್ಞರು ನಂಬಿದ್ದಾರೆ. ಈ ಮಟ್ಟದ ದೇಶವ್ಯಾಪಿ ವಿದ್ಯುತ್ ಸಂಪರ್ಕ ಕಡಿತಕ್ಕೆ ಅವರಿಗೆ ಬೇರಾವುದೇ ಸಮರ್ಪಕ ಕಾರಣವೂ ತೋರಿಲ್ಲ.

ಈ ಬಗೆಯ ದ್ವಿತೀಯ ದರ್ಜೆಯ ಮುಖಾಮುಖಿಯ ಪರಿಣಾಮಗಳು ಅಸಂಖ್ಯಾತವಾಗಿವೆ. ಆ ಪರಿಣಾಮಗಳೆಲ್ಲಾ ಮೊದಲೇ ತಿಳಿಸಿರುವಂತೆ ಒಂದೇ ಬಗೆಯವಾಗಿರುವುದರಿಂದ ಅವುಗಳ ಸವಿವರ ನಿರೂಪಣೆ ಅನವಶ್ಯಕ. ದ್ವಿತೀಯ ದರ್ಜೆಯ ಘಟನೆ ಅನುಭವಗಳಂತೂ ಜಗತ್ತಿನ ಎಲ್ಲೆಡೆಗಳಿಂದ ಸತತವಾಗಿ ವರದಿಯಾಗಿವೆ ಮತ್ತು ವರದಿಯಾಗುತ್ತಿವೆ. ಸೋವಿಯತ್ ದೇಶ , ಯೂರೋಪು , ಅಮೆರಿಕಾ , ಆಸ್ಟ್ರೇಲಿಯ ಮುಂತಾದ ಜಗತ್ತಿನ ಯಾವ ಖಂಡವೂ ಇದಕ್ಕೆ ಹೊರತಾಗಿಲ್ಲ. ಹಿಂದುಳಿದ ರಾಷ್ಟ್ರಗಳಲ್ಲಿ ಅನೇಕ ಕಾರಣಗಳಿಂದ ಈ ಘಟನೆಗಳ ಸಮರ್ಪಕ ದಾಖಲಾತಿ ಇಲ್ಲ.

ದ್ವಿತೀಯ ದರ್ಜೆಯ ಮುಖಾಮುಖಿಗಿಂತಲೂ ಭಯ , ಕಾತರ , ಕುತೂಹಲ , ಸಂದೇಹಗಳನ್ನು ಹುಟ್ಟಿಸುವುದು ತೃತೀಯ ದರ್ಜೆಯ ಮುಖಾಮುಖಿ. ನಂಬಲಸಾಧ್ಯವಾದ ಈ ಘಟನೆಗಳನ್ನು ಯಾವ ದೃಷ್ಟಿಯಿಂದ ನಾವು ನೋಡಬೇಕೆನ್ನುವುದು ನನಗೇ ತಿಳಿಯದಾಗಿದೆ! ಅಲ್ಲಗಳೆಯಲಸಾಧ್ಯವಾದಂಥ ಸಾಕ್ಷ್ಯಾಧಾರಗಳೊಂದಿಗೆ ನಿರೂಪಿತವಾಗಿರುವ ಈ ಘಟನೆಗಳು ನಮ್ಮ ವಿಚಾರಶೀಲತೆಗೂ , ವಿವೇಕಕ್ಕೂ ಸವಾಲುಗಳಾಗಿವೆ.

ತೃತೀಯ ದರ್ಜೆಯ ಮುಖಾಮುಖಿ ಪ್ರಧಾನವಾಗಿ 'ಫ್ಲೈಯಿಂಗ್ ಸಾಸರ್' ಒಳಗಿನಿಂದ ಮನುಷ್ಯರು ವ್ಯಕ್ತಿಗಳು ಅಥವಾ ಜೀವಿಗಳು ಹೊರಬಂದು ಸಂಧಿಸಿರುವುದನ್ನು ಹೇಳುತ್ತದೆ. ಹಲವಾರು ಘಟನೆಗಳಲ್ಲಿ ಯಂತ್ರಮಾನವರನ್ನೂ ಕಂಡವರಿದ್ದಾರೆ.

ಈ ಹಾರುವ ಸಾಸರುಗಳೊಳಗಿನಿಂದ ಜೀವಿಗಳು ಬಂದರು

ಎನ್ನುವುದನ್ನು ಒಪ್ಪಿಕೊಳ್ಳಲು ನಾವು ಏಕೆ ಹಿಂಜರಿಯುತ್ತೇವೆ? ಬಹುಶಃ ಈ ಹಾರುವ ಸಾಸರುಗಳು ನಮ್ಮಂಥ ಜೀವಿಗಳಿಂದಲೇ ನಿರ್ಮಿತವಾದುದೆಂದು ನಾವು ಒಪ್ಪಿಕೊಂಡರೆ ಈ ಅಮೂರ್ತ, ಅವ್ಯಕ್ತ ಜೀವ ಸಂಕುಲದ ಭಯ ನಮ್ಮನ್ನಾವರಿಸಬಹುದು. ಈ ಸಂಸ್ಕೃತಿಯೊಂದಿಗೆ ಸ್ಪರ್ಧಿಸಬೇಕಾದ, ಸವಾಲುಗಳನ್ನು ಎದುರಿಸಬೇಕಾದ, ಯುದ್ಧವನ್ನೂ ಮಾಡಬೇಕಾದ ಭಯವೆ? ಅಥವಾ ನಮ್ಮ ಇಂದಿನ ವಿಜ್ಞಾನದ ತಿಳುವಳಿಕೆಗಳು, ನಮ್ಮ ಆಳವಾದ ನಂಬಿಕೆಗಳಲ್ಲಿ ಒಂದಾದ ಧರ್ಮ, ದೇವರು, ಆತ್ಮ ಮುಂತಾದ ಕಲ್ಪನೆಗಳು ತಲೆಕೆಳಗಾಗುವ ಭೀತಿಯೆ?

ತೃತೀಯ ದರ್ಜೆಯ ಮುಖಾಮುಖಿಯಲ್ಲಿ ಈ ಅನುಭವಕ್ಕೆ ಒಳಗಾದವರೆಲ್ಲರೂ ಅವಾಕ್ಕಾದ, ಭಯಚಕಿತರಾದ, ಮೂಕವಿಸ್ಮಿತರಾದ ಮನಃಸ್ಥಿತಿಯವರು. ಬಹುಪಾಲು ಜನ ತಮ್ಮ ಹೆಸರಿನ ಯಾವುದೇ ಬಗೆಯ ಪ್ರಚಾರವನ್ನೂ ನಿರಾಕರಿಸಿರುವವರು ಈ ಅನುಭವ ಅನೇಕ ನಿಮಿಷಗಳವರೆಗೆ ಆಗಿರುವುದರಿಂದ ಆ ಘಟನೆಯ ಪ್ರತಿ ವಿವರಗಳನ್ನೂ ಕೊಡಲು ಬಹುಪಾಲು ಸಾಕ್ಷಿಗಳು ಸಮರ್ಥರಿದ್ದವರು. ಹೀಗಾಗಿ ಇವನ್ನು ಭ್ರಾಂತಿ ಭ್ರಮೆಗಳೆಂದು ತಳ್ಳಿಹಾಕುವುದು ಸುಲಭಸಾಧ್ಯವಾಗಿಲ್ಲ.

'ಫ್ಲೈಯಿಂಗ್ ಸಾಸರ್' ಘಟನೆಗಳಲ್ಲೆಲ್ಲ ಅತ್ಯಂತ ಹೆಚ್ಚು ಕುತೂಹಲ ಸಂದೇಹಗಳನ್ನು ಹುಟ್ಟಿಸುವ ತೃತೀಯ ಬಗೆಯ ಮುಖಾಮುಖಿಗಳನ್ನು ಪರಿಶೀಲಿಸುವ ಮೊದಲು ಪಪುವಾ ನ್ಯೂಗಿನಿಯಾದ ದಟ್ಟ ಕಾಡುಗಳ ಕಾಡು ಮನುಷ್ಯರ ನಡುವೆ ನಡೆದ ಆಶ್ಚರ್ಯಕಾರಕ ಘಟನೆ ನೋಡೋಣ. ಆ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ಈ ವಿಚಿತ್ರ ಘಟನೆ ನಡೆದಾಗ ಅದೃಷ್ಟವಶಾತ್ ಅಲ್ಲೊಬ್ಬ ಯೂರೋಪಿಯನ್ ಪಾದ್ರಿ ಇಲ್ಲದಿದ್ದರೆ ಯಾವ ರೀತಿಯಿಂದಲೂ ನಾಗರಿಕ ಜಗತ್ತಿಗೆ ಇದು ವರದಿಯಾಗುವ ಸಂಭವವೇ ಇರಲಿಲ್ಲ.

# ಫಾದರ್‌ಗಿಲ್‌ರತ್ತ ಕೈಬೀಸಿದರು!

ಫಾದರ್ ಗಿಲ್‌ರತ್ತ ಕೈ ಬೀಸಿದ ಆಕಾಶ ನೌಕೆ ಬಹು ದೊಡ್ಡದಿತ್ತೆಂದೂ ಅವರ ಕಣ್ಣಿಗೆ ಕಾಣುವಂತೆಯೇ ಹಲವಾರು ಸಣ್ಣ 'ಫ್ಲೈಯಿಂಗ್ ಸಾಸರ್'ಗಳು ಹಾರಿಬಂದು ಅದರೊಳಗೆ ಸೇರಿಕೊಂಡವೆಂದೂ ಅವರ ವಿವರಣೆಗಳಲ್ಲಿ ವರದಿಯಾಗಿದೆ. ಮೇಲಿನ ಚಿತ್ರ ನ್ಯೂಗಿನಿಯಾದಲ್ಲಿ ತೆಗೆದಿದ್ದಲ್ಲ. ಜಾರ್ಜ್ ಆ್ಯಡಮ್ ಸ್ಕಿ ಮೌಂಟ್ ಪಾಲೋಮಾರ್‌ನಲ್ಲಿ ಆಕಸ್ಮಿಕವಾಗಿ ತೆಗೆದಿದ್ದು. ಇದರಲ್ಲಿ 'ಫ್ಲೈಯಿಂಗ್ ಸಾಸರ್'ಗಳ ಹಿನ್ನೆಲೆಯಲ್ಲಿ ದೂರದಲ್ಲಿ ಅಸ್ಪಷ್ಟವಾಗಿ ಸಿಗಾರ್ ಆಕೃತಿಯ ಮಾತೃ ನೌಕೆಯನ್ನು ಕಾಣಬಹುದಾಗಿದೆ.

ಪಪುವಾ ನ್ಯೂಗಿನಿಯಾದ ದಟ್ಟ ಕಾಡುಗಳ ಕಾಡುಜನರ ಮಧ್ಯೆ ಸಂಭವಿಸಿದ್ದು ಈ ಘಟನೆ. ಕೇವಲ ಕಾಡುಜನರೇ ಇಲ್ಲದ್ದಿದ್ದರೆ ಈ ಘಟನೆ ಹೊರಜಗತ್ತಿಗೆ ತಿಳಿಯುತ್ತಲೇ ಇರಲಿಲ್ಲ. ಆದರೆ ಅದೃಷ್ಟವಶಾತ್ ಅಲ್ಲೊಬ್ಬರು ಕ್ರಿಶ್ಚಿಯನ್ ಪಾದ್ರಿ ಇದ್ದರು , ಈ ಜನಗಳಿಗೆ ಪರಲೋಕದ ವಿಷಯಗಳನ್ನು ಬೋಧಿಸಲಿಕ್ಕೆ. ಆತನ ಹೆಸರು ಫಾದರ್ ಗಿಲ್. ಆಂಗ್ಲಿಕನ್ ಸಂಪ್ರದಾಯದ ಚರ್ಚಿಗೆ ಸೇರಿದವರು. ತಮ್ಮ ಸಂಪ್ರದಾಯಬದ್ಧ ಆಲೋಚನೆಗಳ ಪ್ರಕಾರ ಇವರು ಬಾಹ್ಯಾಕಾಶದ ಜನರನ್ನೂ ಬೇರೆ ಲೋಕದ ಜೀವಿಗಳನ್ನೂ ನಂಬುವುದು ಅದನ್ನು ಜನಗಳಗೆ ಉಪದೇಶ ಮಾಡುವುದು ನಿಷಿದ್ಧ. ಹಾಗಾಗಿ ಫಾದರ್ ಗಿಲ್ ತಮ್ಮ ಅನುಭವಗಳನ್ನು ಇತರರಿಗೆ ಹೇಳಿದ ಕೂಡಲೇ ಆಂಗ್ಲಿಕನ್ ಸಂಪ್ರದಾಯಸ್ಥ ವರ್ಗವೆಲ್ಲ ಧರ್ಮಬೋಧನೆ ಮಾಡಬೇಕಾದ ಈ ಪಾದ್ರಿ ಇಂಥ ಧರ್ಮವಿರೋಧಿ ನಂಬಿಕೆಗಳನ್ನು ಇಟ್ಟುಕೊಂಡು ತನ್ನ ಕರ್ತವ್ಯ ನಿರ್ವಹಿಸುವುದು

ಹೇಗೆ? ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಆಂಗ್ಲಿಕನ್ ಸಂಪ್ರದಾಯಸ್ಥರು ಈ ಪಾದ್ರಿಯನ್ನು ಕೆಲಸದಿಂದ ತೆದು ಓಡಿಸಬೇಕೆಂದು ಗಲಭೆ ಎಬ್ಬಿಸಿದ್ದರಿಂದಲೇ ಜಗತ್ತಿನ ಗಮನ ನ್ಯೂಗಿನಿಯಾದ ಈ ವಿಚಿತ್ರ ಘಟನೆಯ ಬಗ್ಗೆ ಹರಿದಿದ್ದು.

ಈ ಪಾದ್ರಿಯನ್ನೂ ಈ ಘಟನೆಯಲ್ಲಿ ಭಾಗಿಗಳಾದ ಅನೇಕ ಕಾಡು ಜನರನ್ನೂ ಪ್ರಾಜೆಕ್ಟ್ ಬ್ಲೂಬುಕ್ ಸಲಹೆಗಾರನಾದ ಡಾ. ಅಲೆನ್ ಜೆ ಹೈನೆಕ್‌ರವರೇ ಭೇಟಿಮಾಡಿ ಸಂದರ್ಶನ ನಡೆಸಿದರು. ಇದರಿಂದ ಈ ಘಟನೆಯ ವಿವರಗಳು ಹೊರಜಗತ್ತಿಗೆ ಲಭ್ಯವಾಯ್ತು.

ಫಾದರ್‌ಗಿಲ್ ತಮ್ಮ ಅನುಭವ ಕುರಿತು ತಮ್ಮ ಸಹೋದ್ಯೋಗಿಗಳಲ್ಲೊಬ್ಬರಾದ ರೆವರೆಂಡ್ ಡೇವಿಡ್‌ರವರಿಗೆ ಬರೆದ ಕಾಗದವೇ ಅವರ ವ್ಯಕ್ತಿತ್ವ , ನಂಬುಗೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ಮತ್ತು ಕೋಲಾಹಲಗಳನ್ನೆಬ್ಬಿಸಿದ್ದು. ಆದ್ದರಿಂದ ಅವರ ವಿವಾದಗ್ರಸ್ತ ಕಾಗದದಿಂದಲೇ ನ್ಯೂಗಿನಿಯಾದ ಘಟನೆಯನ್ನು ಆರಂಭಿಸಬಹುದು.

"ಪ್ರಿಯ ಡೇವಿಡ್ ,

ಜೀವ ಮತ್ತು ವಿಶ್ವ ಎರಡೂ ರಹಸ್ಯಮಯವಾದುದಲ್ಲವೆ? ನಿನ್ನೆ ನಾನೊಂದು ಕಾಗದ ಬರೆದಿದ್ದೆ. ಅದರಲ್ಲಿ ನಾನು ನಿನಗೆ 'ಫ್ಲೈಯಿಂಗ್ ಸಾಸರ್'ಗಳ ಬಗ್ಗೆಯ ನನ್ನ ಸಂಪೂರ್ಣ ಅಪನಂಬಿಕೆಯನ್ನು ವ್ಯಕ್ತಪಡಿಸಿದ್ದೆ. ನಮ್ಮ ಆಂಗ್ಲಿಕನ್ ಥಿಯಾಲಜಿ ಪ್ರಕಾರವೂ ಇಂಥವು ಸ್ವೀಕಾರಾರ್ಹವೆಲ್ಲೆಂದು ನೀನು ಬಲ್ಲೆ. ಇದಾದ ಕೇವಲ ಇಪ್ಪತ್ನಾಲ್ಕು ಗಂಟೆಗಳೊಳಗೆ ನಾನು ನನ್ನ ಅಭಿಪ್ರಾಯವನ್ನು ಸಂಪೂರ್ಣ ಬದಲಿಸಿಕೊಳ್ಳಬೇಕಾದ ಪ್ರಸಂಗ ಬಂದಿದೆ. ಏಕೆಂದರೆ ನಿನ್ನೆ ಸಂಜೆ ನಾವಿಲ್ಲಿ 'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳನ್ನು ವೀಕ್ಷಿಸಿದ ಅನಂತರ ಅವು ಯಾವುವೋ ಒಂದು ಬಗೆಯ ಜೀವಿಗಳಿಂದ ನಡೆಸಲ್ಪಡುತ್ತಿವೆ ಎಂದು ನಿಸ್ಸಂಶಯವಾಗಿ ಅನ್ನಿಸತೊಡಗಿದೆ. ನಾನಂತೂ ಈ ಅನುಭವದಿಂದ ನಿಬ್ಬೆರಗಾಗಿದ್ದೇನೆ. ಜೀವನಾನುಭವಗಳನ್ನು ಅಲಕ್ಷಿಸಿ ಧರ್ಮಶ್ರದ್ಧೆಯನ್ನು . ಉಳಿಸಿಕೊಳ್ಳುವುದು ದೊಡ್ಡ ಅಗ್ನಿಪರೀಕ್ಷೆಯೇ ಸರಿ. ನಮ್ಮ ಧರ್ಮ ಮತ್ತು ಶ್ರದ್ಧೆಗಳಿಗೆ ಜೀರ್ಣಿಸಿಕೊಳ್ಳಲಾಗದಷ್ಟು ಈ ಬ್ರಹ್ಮಾಂಡ ಜಟಿಲವಾಗಿರುವಂತೆ ತೋರುತ್ತಿದೆ......

ಹೀಗೆಂದು ಫಾದರ್‌ಗಿಲ್ ತಮ್ಮ ಅನುಭವ ಆರಂಭಿಸುತ್ತಾರೆ. ಫಾದರ್‌ಗಿಲ್ ತಮ್ಮ ಊಟ ಮುಗಿಸಿ ಹೊರಬಂದಾಗ ಮೊದಲು ಅವರು ಈ 'ಫ್ಲೈಯಿಂಗ್ ಸಾಸರ್'ಅನ್ನು ನೋಡುತ್ತಾರೆ. ಶುಕ್ರ ಗ್ರಹದ ಪಕ್ಕದಲ್ಲೇ ಶುಕ್ರ ಗ್ರಹಕ್ಕಿಂತ ಪ್ರಕಾಶಮಾನವಾದ ಒಂದುವಸ್ತು ಅವರಿಗೆ ಕಾಣುತ್ತದೆ. ತಕ್ಷಣ

ಗಿಲ್‌ರವರು ನಿಮಿಷ ನಿಮಿಷಕ್ಕೂ ಗಡಿಯಾರ ನೋಡಿಕೊಳ್ಳುತ್ತಾ ನಡೆದ ಘಟನಾವಳಿಗಳನ್ನು ದಾಖಲು ಮಾಡಿಕೊಂಡಿದ್ದಾರೆ.

೬ಗಂಟೆ ೪೫ನಿಮಿಷ: ಕೆಲವು ಚಿಕ್ಕ ಮೋಡಗಳು ಆಕಾಶದಲ್ಲಿವೆ. ಬಾಗಿಲಿನಿಂದ ಶುಕ್ರ ಗ್ರಹದ ಪಕ್ಕದಲ್ಲೇ ಪ್ರಕಾಶಮಾನವಾದ ವಸ್ತು ಕಂಡೆ.

೬ಗಂಟೆ ೫೦ ನಿಮಿಷ: ಡೆಗೂರಾ ಮತ್ತು ಮನವೇ ಊರುಗಳ ಮೇಲೂ ಶುಭ್ರ ಆಕಾಶ. ಸ್ಟೀಫನ್ ಮತ್ತು ಎರಿಕ್‌ರನ್ನು ಕರೆಯಲು ಹೇಳಿಕಳಿಸಿದೆ.

೬ ಗಂಟೆ ೫೨ ನಿಮಿಷ: ಸ್ಟೀಫನ್ ಬಂದರು. ಪ್ರಕಾಶಮಾನವಾದ ವಸ್ತುವನ್ನು ನೋಡಿ ಅದು ಗ್ರಹ ಅಲ್ಲವೆಂದೂ ಅದು ಮೇಲೆ ಕೆಳಗೆ ಚಲಿಸುತ್ತಿದೆಯೆಂದೂ ದೃಢಪಡಿಸಿದರು.

೬ ಗಂಟೆ ೫೫ ನಿಮಿಷ: ಎರಿಕ್‌ನನ್ನು ಬೇರೆ ಜನಗಳನ್ನು ಕರೆಯಲು ಕಳಿಸಿದೆ. ಮೇಲಿದ್ದ ಒಂದು ಪ್ರಕಾಶಮಾನವಾದ ವಸ್ತು ಕೆಳಕೆಳಗೆ ಚಲಿಸುತ್ತಿದೆ. ಮಾನವರು? ಈಗ ಮೂರು ಮಾನವರು. ಓಡಾಡುತ್ತಿದ್ದಾರೆ! ಬಗ್ಗುತ್ತಾ ನಿಲ್ಲುತ್ತಾ ಸಾಸರಿನ ಡೆಕ್ಕಿನ ಮೇಲೆ ಏನನ್ನೋ ಮಾಡುತ್ತಿದ್ದಾರೆ! ಒಳಗೆ ಹೋದರು.

೭ ಗಂಟೆ: ಮತ್ತೆ ಮಾನವಾಕೃತಿಗಳು? ಈ ಬಾರಿ ಇಬ್ಬರು!

೭ ಗಂಟೆ ೦೪ ನಿಮಿಷ: ಮತ್ತೆ ಒಳಗೆ ಹೋದರು.

೭ ಗಂಟೆ ೧೦ ನಿಮಿಷ: ಮೋಡಗಳು ಆಕಾಶದಲ್ಲಿ ಕವಿಯುತ್ತಿವೆ. ಅವು ಎದುರಿನ ಪರ್ವತಗಳ ಮಟ್ಟದಲ್ಲಿ ಇರುವುದರಿಂದ ಅದು ೨೦೦೦ ಅಡಿ ಎತ್ತರದಲ್ಲಿವೆ ಎಂದು ಧಾರಾಳವಾಗಿ ಹೇಳಬಹುದು. ಆ ಹೊಳೆಯುವ 'ಫ್ಲೈಯಿಂಗ್ ಸಾಸರ್' ಅದಕ್ಕಿಂತ ಕೆಳಗೆ ಬಂದಿದೆ! ಮತ್ತೆ ಮಾನವಾಕೃತಿಗಳು. ಒಂದು! ಎರಡು! ನಾಲ್ಕು! ಒಬ್ಬ ಒಳಗೆ ಹೋಗಿ ಒಂದು ನೀಲಿ ಪ್ರಕಾಶ ಬೀರುವ ಸ್ಪಾಟ್ ಲೈಟನ್ನು ತಂದಿಟ್ಟ. ಎಲ್ಲ ಮನುಷ್ಯರೂ ಒಳನಡೆದರು. ದೀಪ ಮಾತ್ರ ಹೊರಗೇ ಇದೆ.

೭ ಗಂಟೆ ೧೨ ನಿಮಿಷ: ಮತ್ತೆ ಮೂರು ಜನ ಹೊರ ಬಂದರು. ಮತ್ತೊಬ್ಬನ ಕೈಯಲ್ಲಿ ಇನ್ನೊಂದು ಸ್ಪಾಟ್ ಲೈಟ್ ಇದೆ.

೭ ಗಂಟೆ ೨೦ ನಿಮಿಷ: ತೀರ ಕೆಳಗೆ ಮೋಡಗಳು ನುಗ್ಗತೊಡಗಿದೆ. 'ಫ್ಲೈಯಿಂಗ್ ಸಾಸರ್' ಕಾಣದಂತೆ ಮುಸುಗಿಕೊಳ್ಳತೊಡಗಿದೆ.

೮ ಗಂಟೆ ೨೮ ನಿಮಿಷ: ಮತ್ತೆ ಆಕಾಶ ಮೋಡರಹಿತವಾಗತೊಡಗಿದೆ. ಮೊದಲು ನೋಡಿದ ದೊಡ್ಡ ಗಾತ್ರದ 'ಫ್ಲೈಯಿಂಗ್ ಸಾಸರ್' ಜೊತೆಗೆ ದೂರದಲ್ಲಿ ಇನ್ನೆರಡು ಚಿಕ್ಕ 'ಫ್ಲೈಯಿಂಗ್ ಸಾಸರ್' ಗಳಿವೆ. ಅವು ಮೋಡಗಳ ಕೆಳಗೆ ಇಳಿಯುವಾಗ ಅವುಗಳ ಪ್ರಕಾಶಮಾನ ಪ್ರಭೆ

ಮೋಡಗಳ ಮೇಲೆ ಬಿದ್ದು ಪ್ರತಿಫಲನಗೊಳ್ಳುತ್ತಿದೆ.....

ಫಾದರ್‌ಗಿಲ್ ಹೀಗೇ ಘಟನಾವಳಿಗಳನ್ನು ಕಾಲಾನುಕ್ರಮದಲ್ಲಿ ದಾಖಲು ಮಾಡುತ್ತಾ ಹೋಗುತ್ತಾರೆ. ಫಾದರ್‌ಗಿಲ್‌ಗೆ ಮೊದಲು ಶುಕ್ರ ಗ್ರಹದ ಪಕ್ಕದಲ್ಲೇ ಕಂಡ ಈ ಪ್ರಕಾಶಮಾನವಾದ 'ಫ್ಲೈಯಿಂಗ್ ಸಾಸರ್' ಮೋಡಕವಿಯತೊಡಗಿದ ಕೂಡಲೇ ಶುಕ್ರ ಗ್ರಹ ಕಣ್ಮರೆಯಾದರೂ 'ಫ್ಲೈಯಿಂಗ್ ಸಾಸರ್' ಮಾತ್ರ ಮೋಡದ ಮಟ್ಟಕ್ಕಿಂತ ಕೆಳಗಿಳಿದುದರಿಂದ ದೊಡ್ಡದಾಗಿ ಕಾಣುತ್ತಲೇ ಇತ್ತು. ಅದು ಸುಮಾರು ೨೦೦೦ ಅಡಿಗಳಿಗಿಂತ ಕೆಳಗಿಳಿಯಿತು. ಆ 'ಫ್ಲೈಯಿಂಗ್ ಸಾಸರ್' ತುಂಬಾ ಅಗಾಧ ಗಾತ್ರವಿತ್ತು. ಅದರ ಎತ್ತರವೇ ಸುಮಾರು ೩೦೦ ಅಡಿಗಳಷ್ಟಿತ್ತು. ಫಾದರ್‌ಗಿಲ್ ಇದನ್ನು ಮಾತೃನೌಕೆ ಇರಬಹುದೆಂದು ಊಹಿಸುತ್ತಾರೆ. ಏಕೆಂದರೆ ಅದು ಆ ರೀತಿ ಆಕಾಶದಲ್ಲಿ ನಿಶ್ಚಲವಾಗಿ ನಿಂತಿರಬೇಕಾದರೆ ಕೆಲವು ಚಿಕ್ಕ ಗಾತ್ರದ ಸಾಸರುಗಳು ಬಂದು ಬಂದು ಹೋಗುತ್ತಿದ್ದುದನ್ನು ಅವರು ನೋಡುತ್ತಾರೆ. ಈ 'ಫ್ಲೈಯಿಂಗ್ ಸಾಸರ್' ಘಟನಾವಳಿಗಳನ್ನು ನೋಡಿದವರು ಸುಮಾರು ಮೂವ್ವತ್ತೆಂಟು ಜನ. ಅದರಲ್ಲಿ ಮೂವರು ಸ್ಕೂಲ್ ಉಪಾಧ್ಯಾಯರೂ ಎಂಟು ಮಂದಿ ವೈದ್ಯಕೀಯ ಸಿಬ್ಬಂದಿಗಳೂ ಇದ್ದಾರೆ.

"ನಾವು ನೋಡುತ್ತಿರಬೇಕಾದರೆ ಆ ಆಕಾಶ ಯಂತ್ರದೊಳಗಿಂದ ಮನುಷ್ಯರು ಹೊರಬಂದರು. ಆ ಅಗಾಧ ಸಾಸರಿನ ಮೇಲೆ ಇರುವ ಡೆಕ್ಕಿನಲ್ಲಿ ಏನನ್ನೋ ಮಾಡತೊಡಗಿದರು. ಒಮ್ಮೊಮ್ಮೆ ನಾಲ್ಕೈದು ಜನ ಒಮ್ಮೊಮ್ಮೆ ಇಬ್ಬರು ಇರುತ್ತಿದ್ದರು. ಅವರು ಬಗ್ಗಿ ಕುಳಿತೇಳುತ್ತಿದ್ದ ರೀತಿಯನ್ನು ನೋಡಿದರೆ ಅವರು ಏನನ್ನೊ ರಿಪೇರಿ ಮಾಡುತ್ತಿರುವಂತೆ ತೋರುತ್ತಿತ್ತು. ಅಷ್ಟು ದೂರಕ್ಕೆ ಅವರನ್ನು ನಮ್ಮಂಥ ಮನುಷ್ಯರೆಂದು ಗುರುತಿಸಿದೆನೇ ಹೊರತು ಅವರು ಎಂಥ ಮನುಷ್ಯರು ಎನ್ನುವ ವಿವರಗಳನ್ನು ನನಗೆ ತಿಳಿಯಲು ಸಾಧ್ಯವಾಗಲಿಲ್ಲ. ನನ್ನ ಬಳಿ ಏನಾದರೂ ಒಳ್ಳೆಯ ಬೈನಾಕ್ಯುಲರ್ ಇದ್ದಿದ್ದರೆ ಇನ್ನಷ್ಟು ಆಶ್ಚರ್ಯಕಾರಕ ಅಮೂಲ್ಯ ವಿವರಗಳನ್ನು ನಾನು ಖಂಡಿತಾ ಸಂಗ್ರಹಿಸುತ್ತಿದ್ದೆ. ಆದರೆ ಒಂದಂತೂ ನನಗೆ ಸರ್ವಸ್ಪಷ್ಟ. ಅವು ಮನುಷ್ಯಾಕೃತಿಗಳೇ ಎಂಬುದು. ನಾನು ಅಲ್ಲಿ ನನ್ನೊಡನೆ ನಿಂತು ನನ್ನ ಜೊತೆಯೇ ಆ ಮಾನವಾಕೃತಿಗಳನ್ನು ನೋಡುತ್ತಿದ್ದವರೊಡನೆ ಮಾತಾಡಿ ಅವರಿಗೂ ಅದು ಕಾಣುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡೆ" ಎಂದು ಫಾದರ್‌ಗಿಲ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇದಕ್ಕಿಂತ ಆಶ್ಚರ್ಯ ಫಾದರ್‌ಗಿಲ್‌ಗೆ ಕಾದಿತ್ತು! ಅಲ್ಲಿ ರಿಪೇರಿ ಮಾಡುತ್ತಿದ್ದವರು ಇದ್ದಕ್ಕಿದ್ದಂತೆ ರಿಪೇರಿಯನ್ನು ನಿಲ್ಲಿಸಿ ಡೆಕ್ಕಿನಿಂದ ಬಗ್ಗಿ ಇವರತ್ತ ನೋಡುತ್ತಿದ್ದಂತೆ ಕಂಡಿತು. ಫಾದರ್‌ಗಿಲ್ ಕೂಡಲೇ ತಮ್ಮ ಕೈಯನ್ನು ಮೇಲೆತ್ತಿ ಅವರತ್ತ ಬೀಸಿದರು. ಅತ್ಯಾಶ್ಚರ್ಯ!! ಫಾದರ್ ಗಿಲ್ ಅಪ್ರತಿಭರಾಗಿ

ಅವಾಕ್ಕಾಗುವಂತೆ ಅವರಲ್ಲೊಬ್ಬ ಎರಡೂ ಕೈಗಳನ್ನು ಮೇಲೆತ್ತಿ ಫಾದರ್ ಗಿಲ್‌ರ ಸಂಜ್ಞೆಯನ್ನು ಅನುಕರಿಸಿ ಉತ್ತರಿಸಿದ. ಅನಂತರ ಡೆಕ್ಕಿನ ಮೇಲೆ ಸುಮ್ಮನೆ ನಿಂತಿದ್ದ ಇನ್ನೆರಡು ಮಾನವಾಕೃತಿಗಳೂ ಸಹ ಅವನನ್ನೇ ಅನುಸರಿಸಿ ಕೆಳಗೆ ನಿಂತಿದ್ದ ಜನಗಳತ್ತ ಕೈ ಬೀಸಲಾರಂಭಿಸಿದರು. ಕೆಳಗೆ ಪ್ರೇಕ್ಷಕರಾಗಿ ನಿಂತಿದ್ದವರಿಂದ ಆಶ್ಚರ್ಯದ ಉದ್ಗಾರಗಳು ಹೊಮ್ಮಿದುವು.

ಮುಂದಾದುದನ್ನು ಫಾದರ್ ಗಿಲ್ ಈ ರೀತಿ ಹೇಳುತ್ತಾರೆ.........

"ನಮ್ಮ ಸಂಜ್ಞೆಗಳಿಗೆ ಅವರು ಉತ್ತರವಾಗಿ ಪ್ರತಿ ಸಂಜ್ಞೆಗಳನ್ನು ಮಾಡುತ್ತಿದ್ದಾರೆನ್ನುವುದರಲ್ಲಿ ನನಗೆ ಯಾವ ಸಂಶಯವೂ ಉಳಿಯಲಿಲ್ಲ. ಅವರ ಪ್ರತಿಕ್ರಿಯೆ ನೋಡಿ ನನ್ನ ಪಕ್ಕ ನಿಂತಿದ್ದವರೆಲ್ಲಾ ದಿಗ್ಭ್ರಾಂತರಾಗಿ ಹೋದರು.

ಆಗಲೇ ಕತ್ತಲಾಗತೊಡಗಿತ್ತು. ನಾನು ಎರಿಕ್‌ಗೆ ಒಂದು ಟಾರ್ಚ್ ತರಲು ಹೇಳಿದೆ. ಅನಂತರ ಅದನ್ನು 'ಫ್ಲೈಯಿಂಗ್ ಸಾಸರ್' ಕಡೆಗೆ ಹಿಡಿದು ಅತ್ತಿಂದಿತ್ತ ತುಯ್ದಾಡಿಸುತ್ತಾ ಸಂಜ್ಞೆ ಮಾಡಿದೆ. ಕೆಲವು ನಿಮಿಷಗಳ ತರುವಾಯ 'ಫ್ಲೈಯಿಂಗ್ ಸಾಸರ್' ಕಡೆಯಿಂದ ನೀಲಿ ಬೆಳಕಿನ ಸ್ಪಾಟ್‌ಲೈಟ್ ನಮ್ಮನ್ನು ಅನುಕರಿಸಿ ಗಡಿಯಾರದ ಪೆಂಡ್ಯೂಲಂನಂತೆ ತುಯ್ದಾಡಿತು.

ಇದೇ ರೀತಿ ನಾನು ಅನೇಕ ಬಾರಿ ಟಾರ್ಚ್‌ನ್ನು ಬೀಸಿ ಬೀಸಿ ಸಂಜ್ಞೆಮಾಡಿದೆ. ಇದ್ದಕ್ಕಿದ್ದಂತೆ 'ಫ್ಲೈಯಿಂಗ್‌ಸಾಸರ್'ಗಾತ್ರ ಹಿರಿದಾಗತೊಡಗಿತು. 'ಫ್ಲೈಯಿಂಗ್ ಸಾಸರ್' ವೇಗವಾಗಿ ನಮ್ಮೆಡೆಗೆ ಇಳಿಯತೊಡಗಿತು. ಸುಮಾರು ಒಂದು ನಿಮಿಷದವರೆಗೆ ನಮ್ಮ ಕಡೆಗೆ ಇಳಿಯುತ್ತಾ ಬಂದುದು ಇದ್ದಕ್ಕಿದ್ದಂತೆ ನಿಂತಿತು. ಅಷ್ಟರಲ್ಲಿ ಆ 'ಫ್ಲೈಯಿಂಗ್ ಸಾಸರ್' ಡೆಕ್ಕಿನ ಮೇಲಿದ್ದ ವ್ಯಕ್ತಿಗಳು ಮತ್ತೆ ತಮ್ಮ ರಿಪೇರಿ ಕೆಲಸ ಆರಂಭಿಸಿದಂತೆ ಕಂಡಿತು. ತಮ್ಮ ಕೆಲಸದಲ್ಲೇ ಮಗ್ನರಾಗಿದಂತಿದ್ದ ಅವರು ನಮ್ಮತ್ತ ಗಮನಹರಿಸಲೇ ಇಲ್ಲ. ಕೊಂಚ ಹೊತ್ತಿನ ಅನಂತರ ಅವರೆಲ್ಲಾ ಒಳಕ್ಕೆ ಹೋದರು. 'ಫ್ಲೈಯಿಂಗ್ ಸಾಸರ್' ಮಾತ್ರ ಅಲ್ಲೇ ನಿಂತಿತ್ತು......."

ಫಾದರ್‌ಗಿಲ್‌ರನ್ನೊಳಗೊಂಡಂತೆ ಇಡೀ ಸಮೂಹವೇ 'ಫ್ಲೈಯಿಂಗ್ ಸಾಸರ್' ಕಡೆಗೆ ತಿರುಗಿ ಕೂಗಿ ಸಂಜ್ಞೆಗಳನ್ನು ಮಾಡಿದರೂ ಸಹ ಅನಂತರ 'ಫ್ಲೈಯಿಂಗ್ ಸಾಸರ್' ಒಳಗಿನ ಜೀವಿಗಳಿಂದ ಯಾವುದೇ ಬಗೆಯ ಪ್ರತಿಕ್ರಿಯೆ ಕಂಡುಬರಲಿಲ್ಲ.

ಕೊನೆಗೆ ಫಾದರ್‌ಗಿಲ್ ಊಟಕ್ಕೆ ಹೋದರು......

ಅನೇಕರು ಇಂಥದೊಂದು ಘಟನೆಯ ನಡುವೆ ಫಾದರ್‌ಗಿಲ್ ಮತ್ತೆ ರಾತ್ರಿ ಊಟಕ್ಕೆ ಹೋದುದು ತೀರಾ ಅಸ್ವಾಭಾವಿಕವಾಗಿ ಕಾಣುತ್ತದೆ ಎಂದು ಸಂದೇಹಪಡುತ್ತಾರೆ. ಡಾ|| ಆಲೆನ್ ಜೆ ಹೈನೆಕ್ ಈ ಬಗ್ಗೆ ಫಾದರ್‌ಗಿಲ್‌ರನ್ನು ಪ್ರಶ್ನಿಸಿದರು. ಇಂಥದೊಂದು ಅಸಾಧಾರಣ ಘಟನೆ

ನಡೆಯುತ್ತಿದ್ದಾಗ ನೀವು ಊಟಕ್ಕೆ ಹೇಗೆ ಹೋದಿರಿ ಎಂದು. ಫಾದರ್ ಗಿಲ್ ಮೂರು ಕಾರಣಗಳನ್ನು ಹೇಳುತ್ತಾರೆ.

ಮೊದಲನೆದು 'ಫ್ಲೈಯಿಂಗ್ ಸಾಸರ್' ತುಂಬಾ ಸಮಯದಿಂದ ಅಲ್ಲಿದ್ದುದರಿಂದ ಅದು ಊಟ ಮುಗಿಸಿದ ಅನಂತರವೂ ಅಲ್ಲೇ ಇರುತ್ತದೆ ಎಂದು ನಮಗನ್ನಿಸಿತು. ಎರಡನೆಯದು 'ಫ್ಲೈಯಿಂಗ್ ಸಾಸರ್'ಜೀವಿಗಳು ನಮ್ಮನ್ನು ಉಪೇಕ್ಷಿಸಿ ಒಳಗೆ ಹೋಗಿ ನಮ್ಮ ಕೂಗುಗಳಿಗೆ ಯಾವುದೇ ಬಗೆಯ ಪ್ರತಿಕ್ರಿಯೆ ತೋರದುದರಿಂದ ನಮಗೂ 'ಫ್ಲೈಯಿಂಗ್ ಸಾಸರ್' ಬಗ್ಗೆ ಉಪೇಕ್ಷೆ ಬರತೊಡಗಿತ್ತು. ನಮ್ಮ ಕ್ರಿಯೆಗೆ ಪ್ರತಿಕ್ರಿಯೆ ಇಲ್ಲದಿದ್ದರೆ ಯಾವುದರ ಬಗ್ಗೆಯಾಗಲೀ ಕುತೂಹಲ ನಿಧಾನವಾಗಿ ಕಡಮೆಯಾಗುತ್ತದೆ. ಮೂರನೆಯದು ಇದಾವುದೋ ಅಮೆರಿಕನ್ನರ ಹೊಸ ನಿಗೂಢ ಮಿಲಿಟರಿ ವಾಹನವಿರಬಹುದೆ ಎಂದೂ ಸಂಶಯ ಬಂದಿತ್ತು. ಫಿಲಿಪ್ಪೈನ್ಸ್‌ನಲ್ಲಿರುವ ಅಮೆರಿಕನ್ನರ ಮಿಲಿಟರಿ ನೆಲೆಗಳಿಂದ ಹಾರುವ ಅನೇಕ ವಿಮಾನಗಳು ಆಗೀಗ ಪಪುವಾ ಮೇಲೂ ಹೋಗುತ್ತಿರುತ್ತವೆ. ಹಾಗಾಗಿ ನಾವು ಊಟಕ್ಕೆ ತೆರಳಿದೆವು. ಆದರೂ ಈಗ ನೆನೆಸಿಕೊಂಡರೆ ಒಮ್ಮೊಮ್ಮೆ ನನಗೂ ನಾನು ಊಟಕ್ಕೆ ತೆರಳಿದುದರ ಬಗ್ಗೆ ಆಶ್ಚರ್ಯವಾಗುತ್ತದೆ!

ಫಾದರ್ ಗಿಲ್ ಊಟ ಮುಗಿಸಿ ಹೊರಬಂದ ನಂತರವೂ 'ಫ್ಲೈಯಿಂಗ್ ಸಾಸರ್' ಅಲ್ಲೇ ಇತ್ತು. ಆದರೆ ಅದರ ಡೆಕ್ಕಿನ ಮೇಲೆ ಯಾರೂ ಕಾಣುತ್ತಿರಲಿಲ್ಲ. ಕೊಂಚ ಹೊತ್ತಿನ ಅನಂತರ ಅಲ್ಲಿದ್ದ ಗುಂಪೆಲ್ಲಾ ಚರ್ಚಿಗೆ ಪ್ರಾರ್ಥನೆ ಮಾಡಲು ತೆರಳಿತು. "ಪ್ರಾರ್ಥನೆ ಮುಗಿಸಿ ಹೊರಬಂದಾಗ ಆಕಾಶವೆಲ್ಲಾ ದಟ್ಟಮೋಡಗಳಿಂದ ಕವಿದಿತ್ತು. 'ಫ್ಲೈಯಿಂಗ್ .ಸಾಸರ್' ಕಾಣುತ್ತಿರಲಿಲ್ಲ. ಸರಿಯಾಗಿ ೧೦ಗಂಟೆ ೪೦ನಿಮಿಷದ ಹೊತ್ತಿಗೆ ಮೋಡದೊಳಗಿಂದ ಭಯಂಕರ ಆಸ್ಫೋಟನೆಯಂಥ ಸದ್ದು ಕೇಳಿತು. ಇದು ಗುಡುಗೋ ಅಥವಾ 'ಫ್ಲೈಯಿಂಗ್ ಸಾಸರ್' ನಿಂದ ಬಂದ ಶಬ್ದವೋ ಗೊತ್ತಾಗಲಿಲ್ಲ......"

ಇದೇ ಸಮಯದಲ್ಲಿ ಎಡ್ವಿಯೋ ಇವೇನೆಟ್ ಎಂಬಾತ ಬೋಯ್‌ನಾಯ್ ಊರಿನ ಮೇಲೆ ಒಂದು 'ಫ್ಲೈಯಿಂಗ್ ಸಾಸರ್' ಕೇವಲ ೫೦೦ ಅಡಿಗಳ ಎತ್ತರದಲ್ಲಿ ನಿಂತಿದ್ದುದನ್ನು ವರದಿ ಮಾಡಿದ್ದಾನೆ.

ಈ ರೀತಿಯ 'ಫ್ಲೈಯಿಂಗ್ ಸಾಸರ್' ಪ್ರಕರಣಗಳನ್ನು ಪಪುವಾದಲ್ಲಿ ಕಂಡವರು ಅನೇಕರಿದ್ದಾರೆ. ಒಂದೇ ವರ್ಷದಲ್ಲಿ ವರದಿಯಾಗಿರುವ ಪ್ರಕರಣಗಳೇ ಸುಮಾರು ೫೩ ಇವೆ. ಏನೋ ಆಕಾಶ ವಿಮಾನ ಎಂದು ಉಪೇಕ್ಷಿಸುತ್ತಾರೆ. ಆದರೆ ಇವು ತಾರಾಮಂಡಲದ ಬೇರೊಂದು ಲೋಕದವು ಎಂದ ಕೂಡಲೇ ಹೌಹಾರುತಾರೆ.

'ಫ್ಲೈಯಿಂಗ್ ಸಾಸರ್' ಕುರಿತು ನಾನು ಬರೆಯತೊಡಗಿದ ಮೇಲೆ ನನಗೂ ಅನೇಕ ಕಾಗದಗಳು ಕರ್ನಾಟಕದ ಅನೇಕ ಕಡೆಗಳಿಂದ ಬರತೊಡಗಿವೆ. ಕೆಲವರು ನನ್ನ ಊರಿಗೆ ಬಂದು ಮುಖತಃ ನನಗೆ ವರದಿ ಮಾಡಿದ್ದಾರೆ. ಎಂದರೆ ಇದರ ಬಗ್ಗೆ ಕೊಂಚ ಪೂರ್ವಭಾವಿ ತಿಳುವಳಿಕೆ ಇದ್ದರೂ ಜನ ಇನ್ನಷ್ಟು ಕರಾರುವಾಕ್ಕಾಗಿ ಇದನ್ನು ವೀಕ್ಷಿಸಿ ವರದಿ ಮಾಡುತ್ತಿದ್ದರು ಎಂದೆನ್ನಿಸುತ್ತದೆ.

ಪಪುವಾದ ಕಾಡುಜನರ ನಡುವೆ ಫಾದರ್‌ಗಿಲ್ ಇಲ್ಲದಿದ್ದರೆ ಈ ಘಟನೆಯೂ ಇತಿಹಾಸದ ಪುಟಗಳಲ್ಲಿ ಅಂತರ್ಧಾನವಾಗಿ ಹೋಗುತ್ತಿತ್ತೆಂದು ತೋರುತ್ತದೆ.

# ಸುತ್ತಮುತ್ತಣ ಯು.ಎಫ್.ಒ.ಸಂಗತಿಗಳು

## (ಮೂಡಿಗೆರೆ ,ಪಾವುಗಡ ,ಬಿಜಾಪುರ ಇತ್ಯಾದಿ ,)

ಒಂದುದಿನ ಮಧ್ಯಾಹ್ನ ಮೂಡಿಗೆರೆ ಬೀದಿಯಲ್ಲೇನೋ ಯೋಚನೆ ಮಾಡುತ್ತಾ ನಾನು ನಿಂತಿರಬೇಕಾದರೆ "ಸ್ವಾರ್" ಎಂದು ಯಾರೋ ಕರೆದರು. ತಿರುಗಿ ನೋಡಿದೆ. ಯಾರೋ ಒಬ್ಬರು ಅಪರಿಚಿತ ವ್ಯಕ್ತಿ ನಿಂತಿದ್ದರು. ನಾನು ಏನು? ಎನ್ನುವಂತೆ ನೋಡಿದೆ.

"ನಿಮ್ಮ 'ಫ್ಲೈಯಿಂಗ್ ಸಾಸರ್' ಲೇಖನಗಳನ್ನೆಲ್ಲಾ ಒಂದೂ ಬಿಡದೆ ಓದುತ್ತಿದ್ದೇನೆ ಸಾರ್" ಎಂದರು.

"ತುಂಬ ಸಂತೋಷ"

"ಅಲ್ಲಾ ಸಾರ್ ನೀವು ಇದನ್ನೆಲ್ಲಾ ನಂಬಿದ್ದೀರಾ?"

"ಇದರಲ್ಲಿ ನಂಬುವ ಪ್ರಶ್ನೆ ಬರುವುದೇ ಇಲ್ಲ. ಇದೇನು ನಿಮ್ಮ ಧರ್ಮ ಆಚಾರಗಳೆ ನಂಬುವ ಅಥವ ನಂಬದಿರುವುದಕ್ಕೆ? ಇಲ್ಲಿಯವರೆಗೆ ಜಗತ್ತಿನ ನಾನಾ ಕಡೆಗಳಲ್ಲಿ ನಡೆದಿರುವ 'ಯು ,ಎಫ್ ,ಒ'ಸಂಗತಿಗಳನ್ನು ತಿಳಿಸಿದ್ದೇನೆ. ಇವುಗಳಲ್ಲಿ ಸುಳ್ಳು ಎಂದು ಸಾಕ್ಷ್ಯಾಧಾರಗಳು ಸಿಕ್ಕುವವರೆಗೆ ಇವುಗಳನ್ನು ನಿಜ ಎಂದು ತಿಳಿಯುತ್ತೇವೆ. ತಿಳಿದುಕೊಳ್ಳುವುದು ಇಲ್ಲಿ ಮುಖ್ಯ ಅಷ್ಟೆ. ಪ್ರತಿಯೊಬ್ಬರೂ ಅನಂತರ ತಮ್ಮ ತಮ್ಮ ಸಂಸ್ಕಾರ ತಿಳುವಳಿಕೆಗೆ ತಕ್ಕಂತೆ ತೀರ್ಮಾನ ತೆಗೆದುಕೊಳ್ಳಬಹುದು. ಬ್ರಹ್ಮಾಂಡದ ಕೋಟ್ಯಂತರ ಗ್ರಹ ತಾರೆಗಳಲ್ಲಿ ಅನೇಕ ಕಡೆಗಳಲ್ಲಿ ಜೀವೋದ್ಭವ ಮತ್ತು ವಿಕಾಸ ಸಂಭವಿಸಿರಲೇ . ಬೇಕು ಎಂದು ಇವತ್ತಿನ ಅತ್ಯುನ್ನತ ವಿಜ್ಞಾನಿಗಳೆಲ್ಲ ನಿರ್ವಿವಾದವಾಗಿ ನಂಬಿದ್ದಾರೆ. ನಮ್ಮಂತೆಯೇ ಅಲ್ಲಿನ ಜೀವ ಸಮುಚ್ಚಯವೂ ಇತರ ಗ್ರಹಗಳ ಬಗ್ಗೆ ಕುತೂಹಲ ತಾಳಿರಬಹುದಲ್ಲವೆ? ಬಾಹ್ಯಾಕಾಶ ಸಂಶೋಧನೆಗೆಂದು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ತಾರಾ ಮಂಡಲದ ಬುದ್ಧಿಯುತ ಜೀವಿಗಳೂ ಅದೇ ಪ್ರಯತ್ನದಲ್ಲಿದ್ದರೆ! ತಾರಾಮಂಡಲದ ಜೀವಿಗಳೊಡನೆ ಸಂವಾದಿಸಲು ಕೊಂಚವಾದರೂ ನಮ್ಮ ನಾಗರೀಕತೆಗಳಿಗೆ ಪೂರ್ವ ಸಿದ್ಧತೆ ಬೇಡವೆ?"

"ಹಾಗಾದರೆ ನೀವು ನೋಡಿದ್ದೀರ 'ಯು ,ಎಫ್ ,ಒ'ಗಳನ್ನ?"

"ಇಲ್ಲ ನಾನು ನೋಡಿಲ್ಲ. ಆದರೆ ಅನೇಕರು ನೋಡಿ ವಿಶ್ಲೇಷಿಸಿ ತಿಳಿಸಿದ್ದನ್ನು ಕನ್ನಡಿಗರಿಗೆ ತಿಳಿಸುವುದಷ್ಟೆ ನನ್ನ ಉದ್ದೇಶ. ಇಂಗ್ಲಿಷ್ ತಿಳಿದವರಿದ್ದಲ್ಲೇ 'ಯು ,ಎಫ್ ,ಒ' ಇಳಿಯಬೇಕೆಂದೇನೂ ಇಲ್ಲ. ದೆವ್ವ ಭೂತ ಗಳೆಂದು ಭ್ರಮಿಸದೆ ಭೂಮಿಯಿಂದಾಚೆ ತಾರಾಮಂಡಲಗಳಿವೆಯೆಂದೂ ಅಲ್ಲೂ ಇಲ್ಲಿನಂತೆಯೇ ಬುದ್ಧಿಯುತ ಜೀವಿಗಳಿರಬಹುದೆಂದೂ ತಿಳಿದಿದ್ದರೆ ಅನಿರೀಕ್ಷಿತ

ಸಂದರ್ಭಗಳಲ್ಲಿ ಅನುಕೂಲವಲ್ಲವೆ?"

"ನನಗೆ ಇದರಲ್ಲಿ ಸಂಪೂರ್ಣ ನಂಬಿಕೆ ಇದೆ ಸಾರ್! ಯಾಕೆಂದರೆ ನನಗೂ ಇಂಥದೊಂದು ಅನುಭವ ಆಗಿದೆ ಅದಕ್ಕೇ."

ನನಗೆ ಆಶ್ಚರ್ಯವಾಯ್ತು. ಈತ ಇದೆಲ್ಲಾ ಕಂತೆ ಪುರಾಣ, ಅವೈಜ್ಞಾನಿಕ ಎಂದು ವಾದಿಸಲು ಬಂದಿರಬಹುದೆಂದು ಊಹಿಸಿದ್ದೆ. ಆತನ ಅನುಭವ ಏನೆಂದು ಕೇಳಬೇಕೆಂದು ಕುತೂಹಲವಾಯ್ತು.

"ಸಾವಿರದೊಂಬೈನೂರ ಎಂಬತ್ತೂರನೆ ಇಸ್ವಿಯಲ್ಲಿ ಸಾರ್. ಸಾಯಂಕಾಲ ನಾನು ನನ್ನ ಮಗ ಇದೇ ಮೂಡಿಗೆರೆ ಬಸ್‌ಸ್ಟಾಂಡಿನ ದಾರಿಯಲ್ಲಿ ವಾಕಿಂಗ್ ಹೊರಟಿದ್ದೆವು. ಆಗ ನಾವು ಒಂದು ಹಾರುವ ಸಾಸರನ್ನು ಕಣ್ಣಾರೆ ನೋಡಿದೆವು. ಈಗ ನೀವು ಬರೆಯುತ್ತಿರೋ ಲೇಖನಗಳನ್ನು ಓದಿದಮೇಲೆ ಅದು ಹಾರುವ ಸಾಸರ್ ಎಂದು ಖಚಿತವಾಗಿದೆ.

"ಕುಂದೂರಿನ ಕಡೆಯಿಂದ ಬೆಟ್ಟದ ಮಗ್ಗುಲಲ್ಲೇ ಬಸ್‌ಸ್ಟಾಂಡಿನ ಮೇಲಕ್ಕೆ ಅದು ಹಾರಿಬಂತು. ಅಲ್ಯೂಮಿನಂ ಲೋಹದಿಂದ ಮಾಡಿದಂತೆ ಅದು ಹೊಳೆಯುತ್ತಿತ್ತು. ಬಸ್ ಸ್ಟಾಂಡಿನ ಮೇಲಕ್ಕೆ ಬಂದದ್ದು ಒಂದುಕ್ಷಣ ನಿಂತು ಇದ್ದಕ್ಕಿದ್ದಂತೆ ದಿಕ್ಕು ಬದಲಿಸಿ ದಕ್ಷಿಣದ ಕಡೆಗೆ ವೇಗವಾಗಿ ಹಾರಿಹೋಯ್ತು. ಅದರ ಆಕಾರ ಎಲ್ಲ ನೀವು ವಿವರಿಸಿದಂತೆ ಥೇಟ್! ತಟ್ಟೆ ಯಾಕಾರದಲ್ಲಿದ್ದು ಮೇಲೆ ನೀವು ತಿಳಿಸಿದಂತೆ ಗುಮ್ಮಟದಂತಿತ್ತು. ಅದೂ ರಾತ್ರಿ ಹೊತ್ತೂ ಅಲ್ಲ. ಮಧ್ಯಾಹ್ನದ ಹೊತ್ತಿನಲ್ಲಿ. ನನ್ನ ಮಗ ಅದನ್ನು ನೋಡಿ ಗಟ್ಟಿಯಾಗಿ ನನಗೆ ತಿಳಿಸಲು ಕೂಗಿದ. ಆಗ ಅಲ್ಲಿದ್ದ ಇನ್ನೂ ಹಲವಾರು ಜನ ನೋಡಿದರು!"

ಆತ ತಾನು ನೋಡಿದ್ದನ್ನೂ ಅದರ ರೂಪ ಆಕಾರಗಳನ್ನೂ ವಿವರಿಸಿ ತನ್ನೊಡನೆ ಆ ತಟ್ಟೆಯನ್ನು ನೋಡಿದ ಇತರರ ಹೆಸರು ವಿಳಾಸಗಳನ್ನು ಕೊಟ್ಟು ತನ್ನ ಮಾತಿನಲ್ಲಿ ನಂಬಿಕೆ ಇಲ್ಲದಿದ್ದರೆ ಅವರನ್ನು ಕೇಳಿ ನೋಡಿರಿ ಎಂದು ಹೇಳಿದ.

ಆತ ಹೇಳುತ್ತಿರುವುದರಲ್ಲಿ ಸುಳ್ಳಿಲ್ಲವೆಂದು ನನಗನ್ನಿಸಿತು. ಮತ್ತು ಆ ಸಂಗತಿಯ ವಿವರಗಳನ್ನು ಇಷ್ಟೊಂದು ದಿನಗಳಾದ ನಂತರ ತನಿಖೆ ಮಾಡುವುದು ಪ್ರಯೋಜನವಾಗಲಾರದು ಎಂದೆನ್ನಿಸಿತು. ಅದಕ್ಕಾಗಿ ಆತ ಕೊಟ್ಟ ವಿಳಾಸಗಳನ್ನು ಹುಡುಕಿಕೊಂಡು ಹೋಗಲಿಲ್ಲ.

ಇದನ್ನೇಕೆ ಹೇಳಿದೆನೆಂದರೆ ನಾನು 'ಫ್ಲೈಯಿಂಗ್ ಸಾಸರ್' ಮೇಲೆ ಬರೆಯತೊಡಗಿದ ಅನಂತರ ನನಗೇ ಆಶ್ಚರ್ಯವಾಗುವಷ್ಟು 'ಫ್ಲೈಯಿಂಗ್ ಸಾಸರ್' ಘಟನೆಗಳನ್ನು ಜನ ನನಗೆ ತಿಳಿಸತೊಡಗಿದ್ದಾರೆ. ನಾನು 'ಫ್ಲೈಯಿಂಗ್ ಸಾಸರ್' ಬಗ್ಗೆ ಬರೆಯುತ್ತಾ ಕೆಲವು ಕಾರಣಗಳಿಂದ ಏಷಿಯಾದಲ್ಲಿ ಅದೂ ಭಾರತದಲ್ಲಿ 'ಫ್ಲೈಯಿಂಗ್ ಸಾಸರ್' ಘಟನೆಗಳು ವಿರಳ ಎಂದು ಬರೆದಿದ್ದೆ. ಆದರೆ

ಈಗ ನನಗೆ ಪ್ರತಿ ವಾರ ಬರುತ್ತಿರುವ ಪತ್ರಗಳು ಮತ್ತು ನನಗೆ ಮುಖತಃ ಬಂದು ತಿಳಿಸುತ್ತಿರುವ ಸಂಗತಿಗಳು ಇವನ್ನೆಲ್ಲ ನೋಡಿದರೆ (ಕೆಲವರಂತೂ ನೂರಾರು ಮೈಲುಗಳ ದೂರದ ಊರಿನಿಂದೆಲ್ಲಾ ಬಂದು ತಮ್ಮಲ್ಲಿ ನಡೆದ ಘಟನೆಗಳ ಬಗ್ಗೆ ತಿಳಿಸುತ್ತಿದ್ದಾರೆ.) ಕರ್ನಾಟಕದಲ್ಲೇ ಅನೇಕ 'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳು ನಡೆಯುತ್ತಿರುವ ಸಂಶಯ ಬರುವಂತಿದೆ. ಆದರೆ ಈ 'ಫ್ಲೈಯಿಂಗ್ ಸಾಸರ್' ಚಟುವಟಿಕೆಗಳು ಯಾವ ಮಾಧ್ಯಮದಲ್ಲೂ ದಾಖಲಾಗಿಲ್ಲ. ಪತ್ರಿಕೆಗಳಲ್ಲೂ ಕೊಟ್ಟಿಲ್ಲ. ಅದಕ್ಕಿಂತ ಮಿಗಿಲಾಗಿ 'ಫ್ಲೈಯಿಂಗ್ ಸಾಸರ್' ಗಳೇನೆಂಬ ಪೂರ್ವಭಾವಿ ತಿಳುವಳಿಕೆ ಇಲ್ಲದ ಕಾರಣ ಈ ಘಟನೆಗಳಲ್ಲಿ ಭಾಗಿಗಳಾದ ವ್ಯಕ್ತಿಗಳೇ ಅದನ್ನು ಅಲಕ್ಷಿಸಿದ್ದಾರೆ. ಕೆಲವೆಡೆಗಳಲ್ಲಿ 'ಫ್ಲೈಯಿಂಗ್ ಸಾಸರ್' ಗಳಿಂದ ಮನುಷ್ಯರು ಇಳಿಯುವುದನ್ನು ಕಂಡು ದೆವ್ವಗಳೆಂದು ಓಡಿಹೋಗಿದ್ದಾರೆ. ಒಂದು ಪ್ರಕರಣದಲ್ಲಂತೂ ಹೊಲ ಕಾಯುತ್ತಿದ್ದ ಒಬ್ಬಾತ ಮುನೇಶ್ವರನೆಂಬ ದೆವ್ವವೇ ಇದೆಂದು ಖಾತರಿಯಾಗಿ , ಚಪ್ಪಲಿ ಕಳಚಿಕೊಂಡು ನೆಲಕ್ಕೆ ಬಡಿಯುತ್ತಾ ಭೂತೋಚ್ಚಾಟನ ವಿಧಿಗಳನ್ನು ನಡೆಸಿದ್ದಾನೆ.

ಪಾವಗಡದಿಂದ ಶ್ರೀಯುತ ಬಲರಾಮಶೆಟ್ಟಿ ಎನ್ನುವ ಅಧ್ಯಾಪಕರು ತಾವು ಕಂಡ 'ಫ್ಲೈಯಿಂಗ್ ಸಾಸರ್' ಘಟನೆಯೊಂದರ ವರದಿಯನ್ನು ಇಲ್ಲಿ ಪ್ರಾತಿನಿಧಿಕವಾಗಿ ಉದಾಹರಿಸಬಯಸುತ್ತೇನೆ-

ಗೌರವಾನ್ವಿತ ತೇಜಸ್ವಿಯವರಲ್ಲಿ ,

ನಮಸ್ಕಾರಗಳು.

ನಿಮಗೆ ಅಪರಿಚಿತನಾದ ಪಾವಗಡದ ಬಲರಾಮಶೆಟ್ಟಿಯಾದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ,

ನಾನು ಅನೇಕ ವರ್ಷಗಳಿಂದಲೂ ಪತ್ರಿಕೆಯನ್ನು ಓದುವವನಿದ್ದೇನೆ. ನಿಮ್ಮ ಬರಹಗಳು ನನ್ನನ್ನು ತುಂಬಾ ಆಕರ್ಷಿಸಿವೆ. ಅನೇಕವನ್ನು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಓದಿ ತಿಳಿಸುತ್ತೇನೆ. ನಿಮ್ಮ 'ಫ್ಲೈಯಿಂಗ್ ಸಾಸರ್' ಬಗೆಗಿನ ಲೇಖನ ಆರಂಭವಾದಾಗ ಇದೊಂದು ಅದ್ಭುತ ಎನ್ನಿಸಿತು. ಆದರೆ ಅದೇ ವಿಚಾರ ಅನೇಕ ಸಂಚಿಕೆಗಳಲ್ಲಿ ವಿವರವಾಗಿ ಪ್ರಕಟವಾದಾಗ ಥಟ್ಟನೆ ನಾನು ನನ್ನ ಡೈರಿಯಲ್ಲಿ ನಾನೇ ಖುದ್ದಾಗಿ ಕಂಡ 'ಫ್ಲೈಯಿಂಗ್ ಸಾಸರ್' ಘಟನೆಯೊಂದು ಜ್ಞಾಪಕಕ್ಕೆ ಬಂತು. ನಾನದನ್ನು ಕಂಡಾಗ ಪುರಾಣ ಭಾವನೆಯಂತೆ "ಮುನಿ" ಎಂದು ನಂಬಿದ್ದೆ.

ಆದರೆ ನಿಮ್ಮ ವಿವರಣೆಗಳು ನಾನು ನೋಡಿದ್ದನ್ನು ಸಂಪೂರ್ಣವಾಗಿ ಹೋಲತೊಡಗಿದ್ದನ್ನು ನೋಡಿ ನನ್ನ ಡೈರಿಯ ಘಟನೆಯನ್ನು ಬರೆದು ತಿಳಿಸಬೇಕೆಂದು ಅನ್ನಿಸಿ ಕಳಿಸಿದ್ದೇನೆ. ಈ ಬರೆದಿರುವ ವಿಚಾರವು ನಾನು ಬದುಕಿರುವವಷ್ಟೇ ಸತ್ಯವೆಂದು ಪ್ರಮಾಣ ಮಾಡುತ್ತೇನೆ. ಅನೇಕ

ವರ್ಷಗಳ ಹಿಂದೆ ಅನೇಕ ವಿಚಾರಗಳೊಡನೆ ಇದನ್ನೂ ದಿನಚರಿಯಲ್ಲಿ ಬರೆದಿರುವುದನ್ನು ತಾವು ಬೇಕಾದರೆ ಪರೀಕ್ಷಿಸಬಹುದು. 'ಫ್ಲೈಯಿಂಗ್ ಸಾಸರ್' ಗಳು ಭಾರತದಲ್ಲಿ ಬಂದಿಳಿದ ಘಟನೆಗಳನ್ನು ತಾವು ಬರೆಯಬಹುದೇನೋ ಎಂದು ನಿರೀಕ್ಷಿಸಿದ್ದೆ. ಆದರೆ ಬರಲಿಲ್ಲ. ನಿಮ್ಮ ಲೇಖನಗಳನ್ನು ಓದಿದ ನಂತರ ಈ ಯು.ಎಫ.ಒ. ಎನ್ನುವ ಅದ್ಭುತವನ್ನು ನಾನು ಮುನಿ ಎಂದು ತಪ್ಪಾಗಿ ಭಾವಿಸಿದ್ದಕ್ಕೆ ನಗುಬರುತ್ತಿದೆ.

ನಿಮ್ಮ ಯು.ಎಫ್.ಒ. ಬಗೆಗಿನ ಲೇಖನಗಳ ಪುಸ್ತಕ ದೊರೆಯುವಂತಿದ್ದರೆ ದಯವಿಟ್ಟು ತಿಳಿಸಿರಿ.

ನಮಸ್ಕಾರಗಳು

ಜಿ. ಬಲರಾಮ ಶೆಟ್ಟಿ.

"ಅದೊಂದು ಅವಿಸ್ಮರಣೀಯ ದಿನವೆಂದು ನಾನು ಈಗ ಭಾವಿಸುತ್ತೇನೆ. ದಿನಾಂಕ ೧೮ ಏಪ್ರಿಲ್ ೧೯೬೯. ಯಾವಾಗಲೂ ಹೋಗುವಂತೆ ಸಂಜೆ ಬಿಸಿಲು ಮುಳುಗುವುದರೊಳಗಾಗಿ ನಮ್ಮ ಪಾವಗಡಕ್ಕೆ ಸುಮಾರು ೧೫ ಮೈಲು ದೂರದ ಮೇಳವಾಗಿ ಗ್ರಾಮಕ್ಕೆ ನಾನು ನಮ್ಮ ತಾಯಿ ಹೋದೆವು. ಅದೊಂದು ರಹಸ್ಯ ವಿಚಿತ್ರವನ್ನು ಕಾಣುವ ದಿನವಾದೀತೆಂದು ನಾನು ಊಹಿಸಿರಲಿಲ್ಲ. ಎಂದಿನಂತೆ ಅಲ್ಲಿನ ಚೌಡೇಶ್ವರಿ ದೇವಸ್ಥಾನಕ್ಕೆ ಹೋಗಿ ತಂಗಿದೆವು. ಅದು ನಮ್ಮ ತಾಯಿಯವರು ಕಟ್ಟಿಸಿದ ದೇವಸ್ಥಾನವಾದ್ದರಿಂದ ನಾನು ಆಗಿಂದಾಗ್ಗೆ ಪೂಜೆಗೆ ಹೋಗುವುದು ವಾಡಿಕೆ. ನಾವು ಹೋದಾಗ ಸಂಜೆ ಕತ್ತಲಾಗುತ್ತಿತ್ತು. ನಮ್ಮ ತಾಯಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ಆದಕಾರಣ ಬೇಗ ಪೂಜೆ ಮಾಡಿಸಿದೆವು. ರಾತ್ರಿ ೭.೩೦ಕ್ಕೆ ಬುತ್ತಿ ಊಟ ಮಾಡಿ ಬೇವಿನಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದೆವು..... ಅನೇಕ ಹಳ್ಳಿಗಳ ಸ್ತ್ರೀ ಪುರುಷರು ನಮ್ಮ ತಾಯಿ ಬಳಿಗೆ ಬಂದು ತಮ್ಮ ವಿಚಾರ ತಿಳಿಸುತ್ತಾ ನಮ್ಮ ವಿಚಾರಗಳನ್ನು ಬೆದಕುತ್ತಾ ಇದ್ದರು. ನಮ್ಮೊಂದಿಗೆ ನಮ್ಮ ಚಿಕ್ಕಮ್ಮನ ಮಗ ಅಶ್ವತ್ಥನಾರಾಯಣಶೆಟ್ಟಿ ಸಹ ಇದ್ದರು.

ನಮ್ಮ ಸ್ಥಳಕ್ಕೆ ಅರ್ಧಮೈಲು ದೂರದಲ್ಲಿದ್ದ ಕಾಕಲಗುಟ್ಟ ಗುಡ್ಡವು ಸ್ಪಷ್ಟವಾಗಿಯೂ ಬೃಹತ್ತಾಗಿಯೂ ಕಾಣುತ್ತಿತ್ತು. ಒಮ್ಮೆಗೇ ೧೨ ಗಂಟೆ ಸಮಯದಲ್ಲಿ ಥಳಥಳಿಸುವ ನಕ್ಷತ್ರದಂಥ ವಸ್ತು ಒಂದು ಗೋಚರಿಸಿತು. ಗುಡ್ಡದ ಒಂದು ಪಕ್ಕಕ್ಕೆ ದೂರದಿಂದ ಬರುತ್ತಿತ್ತು. ಮೊದಲು ಬಸ್ಸು ಬರುತ್ತಿದೆ ಎಂದು ಯೋಚಿಸಿದೆ! ಆದರೆ ಅಲ್ಲಿ ಯಾವ ರಸ್ತೆಯೂ ಇರಲಿಲ್ಲ ! ವಿಚಿತ್ರ ಎನ್ನಿಸಿತು.

ಎಲ್ಲರಿಗೂ ಕೂಗಿ ತೋರಿಸಿದೆ. ಅಲ್ಲಿ ವಿದ್ಯಾವಂತರು ಯಾರೂ ಇರಲಿಲ್ಲ. ಹಾಗಾಗಿ ಯಾರೂ ನನ್ನ ಮಾತಿಗೆ ಗಮನ ಕೊಡಲಿಲ್ಲ. ಅದರ ಬೆಳಕಿಗೆ ಗುಡ್ಡದ ಎಲ್ಲಾ ವಸ್ತುಗಳೂ ಬಿಸಿಲಿನಲ್ಲಿ ಕಂಡಂತೆ ಕಾಣತೊಡಗಿದವು.

ನನ್ನ ಕೂಗಾಟಕ್ಕೆ ನನ್ನ ತಾಯಿ ಮತ್ತು ಅಶ್ವತ್ಥನಾರಾಯಣ ಎಲ್ಲಾ ಎದ್ದು ನೋಡಿದರು. ಕೆಲವರು ನನ್ನ ಗಲಾಟೆ ನಿಲ್ಲಿಸಲು "ಯಾರೋ ಬ್ಯಾಟ್ರಿ ಬಿಟ್ಕಂಡು ಬತ್ತಾರೆ ಸುಮ್ಕಿರಪ್ಪಾ. ಅದ್ನೇನು ನೋಡ್ತಿ?" ಎಂದು ಉದ್ಗರಿಸಿದರು. ಬ್ಯಾಟ್ರಿ ಹಾಕಿಕೊಂಡು ಬರೋದಾದರೆ ಇಷ್ಟು ವೇಗವಾಗಿ ಒಂದು ನಿಮಿಷಕ್ಕೆ ಅರ್ಧಗುಡ್ಡ ಕ್ರಮಿಸಿ ಅದೂ ಅರ್ಧ ಗುಡ್ಡದೆತ್ತರದಲ್ಲಿ ಬರಲು ಸಾಧ್ಯವೆ?" ಎಂದೆ. ನನ್ನ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ. ಅನೇಕ ಕಡೆ ದೆವ್ವ ಭೂತಗಳ ಅನೇಕ ಕತೆಗಳನ್ನು ಕೇಳಿದ್ದೆ. ಆದರೆ ಇದು ವಿಕಾರಾಕೃತಿಯಾಗಲೀ ಮನುಷ್ಯಾಕೃತಿಯಾಗಲೀ ಆಗಿರಲಿಲ್ಲ. ಭವ್ಯವಾದ ಒಂದು ದುಂಡನೆಯ ಪಾತ್ರೆಯಂತಿದ್ದು ತಳ ಚಪ್ಪಟೆಯಾಗಿಯೂ ಮೇಲ್ಭುಚ್ಛಳ ಗುಂಡಗೂ ಇತ್ತು. ಸುತ್ತಲೂ ಹೊಮ್ಮುತ್ತಿದ್ದ ಅದರ ಪ್ರಕಾಶ ಎಷ್ಟೋ ಲಕ್ಷಾಂತರ ಕ್ಯಾಂಡಲು ಬಲ್ಬಿನಂತಿತ್ತು.

ಹಿಂದೆ ಅಲ್ಲಿ ಋಷಿಮುನಿ ಸಂಚಾರವಿತ್ತೆಂದೂ ಹತ್ತಿರದ ಪ್ರಸಿದ್ಧ ಸಿದ್ಧರ ಬೆಟ್ಟಕ್ಕೆ ಆಗಾಗ್ಗೆ ಮುನಿ ಸಂಚಾರವಿರುತ್ತದೆಂದೂ ಕೇಳಿದ್ದೆ. ಆ ವಿಚಾರ ಬರುತ್ತಲೇ ಓಡುತ್ತಾ ಹೋಗಿ ಆ ಮುನಿಗೆ ವಂದಿಸಿ ನನ್ನ ಯಾವುದಾದರೂ ಕೋರಿಕೆ ಕೇಳಿಕೊಳ್ಳಬೇಕೆಂದು ಮನಸ್ಸಾಗಿ ಅಮ್ಮನನ್ನು ಕೇಳಿದೆ. ಅಮ್ಮ ನನ್ನನ್ನು ಗದರಿಸಿ ಕುಳ್ಳಿರಿಸಿದರು. ನಾನು ಕುಳಿತೆ. ಆದರೆ ಆ ವಸ್ತುವಿನ ಚಲನವಲನ ಮತ್ತು ನನ್ನ ಗಡಿಯಾರದ ಕಡೆ ಗಮನ ಬಿಡಲಿಲ್ಲ. ಸದ್ದಿಲ್ಲದೆ ಹಾರುತ್ತಿದ್ದ ಅದು ನಮ್ಮ ದೇವಸ್ಥಾನದ ಎದುರೇ ಬಾಗಿಲಿಗೆ ನೇರವಾಗಿ ಒಂದು ನಿಮಿಷದ ಕಾಲ ನಿಶ್ಚಲವಾಗಿ ನಿಂತಿತು. ಅನಂತರ ಅಷ್ಟೇ ವೇಗ ಪ್ರಕಾಶದೊಂದಿಗೆ ಪೂರ್ವದಿಕ್ಕಿನ ಕಡೆಗೆ ಮುಂದುವರಿಯಿತು.

ನಾನು ತಡೆಯಲಾರದೆ ಮೈಮೇಲೆ ಬಂದಿದ್ದ ಪೂಜಾರಿ ಬಳಿಗೆ ದೇವಸ್ಥಾನದೊಳಕ್ಕೆ ಓಡಿದೆ. ಪೂಜಾರಿಯನ್ನು "ಆ ಜಾಜ್ವಲ್ಯಮಾನ ವಸ್ತು ಏನು?" ಎಂದು ಪ್ರಶ್ನೆ ಕೇಳಿದೆ. "ಅದೊಂದು ದೈವೀ ವಸ್ತು. ಅದರ ವಿವರ ನಿನಗೆ ಬೇಡ. ಅದರ ತಂಟೆಗೆ ಹೋಗಬೇಡ. ಅದರ ವಿಷಯ ಎಲ್ಲೂ ಎತ್ತಬೇಡ" ಎಂದು ಉತ್ತರ ಬಂತು.... ಈ ಉತ್ತರ ಕೇಳಿ ಮನಸ್ಸು ಗೊಂದಲಗೊಂಡು ಭೀತನಾದೆ.

ಆ ರಾತ್ರಿ ಬಹಳ ಹೊತ್ತಿನವರೆಗೆ ಎದ್ದೇ ಇದ್ದೆ. ಸುಮಾರು ೧-೩೦ ಗಂಟೆಗೆ ಅದು ಹೋದ ದಾರಿಯಲ್ಲೇ ಮರಳಿತು. ಈಗ ಅದರ ಆಕೃತಿ ಮತ್ತು ವೇಗ ಒಂದೇ ಇದ್ದರೂ ಅದರ ಬೆಳಕು ಅರ್ಧಕ್ಕರ್ಧ ಕಡಿಮೆಯಾಗಿತ್ತು. ಮತ್ತೆ

ಅಲ್ಲಿದ್ದ ಜನಗಳಿಗೆ, ಅಮ್ಮನಿಗೆ, ಅಶ್ವತ್ಥನಾರಾಯಣನಿಗೆ ಕೂಗಿ ಎಬ್ಬಿಸಿದೆ. ಎಲ್ಲರಿಗೂ ನಿದ್ದೆಯ ಮಂಪರು ಬೇಸರ. "ಸಾಕು ಸುಮ್ಮನೆ ಮಲಗೋ" ಎಂದು ಜೋರು ಮಾಡಿದರು....."

ದಿನಾಂಕ ೧೮.೨.೧೯೬೯

ಈ ಪ್ರಸಂಗದ ವಿವರಗಳನ್ನು ದಿನಚರಿಯಲ್ಲಿ ಬರೆದಿಟ್ಟೆ. ಪತ್ರಿಕೆಗಳಿಗೆ ಬರೆದರೆ ಹುಚ್ಚನೆಂದಾರೆಂದು ಯಾವ ಪತ್ರಿಕೆಗೂ ಬರೆಯಲಿಲ್ಲ..."

ಈ ಘಟನೆ ನಿಜವಾದ ಯು.ಎಫ್.ಒ ಕುರಿತದ್ದು ಅಲ್ಲದಿರಬಹುದು, ಅಥವಾ ಆಗಿರಬಹುದು. ಆದರೆ ಸುಳ್ಳಂತೂ ಅಲ್ಲ. ಎಂದೋ ದಿನಚರಿಯಲ್ಲಿ ಬರೆದಿಟ್ಟುಕೊಂಡಿದ್ದ ಈ ಅಧ್ಯಾಪಕರು ತಮಗೆ ಯು.ಎಫ್.ಒ ತಿಳುವಳಿಕೆ ಬಂದ ನಂತರ ಇದೇ ಇರಬಹುದೆಂದು ಬರೆದಿರುವುದು. ಅನೇಕ ಜನರ ಸಮ್ಮುಖದಲ್ಲಿ ನಡೆದ ಈ ಘಟನೆಯ ಬಗ್ಗೆ ಕೂಡಲೇ ಕೊಂಚ ತರಬೇತಾದವರು ವಿಶ್ಲೇಷಣೆ ನಡೆಸಿದ್ದರೆ ಇನ್ನೂ ಹೆಚ್ಚಿನ ಮಾಹಿತಿ ವಿವರಗಳನ್ನು ಸಂಗ್ರಹಿಸಬಹುದಿತ್ತೆನ್ನುವುದು ನಿಜ. ಇಂಥ ಸಾವಿರಾರು ಘಟನೆಗಳು ಕರ್ನಾಟಕದಲ್ಲೇ ನಡೆಯುತ್ತಿದ್ದರೆ ನಾವು ಅಲಕ್ಷದಿಂದ ಇರಬಾರದು. ಬಾಹ್ಯಾಕಾಶದಲ್ಲಿ ದೂರದ ಗ್ರಹಗಳಲ್ಲಿ ಪ್ರಜ್ಞೆ ಇರುವ ಜೀವಸಮುಚ್ಚಯ ಇದೆಯೆ ಎನ್ನುವುದು ಈ ಶತಮಾನದ ಅತ್ಯಂತ ಮುಖ್ಯವಾದ ಮತ್ತು ರೋಮಾಂಚಕರವಾದ ಒಗಟು. ನಮ್ಮ ಮೂಢನಂಬುಗೆ, ಅಜ್ಞಾನ, ಭಯಗಳು ನಮ್ಮ ದೃಷ್ಟಿಯನ್ನು ಮುಸುಗಬಾರದು.

ಕೆಲವು ತಿಂಗಳುಗಳ ಹಿಂದೆ, ಆಗಿನ್ನೂ ಯು.ಎಫ್.ಒ ಬಗ್ಗೆ ಲೇಖನಮಾಲೆ ಆರಂಭಿಸಿರಲಿಲ್ಲ. ಆಗ ಬಿಜಾಪುರದಲ್ಲಿ ಒಂದು ಹಾರುವ ವಸ್ತು ಗೋಚರವಾಯ್ತೆಂದೂ. ಅದೂ ಹೋದಲ್ಲೆಲ್ಲಾ ಬೆಂಕಿಮಳೆಯಾಗಿ ಪೈರು ಹಲವು ಕಿಲೋಮೀಟರುಗಳವರೆಗೆ ಸುಟ್ಟು ಹೋಯ್ತೆಂದೂ ಕರ್ನಾಟಕದ ಪ್ರಮುಖ ಪತ್ರಿಕೆಯೊಂದರಲ್ಲಿ ವರದಿಯಾಯ್ತು. ನಾನೂ ನಮ್ಮ ವಿಜ್ಞಾನಿ ಮಿತ್ರರೂ ಇದನ್ನು ಕುರಿತು ಚರ್ಚಿಸಿದೆವು. ಇದನ್ನು ಕೊಂಚ ತನಿಖೆ ಮಾಡಲೇಬೇಕೆಂದು ನಮಗೆಲ್ಲಾ ಅನ್ನಿಸಿತು. ಆದರೆ ಸ್ವಂತ ಹಣ ಖರ್ಚುಮಾಡಿಕೊಂಡು ಇದನ್ನೆಲ್ಲಾ ಮಾಡುವಷ್ಟು ನಮ್ಮ ಬಳಿ ಚೈತನ್ಯವಿರಲಿಲ್ಲ. ಸ್ವಂತ ಹಣದಿಂದ ಸಾಕಷ್ಟು ಈಗಾಗಲೇ ಮಾಡಿ ಸೋತಿದ್ದೆವು. ಹಾಗಾಗಿ ಮನಸ್ಸಿಲ್ಲದ ಮನಸ್ಸಿನಿಂದ ಸುಮ್ಮನಾದೆವು. ಆದರೆ ಈ ಘಟನೆ ಇಲ್ಲಿಗೇ ನಿಲ್ಲಲಿಲ್ಲ. ಅನಂತರ ನಾನು ಯು.ಎಫ್.ಒ. ಬಗ್ಗೆ ಲೇಖನಮಾಲೆ ಆರಂಭಿಸಿದ ಮೇಲೆ ಆ ಘಟನೆ ವರದಿ ಮಾಡಿದ ಪತ್ರಕರ್ತ ತನ್ನ ಹಣ ವ್ಯಯಿಸಿ ಆ ಘಟನೆಯ ದಾಖಲೆ ವರದಿಗಳ ಟೇಪು ಇತ್ಯಾದಿಗಳನ್ನು ಹೊತ್ತುಕೊಂಡು ನನ್ನಲ್ಲಿಗೆ ಬಂದರು.

ಯು.ಎಫ.ಒ ಘಟನೆಗಳ ಬಗ್ಗೆ ಯಾಕೆ ನಮ್ಮ ದೇಶದಲ್ಲಿ ಹೆಚ್ಚು

ವರದಿಗಳೇ ಬರುತ್ತಿಲ್ಲ ಎನ್ನುವ ಕಾರಣಕ್ಕೆ ಈ ಘಟನೆ ಒಂದು ಪ್ರಧಾನ ಉದಾಹರಣೆ.

ಹಾಗಾದರೆ ಬಿಜಾಪುರದಲ್ಲಿ ನಡೆದದ್ದೇನು?

ಆ ಪತ್ರಕರ್ತನ ತನಿಖೆಯ ವರದಿ ಮತ್ತು ಅನೇಕ ಪ್ರತ್ಯಕ್ಷದರ್ಶಿಗಳ ಧ್ವನಿಮುದ್ರಿಕೆಗಳನ್ನು ಕೇಳಿದನಂತರ ನಾನು ಗ್ರಹಿಸಿದ್ದನ್ನು ನಿಮಗೆ ತಿಳಿಸುತ್ತೇನೆ.

ಬಿಜಾಪುರ ಜಿಲ್ಲೆಯ ಒಂದು ಹಳ್ಳಿಯ ಬಳಿ ಎಂಥದೋ ಒಂದು ಸುಂಟರಗಾಳಿಯ ತರ ತಿರುಗುತ್ತಾ ನೆಲದಿಂದ ಕೆಲವೇ ಅಡಿಗಳ ದೂರದಲ್ಲಿ ಚಲಿಸಿದೆ. ಇದನ್ನು ಚಕ್ರ ಎಂದು ಹಳ್ಳಿಯವರೆಲ್ಲಾ ಕರೆದಿದ್ದಾರೆ. ಈ ಚಕ್ರ ನೆಲದಿಂದ ಕೆಲವು ಅಡಿಗಳ ಅಂತರದಲ್ಲಿ ಹಾರುತ್ತಿರಬೇಕಾದರೆ ಇದರಿಂದ ನೀಲಿಯ ಬೆಳಕು ಭೂಮಿಗೆ ಅಭಿಮುಖವಾಗಿ ಹೊಮ್ಮುತ್ತಿತ್ತು. ಕಿಡಿಗಳು ಕೆಳಕ್ಕೆ ನಿರಂತರವಾಗಿ ಹಾರುತ್ತಿದ್ದವು. ಛಟಛಟ ಸದ್ದು ಬರುತ್ತಿತ್ತು. ಇದು ಹಾರಿದ ಹಾದಿಯಲ್ಲೆಲ್ಲಾ ಮರಗಳು ತಿರುಚಿಕೊಂಡು ಮುರಿದುಬಿದ್ದಿದ್ದವು. ಪೈರುಗಳು ಶಾಖಕ್ಕೆ ಒಣಗಿ ಸುಟ್ಟು ನಿಂತವು. ನೆಲದ ಮೇಲಿದ್ದ ದೊಡ್ಡ ದೊಡ್ಡ ಕಲ್ಲುಗಳೂ ಆ ಚಕ್ರದ ಆಕರ್ಷಣ ಶಕ್ತಿಗೆ ಸಿಕ್ಕಿ ಮೇಲೆದ್ದು ಗಿರಗಿರ ತಿರುಗಿ ಒಂದಕ್ಕೊಂದು ಸಂಘಟಿಸಿ ಚೂರುಚೂರಾಗಿ ನೆಲದ ಮೇಲೆ ಬಿದ್ದವು. ಆ ಚಕ್ರ ಸುತ್ತುತ್ತಾ ಮುಂದುವರಿದದ್ದು ಜನಗಳ ಮನೆಗಳಿರುವೆಡೆಯಲ್ಲೆಲ್ಲಾ ತಿರುಗಿ ಬಲಕ್ಕೂ ಎಡಕ್ಕೂ ಹೋಗಿದೆ. ಹಾಗಾಗಿ ಮನೆಗಳಿಗೆ ಯಾವುದೇ ಅಪಾಯವೂ ಸಂಭವಿಸಿಲ್ಲ. ಪ್ರಾಣಹಾನಿಯೂ ಆಗಿಲ್ಲ. ಈ ಚಕ್ರವನ್ನು ನೂರು ಅಡಿಗಳಿಂದ ನೋಡಿದವರ ಸಂದರ್ಶನವನ್ನೂ ಕೇಳಿದೆ.

ಈ ಸಂಗತಿಗಳನ್ನು ತನಿಖೆ ಮಾಡಿದ ವರದಿಗಾರ ಇದನ್ನು ಯು.ಎಫ.ಒ ಎಂದು ಸ್ವಾಭಾವಿಕವಾಗಿಯೇ ಊಹಿಸಿದ. ಇದು ಪತ್ರಿಕೆಯಲ್ಲಿ ವರದಿಯಾದ ತರುವಾಯ ಮಿಕ್ಕ ಪತ್ರಿಕೆಗಳವರು ತಮ್ಮ ವರದಿಗಾರರಿಗೆ ನೀವೇಕೆ ಈ ಸುದ್ದಿ ಕಳಿಸಲಿಲ್ಲ? ಎಂದು ತಾಕೀತು ಮಾಡಿದರು. ಹಾಗಾಗಿ ಮಿಕ್ಕ ವರದಿಗಾರರು ಇದನ್ನು ತನಿಖೆ ಮಾಡಿದ ವರದಿಗಾರನ ಮೇಲೆ ಮುನಿದೆದ್ದರು.

ಈ ನಡುವೆ ಆ ಜಿಲ್ಲೆಯ ಡಿ.ಸಿಗೆ ಇದೆಲ್ಲಾ ಏನೆಂದು ಸರ್ಕಾರದ ಮಟ್ಟದಿಂದ ವಿವರಣೆ ಕೇಳಿ ಪತ್ರ ಹೋಯ್ತು. ಸರಿ ಜಿಲ್ಲೆಯ ಪೋಲೀಸರಿಗೂ ಬುಲಾವ್ ಹೋಯ್ತು. ಡಿ.ಸಿ ಮಹಾಶಯ ಈ ಸಂಗತಿಯನ್ನು ವರದಿ ಮಾಡಿದ ಪತ್ರಕರ್ತನನ್ನು ಕರೆಸಿ ಸುಳ್ಳು ಸುದ್ದಿ ಹಬ್ಬಿಸಿ ಜನಗಳಲ್ಲಿ ಅಶಾಂತಿ ಉಂಟುಮಾಡುತ್ತಿದ್ದೀಯಾ ಎಂದು ಆರೋಪ ಹೊರಿಸಿ ಛೀಮಾರಿ ಹಾಕಿದರು. ಪತ್ರಕರ್ತನಿಗೂ ಡಿ.ಸಿ.ಗೂ ಬಿಸಿಬಿಸಿ ವಾಗ್ವಾದ ನಡೆಯಿತು.

ಪೋಲೀಸರು ಇದು ಯಾವುದೋ ಹೊಸ ಕುತಂತ್ರ ನಡೆಯುತ್ತಿದೆ ಎಂದು ಗುಮಾನಿಯಿಂದ ಪರಿಶೀಲಿಸಿದರು. ಎಸ್‌ಪಿ · ಇದು ಸರ್ಕಾರದಿಂದ ಪರಿಹಾರ ದೊರಕಿಸಿಕೊಳ್ಳಲು ರೈತರು ನಡೆಸಿರುವ ಕುತಂತ್ರ. ಇದರಲ್ಲಿ ಈ ಪತ್ರಕರ್ತನೂ ಶಾಮೀಲಾಗಿದ್ದಾನೆ ಎಂದು ಡಿಸಿಗೆ ಹೇಳಿದರು. ಈ ನಡುವೆ ಎಸ್ಪಿಯ ಕುಮ್ಮಕ್ಕಿನಿಂದ ಮಿಕ್ಕ ಸ್ಥಳೀಯ ಪತ್ರಿಕೆಗಳು ಈ ಪತ್ರಕರ್ತನ ಮೇಲೆ ದೋಷಾರೋಪಣೆ ಮಾಡಿ ಸುದ್ದಿ ಪ್ರಕಟಿಸಿದವು.

ಈ ವಿಚಿತ್ರವನ್ನು ಕಂಡು ತನಿಖೆಮಾಡಿ ವರದಿ ಮಾಡಹೋದ ಪತ್ರಕರ್ತ ಏಕಾಂಗಿಯಾದ. ಆತನ ಪತ್ರಿಕೆಯ ಸಂಪಾದಕ ಮಂಡಳಿಯೂ ಅವನನ್ನು ಗುಮಾನಿಯಿಂದ ನೋಡಿ ಕೆಲಸ ಕಳೆದುಕೊಳ್ಳುವ ಸ್ಥಿತಿಗೆ ಆತ ಹೋದ.

ನನ್ನ ಯು.ಫ.ಒ. ಲೇಖನಗಳನ್ನು ಓದಿದ್ದ ಈತ ಈ ಬಗ್ಗೆ ಏನಾದರೂ ನನ್ನಿಂದ ಹೊಸ ವಿಷಯ ತಿಳಿಯಬಹುದೇ ಎಂದು ಎಲ್ಲವನ್ನೂ ಹೊತ್ತುಕೊಂಡು ನನ್ನಲ್ಲಿಗೆ ಬಂದ. ನಾನೂ ನಮ್ಮ ವಿಜ್ಞಾನಿ ಮಿತ್ರರೂ ಆತನ ವರದಿಯನ್ನೂ ಟೇಪ್ ಸಂದರ್ಶನಗಳನ್ನೂ ಆಲಿಸಿ ವಿಶ್ಲೇಷಣೆ ಮಾಡಿದೆವು. ನಮಗನ್ನಿಸಿದ್ದು ಈ ಘಟನೆ ಮೊದಲ ನೋಟಕ್ಕೆ ದಕ್ಷಿಣಾಭಾರತದಲ್ಲಿ ತೀರಾ ಅಪರೂಪವಾದ ಟಾರ್ನೆಡೋ ಇರಬೇಕೆಂದು. ನೂರಕ್ಕೆ ತೊಂಭತ್ತು ಭಾಗ ಟಾರ್ನೆಡೋ , ಇನ್ನು ಒಂಭತ್ತು ಭಾಗ ಇನ್ಯಾವುದೋ ವಾತಾವರಣ ವಿಶೇಷ , ಇನ್ನು ಒಂದು ಭಾಗ ಯು.ಎಫ್.ಒ ಚಟುವಟಿಕೆ ಇದ್ದರೂ ಇರಬಹುದು.

ನಮ್ಮ ಅನ್ನಿಸಿಕೆಗೆ ಕಾರಣಗಳು.

1. ಈ ಘಟನೆಯ ಪ್ರತ್ಯಕ್ಷದರ್ಶಿಗಳ ವರದಿಗಳೆಲ್ಲಾ ಚಕ್ರ ಸುತ್ತುತ್ತಿತ್ತು. ಬೆಂಕಿ ಬರುತ್ತಿತ್ತು. ಛಟ ಛಟಜ ಶಬ್ದ ಕೇಳುತ್ತಿತ್ತು ಎಂದಿದ್ದಾರೆಯೇ ವಿನಹ ಈ ಅಂಶಗಳಿಗೆ ಮತ್ತು ಈ ಪರಿಣಾಮಗಳಿಗೆ ಕಾರಣವಾದ ಪ್ರತ್ಯೇಕಿಸಿ ಗುರುತಿಸಬಲ್ಲಂಥ ವಸ್ತುವನ್ನು ನೋಡಿಲ್ಲ.

2. ಯು.ಎಫ್.ಒ ಸಾಹಿತ್ಯದಲ್ಲಿ ಎಲ್ಲೂ ಯು.ಎಫ್.ಒ ಸಂಪೂರ್ಣವಾಗಿ ತಿರುಗುತ್ತಿದ್ದುದರ ವರದಿ ಇಲ್ಲ. ಯು.ಎಫ್.ಒನ ಯಾವುದೋ ಒಂದು ಭಾಗ ತಿರುಗುತ್ತಿತ್ತೆಂದು ಹೇಳಿದ್ದಾರೆ. ಆದರೆ ಇಡೀ ಯು.ಎಫ್.ಒ ಮೇಲಿನ ಘಟನೆಯ ಪ್ರತ್ಯಕ್ಷ ವರದಿಗಳು ತಿಳಿಸುವಂತೆ ತಿರುಗಿದ್ದು ದಾಖಲೆಗಳಲ್ಲಿ ಇಲ್ಲ.

3. ಯು.ಎಫ್.ಒ ನೆಲಕ್ಕೆ ಸಮೀಪವಾದಾಗ ಎಳೆಗಳು ಸುಟ್ಟ , ಮರಗಳು ಮುರಿದ ವರದಿಗಳಿವೆ. ಆದರೆ ಕಲ್ಲುಗಳು ಯು.ಎಫ್.ಒ ಆಕರ್ಷಣೆಗೆ ಸಿಕ್ಕಿ ಮೇಲೆದ್ದು ಅದರೊಡನೆ ಸುತ್ತಿದ ವರದಿಗಳಿಲ್ಲ.

4. ಈ ಮೂರು ಪ್ರಧಾನ ಕಾರಣಗಳು ಈ ಘಟನೆ

ಯು.ಎಫ್.ಒ.ಗೆ ಸಂಬಂಧಿಸಿದ್ದಲ್ಲ ಎನ್ನುವ ಶಂಕೆ ಮೂಡಿಸುತ್ತದೆ.

ಇದು ದಕ್ಷಿಣ ಭಾರತದಲ್ಲಿ ಅಪರೂಪವಾದ ಟಾರ್ನೆಡೋ ಇದ್ದರೂ ಇರಬಹುದೆನ್ನುವುದಕ್ಕೆ ನಮಗನ್ನಿಸಿದ ಕಾರಣಗಳು.

1. ಈ ತಿರುಗುವ ಚಕ್ರದ ಮೇಲೆ ಆಕಾಶದೆತ್ತರಕ್ಕೂ ಒಂದು ಮೋಡದ ಕಂಬ ಇತ್ತೆಂದು ಹೇಳುವುದು. ಅಂಡಮಾನ್ ದ್ವೀಪಗಳಲ್ಲಿ ನಾನೊಂದು ಟಾರ್ನೆಡೋ ನೋಡಿದ್ದೆ. ಮೋಡದಿಂದ ಒಂದು ಮೋಡದ ಕಂಬ ಸುರುಳಿ ಸುತ್ತುತ್ತಾ ಸಮುದ್ರದತ್ತ ಇಳಿಯಿತು. ಸಮುದ್ರದ ನೀರೂ ಗಿರಿಗಿರಿಸುತ್ತುತ್ತಾ ಕಂಬದೋಪಾದಿಯಲ್ಲೇ ಮೇಲೆದ್ದು ಮೋಡದ ಕಂಬವನ್ನು ಸೇರಿಕೊಂಡಿತು. ಆದ್ದರಿಂದ ಈ ಮೋಡದ ಕಂಬ ಟಾರ್ನೆಡೋವಿನ ಪ್ರಧಾನ ಲಕ್ಷಣವೆಂದು ಪರಿಗಣಿಸಬಹುದು.

2. ಕಲ್ಲುಗಳನ್ನು ತನ್ನ ಕೇಂದ್ರದ ನಿರ್ವಾತದ ಬಲದಿಂದ ತನ್ನೆಡೆಗೆ ಸೆಳೆದುಕೊಂಡಿದ್ದು ಮತ್ತು ಇದು ಜಾಜ್ವಲ್ಯಮಾನವಾದ ಮಿಂಚಿನಿಂದ ಕೂಡಿದ್ದು ಟಾರ್ನೆಡೋದ ಇನ್ನೊಂದು ಲಕ್ಷಣ.

3. ಈ ಚಕ್ರ ತಿರುಗಿ ಅಂತರ್ಧಾನವಾದ ಕೆಲ ಹೊತ್ತಿನಲ್ಲೇ ಸಿಡಿಲ್ಮಿಂಚಿನ ಬಿರುಮಳೆ ಬಂಧುದು. ಇದೂ ಸಹ ಟಾರ್ನೆಡೋಗಳ ಲಕ್ಷಣಗಳಲ್ಲಿ ಒಂದೆಂದು ಹೇಳಬಹುದು.

ಆ ಪತ್ರಕರ್ತನಿಗೆ ನಮ್ಮ ತೀರ್ಮಾನವನ್ನೂ ಆ ತೀರ್ಮಾನಕ್ಕೆ ಕಾರಣವಾದ ನಮ್ಮ ವಿಶ್ಲೇಷಣ ವಿಧಾನವನ್ನು ತಿಳಿಸಿದೆವು. ಅನಂತರ ನನ್ನ ಬಳಿ ಟಾರ್ನೆಡೋಗಳ ಬಗ್ಗೆ ಇದ್ದ ಸಾಹಿತ್ಯವನ್ನು ಒದಗಿಸಿ ಓದಲು ಹೇಳಿದೆ.

ಸ್ವಲ್ಪ ಓದುವಷ್ಟರಲ್ಲೇ ಆತನಿಗೆ ತಾನು ನೋಡಿದ್ದು ಟಾರ್ನೆಡೋ ಇರಬಹುದೆಂಬ ಶಂಕೆ ಶುರುವಾಯ್ತು. ಆತನ ಓದು ಮುಗಿಯುವುದರೊಳಗೆ ಆತ ನಮ್ಮ ತೀರ್ಮಾನಗಳು ಸಂಪೂರ್ಣ ಸರಿ ಎನ್ನುವ ಸಹಮತಕ್ಕೆ ಬಂದ.

ಈ ಘಟನೆಯನ್ನು ತಿಳಿಸಿದ್ದೇಕೆಂದರೆ ಯು.ಎಫ್.ಒ ಘಟನೆಗಳೆಂದು ಹೇಳುವ ಸಂಗತಿಗಳನ್ನು ಹೇಗೆ ಎಚ್ಚರದಿಂದ ಪರಿಶೀಲಿಸಬೇಕು ಎಂದು ತಿಳಿಸುವುದಕ್ಕೆ.. ಆದರೆ ಬಿಜಾಪುರದಲ್ಲಿ ಚಕ್ರ ಸುತ್ತಿದ್ದು ಏನಾದರೂ ಇರಲಿ , ಆ ಘಟನೆಯ ಬಗ್ಗೆ ಸರ್ಕಾರಿ ಅಧಿಕಾರಿಗಳೂ ಮತ್ತಿತರರೂ ನಡೆದುಕೊಂಡ ರೀತಿ ತಪ್ಪು.

ಮುಂಬರಲಿರುವ ನಂಬಲಸಾಧ್ಯವೆನ್ನಿಸುವಂಥ ಮೂರನೆ ದರ್ಜೆಯ ಮುಖಾಮುಖಿಗಳಲ್ಲಿ ಈ ಅನುಬವಕ್ಕೆ ಒಳಗಾದವರು ಪದೇಪದೇ ಎದುರಿಸುವ ಸಮಸ್ಯೆ ಇದೇ. ಅಪನಂಬಿಕೆ!

## ಮುಂದಿನ ಭಾಗ 'ಫ್ಲೈಯಿಂಗ್ ಸಾಸರ್ಸ್' (೨)

ನಮ್ಮ ಕಲ್ಪನೆಗೆ ಊಹಿಸಲಸಾಧ್ಯವಾದ, ನಮ್ಮ ತಿಳುವಳಿಕೆಗೆ ನಂಬಲಸಾಧ್ಯವಾದ, ಆದರೂ ಅನಿವಾರ್ಯವಾಗಿ ವಿಜ್ಞಾನಿಗಳೆಲ್ಲ ನಂಬಬೇಕಾಗಿ ಬಂದಿರುವ ಮೂರನೆ ದರ್ಜೆಯ ಮುಖಾಮುಖಿಗಳಲ್ಲಿ ವಿಶ್ವವಿಖ್ಯಾತ ಘಟನೆಗಳನ್ನು ವ್ಯಾಪಕ ವಿವರಣೆ ವಿಶ್ಲೇಷಣೆಗಳೊಂದಿಗೆ ಕೊಡಲಾಗಿದೆ. ಅವುಗಳಲ್ಲಿ ಇಟಲಿ, ಬ್ರೆಜಿಲ್, ಕೆನಡಾ, ಅಮೆರಿಕಾದ ಐದು ಅತಿ ಪ್ರಖ್ಯಾತ ಕೇಸುಗಳ ತನಿಖೆ ವಿಶ್ಲೇಷಣೆಗಳೂ ಸೇರಿವೆ.

ಇಟಲಿ:-
ರಾವಿಯೋ ಹಳ್ಳಿಗೆ ಹೋದ ಪ್ರೊಫೆಸರ್ ಜೊಹಾನಿಸ್ ಪ್ರಾಕ್ತನ ಸಂಶೋಧಕ. ಅಲ್ಲಿ ಆತ ಹಠಾತ್ತಾಗಿ ಇದಿರಾದ ಆಕಾಶ ಲೋಕದ ಕುಬ್ಜರಿಂದ ಆತನಿಗಾದ ಆಘಾತ! ಈ ಘಟನೆ ಸುಳ್ಳೆಂದು ತಳ್ಳಿಹಾಕಲಸಾಧ್ಯವಾಗುವಂತೆ ದನ ಕಾಯುವ ಹುಡುಗ ಮ್ಯಾಕ್ಸಿಮೋಗೆ ಸಂಭವಿಸಿದ ಘಟನೆ. ಮೂಕನಂತಿದ್ದ ಮ್ಯಾಕ್ಸಿಮೋ ನೋಡಿ ತಾತ್ಸಾರದಿಂದ ಲೊಚಗುಟ್ಟಿದ ಆಕಾಶದ ಕುಳ್ಳರು!

ಅಮೆರಿಕಾ:-
ವಿಶ್ವವಿಖ್ಯಾತವಾಗಿರುವ ಹಾಪ್‌ಕಿನ್ಸ್ ವಿಲ್ಲಾ ಕೇಸ್. ಹಾಪ್‌ಕಿನ್ಸ್ ವಿಲ್ಲಾದ ಎಂಟು ಜನರಿಗೆ 'ಫ್ಲೈಯಿಂಗ್ ಸಾಸರ್'ಗಳಿಂದ ಇಳಿದ ವಿಚಿತ್ರ ಜೀವಿಗಳು ಕಾಟ ಕೊಟ್ಟಿದ್ದು. ಬಂದೂಕುಗಳಿಂದ ಈ ರಹಸ್ಯ ಜೀವಿಗಳನ್ನೆದುರಿಸಿದ ಹಾಪ್‌ಕಿನ್ಸ್ ವಿಲ್ಲಾದ ಎಂಟುಜನರೂ ಕೊನೆಗೇಕೆ ಪೋಲೀಸ್ ಸ್ಟೇಷನ್ನಿಗೆ ಓಡಿಹೋಗಬೇಕಾಗಿ ಬಂತು?

ಬ್ರೆಜಿಲ್:-
ವಿಜ್ಞಾನಿಗಳನ್ನೆಲ್ಲಾ ಇವತ್ತಿಗೂ ದಿಗ್‌ಭ್ರಾಂತರನ್ನಾಗಿ ಮಾಡಿರುವ ಬ್ರೆಜಿಲ್ಲಿನ ಹಳ್ಳಿಯ ರೈತ ಆ್ಯಂಟೋನಿಯೋ ವಿಲ್ಲಾಸ್ ಬೋಸ್‌ನ ಘಟನೆ. ಪರಲೋಕದ ಪ್ರೇಯಸಿಯೊಂದಿಗೆ ಹನಿಮೂನ್ ನಡೆಸುವುದು ಆತನಿಗೆ ಅನಿವಾರ್ಯವಾಗಿದ್ದೇಕೆ? ಈ ಅತಿ ರಹಸ್ಯಮಯ ಸಂಗತಿಯನ್ನು ಕಠೋರ ಪರೀಕ್ಷೆಯನಂತರವೂ ಸತ್ಯವೆಂದು ವಿಜ್ಞಾನಿಗಳು ನಂಬಬೇಕಾಗಿ ಬಂದದ್ದೇಕೆ? ಇದಕ್ಕೂ ಬೆಟ್ಟಿ ಮತ್ತು ಬೆರ್ನೆ ಕೇಸ್‌ಗೂ ಏನು ಸಂಬಂಧ?

ಕೆನಡಾ:-
ಬೆಟ್ಟಿ ಮತ್ತು ಡಾ|| ಬೆರ್ನೆ ದಂಪತಿಗಳ ಜೀವನದಲ್ಲಿ ಕೆಲವು ಘಂಟೆಗಳು ಹಠಾತ್ತಾಗಿ ಕಳೆದು ಹೋಗಿದ್ದು ಹೇಗೆ? ವಸ್ತುಗಳು ಕಳೆದು ಹೋದಹಾಗೆ ಕಾಲವೂ ಕಳೆದು ಹೋಗಲು ಸಾಧ್ಯವೆ? ಈ ಕಳೆದು ಹೋದ ಕಾಲದಲ್ಲಿ ಏನೇನು ರಹಸ್ಯಗಳಿದ್ದುವು. ವಿಜ್ಞಾನಿಗಳು ಕಳೆದುಹೋದ ಇದನ್ನು ಪತ್ತೆಹಚ್ಚಿದ್ದು ಹೇಗೆ? ಇದಕ್ಕೂ ಬ್ರೆಜಿಲ್ಲಿನ ಆಂಟೋನಿಯೋ ವಿಲ್ಲಾಸ್ ಬೋಸ್‌ನ ಘಟನೆಗೂ ಸಂಬಂಧವಿದೆಯೆ?

ಇದಲ್ಲದೆ ಆ್ಯಡಮ್ ಸ್ಕಿ ಆಕಾಶ ಯಾತ್ರಿಕರನ್ನು ಸಂಧಿಸಿ ಮಾ ತಾಡಲು ಯತ್ನಿಸಿದ ಪೂರ್ಣ ವೃತ್ತಾಂತ. ಆ್ಯಡಮ್ ಸ್ಕಿಯವರ ವಿಶ್ಲೇಷಣೆಗಳು. ಬೆಚ್ಚಿಬೀಳಿಸುವ, ನಮ್ಮ ವಿಚಾರ ಶಕ್ತಿಗಳಿಗೆ ಸವಾಲುಗಳಂತಿರುವ ಈ ಘಟನೆಗಳನ್ನು ಓದಿ. ಅಂತಿಮ ತೀರ್ಮಾನ ನಿಮ್ಮದೇ.

ಹೊಸ ವಿಜ್ಞಾನದ ಅರುಣೋದಯ

ವಿಶ್ವದಾದ್ಯಂತ  ಅಲ್ಲೋಲಕಲ್ಲೋಲ

'ಜುಲ್ಮೆ ಕ್ರೈಸಿಸ್'

'ಯು ,ಎಫ್ ,ಒ'ಗಳ ಮೂಲ ತಾರಾಮಂಡಲವೆ?

ಲೇಕನ್ ಹೀತ್ ನೆಲೆಯ ವಿಚಿತ್ರ ಘಟನೆಗಳು

ಮೌಂಟ್ ರೈನರ್ ಬಳಿಯ ಅಪಘಾತ

ಕ್ಯಾಪ್ಟನ್ ಮೆಂಟಲ್‌ನ ದುರಂತ

ಮೊದಲವರ್ಗದ ಮುಖಾಮುಖಿ

ಎಕ್ಸ್‌ಟರ್ ಊರಿನಲ್ಲಿ ನಡೆದದ್ದೇನು?

ಎಡ್ಗರ್ ಮತ್ತು ಸೋರ್ರ್ಸ್ ಅನುಭವಗಳು

ವಾಸ್ತವ ಅವಾಸ್ತವಗಳ ಅಂಚಿನಿಂದ

ಫಾದರ್ ಗಿಲ್‌ರತ್ತ ಕೈ ಬೀಸಿದರು

ಸುತ್ತಮುತ್ತಣ 'ಯು ,ಎಫ್ ,ಒ' ಸಂಗತಿಗಳು

